
ಮಾರ್ಚ್ 5, 2000 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ

ಭಾರತದ ಗೋಣು ಮುರಿಯಲು




ಕ್ಲಿಂಟನ್ ಬರುತ್ತಿದ್ದಾನೆ ಎಚ್ಚರ!



ಕಾಫಿ ಬೆಳೆಗಾರರ ಪಾಡು

ನಗರ ಪಾಲಿಕೆಯಲ್ಲಿ ದಲಿತರ ಹಣ ಲೂಟಿ



ಸಂಪಾದಕೀಯ

ಆಶಾದಾಯಕವಲ್ಲದ ರೈಲ್ವೆ ಬಜೆಟ್

ಕೇಂದ್ರ ರೈಲ್ವೆ ಸಚಿವೆ ಮಮತಾ ಬ್ಯಾನರ್ಜಿ ಮೊದಲ ಬಾರಿಗೆ ಮಂಡಿಸಿದ ಮುಂಗಡ ಪತ್ರ ದೇಶದ ಜನತೆಗೆ ಆಶಾದಾಯಕವಾಗೇನು ಇಲ್ಲ. ಪ್ರಯಾಣದರ ಹೆಚ್ಚಿಸದಿದ್ದರೂ, ಸಾಗಾಣಿಕ ದರವನ್ನು ಶೇ 5-7 ರಷ್ಟು ಹೆಚ್ಚಿಸಿರುವುದು ಸರಕುಗಳ ಮತ್ತು ಕೈಗಾರಿಕಾ ಉತ್ಪನ್ನಗಳ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದಲೇ ನಮ್ಮ ದೇಶದ ಬಂಡವಾಳಿಗರು ಸಹ ಮುಂಗಡ ಪತ್ರವನ್ನು ವಿರೋಧಿಸಿದ್ದಾರೆ. ಇದರ ಎಲ್ಲಾ ಹೊರೆ ಸಹಜವಾಗಿ ಜನಸಾಮಾನ್ಯರ ಮೇಲೆ ಬೀಳಲಿದೆ. ಎಣ್ಣೆಬೀಜ, ರಸಗೊಬ್ಬರದ ಮೇಲಿನ ಸಾಗಾಣಿಕೆ ದರವನ್ನು ಶೇಕಡ 11 ರಿಂದ 47 ರಷ್ಟು ಹೆಚ್ಚಿಸಿರುವುದು ರೈತರಿಗೆ ದೊಡ್ಡ ಆಘಾತವನ್ನುಂಟು ಮಾಡಿದೆ. 576 ಕೋಟಿ ರೂ. ಉಳಿತಾಯ ಬಜೆಟ್ ಎಂದು ತೋರಿಸಿದ್ದರೂ, ಇಲಾಖಾವಾರು ಯೋಜನೆಯನ್ನು ಗಮನದಲ್ಲಿರಿಸಿದರೆ 849 ಕೋಟಿ ರೂ. ಕೊರತೆ ಉಂಟಾಗುತ್ತದೆ. ಇದನ್ನು ಎಲ್ಲಿಂದ ಭರ್ತಿ ಮಾಡುವುದು ಎಂಬ ಬಗ್ಗೆ ಸ್ಪಷ್ಟತೆ ಇಲ್ಲ.

19 ಹೊಸ ರೈಲನ್ನು ಓಡಿಸಲು ನಿರ್ಧಾರವೇನೋ ಪ್ರಕಟಗೊಂಡಿದೆ. ಆದರೆ ಅತ್ಯಂತ ಹಳೆಯದಾದ ರೈಲು ಮಾರ್ಗಗಳನ್ನು ಉತ್ತಮಪಡಿಸಲು ಹಾಗೂ ಹೊಸ ಹಳಿ, ಸಿಗ್ನಲ್ ವ್ಯವಸ್ಥೆಯಂತಹ ಮೂಲಭೂತ ಸೌಕರ್ಯ ಹೆಚ್ಚಿಸಿ-ಸುಧಾರಿಸಲು ಸೂಕ್ತ ಯೋಜನೆಗಳೇ ಇಲ್ಲ.

ಕಳೆದ ವರ್ಷ ದೊಡ್ಡ ಪ್ರಮಾಣದಲ್ಲಿ ರೈಲುಗಳು ಹಳಿ ತಪ್ಪಿ ಭಾರೀ ದುರಂತ ಸಂಭವಿಸಿದೆ. ಹಳಿಗಳನ್ನು ಸರಿಯಾಗಿ ದುರಸ್ಥಿ ಮಾಡಿ ರೈಲ್ವೇ ಪ್ರಯಾಣದಲ್ಲಿ ನಂಬಿಕೆ ಬರುವಂತೆ ಮಾಡಲು ಸಾಕಷ್ಟು ಹಣ ವ್ಯಯ ಮಾಡಿಲ್ಲ. ಪ್ರಯಾಣಿಕರ ಬಗ್ಗೆ ತೋರಿಸಬೇಕಾದ ಕಾಳಜಿ ವ್ಯಕ್ತಗೊಂಡಿಲ್ಲ.


ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಅದು ನಿರಾಶದಾಯಕವಾದ ಬಜೆಟ್. ಒಂದೆರೆಡು ರೈಲುಗಳನ್ನು ಓಡಿಸುವುದನ್ನು ಬಿಟ್ಟರೆ ರಾಜ್ಯದಲ್ಲಿ ಬಹಳ ಕಾಲದಿಂದ ನೆನೆಗುದಿಗೆ ಬಿದ್ದಿರುವ ಕೊಟ್ಟೂರು-ಹೊಸಪೇಟೆ, ಕೊಪ್ಪಳ-ರಾಯಚೂರು ಮುಂತಾದ ಯೋಜನೆಗಳ ಕಾರ್ಯಗತದ ಬಗ್ಗೆ ಪ್ರಸ್ತಾಪವೇ ಇಲ್ಲ. ಈಗಾಗಲೇ ಬ್ರಾಡ್‌ಗೇಜ್‌ಗೆ ಪರಿವರ್ತನೆ ಹಾದಿಯಲ್ಲಿರುವ ಅರಸಿಕೆರೆ, ಮಂಗಳೂರು ಕೆಲಸವನ್ನು ತೀಕ್ಷ್ಣಗೊಳಿಸಬೇಕು. ಮೈಸೂರು, ಮಡಿಕೇರಿ, ಮಂಗಳೂರು ರೈಲ್ವೆ ಮಾರ್ಗಕ್ಕಾಗಿ ರಾಜ್ಯ ಸರ್ಕಾರದ ಕೋರಿಕೆ ಗಾಳಿಯಲ್ಲೇ ಹಾರಿಹೋಗಿದೆ. ಹುಬ್ಬಳ್ಳಿ-ಬೆಂಗಳೂರು ರೈಲ್ವೆ ವಲಯದ ವಿವಾದ ಇತ್ಯರ್ಥವೇ ಆಗದಿರುವಾಗ ರಾಯಚೂರು-ಗುಲಬರ್ಗದ ವಲಯ ರಚಿಸುವುದು ಒಂದು ಪೊಳ್ಳು ಆಶ್ವಾಸನೆಯಾಗಿದೆ.

ಕೇರಳ, ಉತ್ತರ ಪ್ರದೇಶ, ಬಿಹಾರ ಮತ್ತಿತರ ರಾಜ್ಯಗಳ ಬಗ್ಗೆ ಗಮನ ಹರಿಸಿಲ್ಲ. ಕೇರಳವನ್ನು ನಿರ್ಲಕ್ಷಿಸಲಾಗಿದೆ ಎಂದು ಈ ರಾಜ್ಯದ ಸಂಸತ್ ಸದಸ್ಯರು ಪ್ರತಿಭಟಿಸಿ ಲೋಕಸಭೆಯಿಂದ ಹೊರಬಂದಿದ್ದಾರೆ. ಪಶ್ಚಿಮ ಬಂಗಾಳಕ್ಕೆ ಕೆಲವು ಹೊಸ ಮಾರ್ಗಗಳನ್ನು ಸೇರಿಸಿದ್ದರೂ ಅದು ಎಷ್ಟರ ಮಟ್ಟಿಗೆ ಜಾರಿಗೊಳ್ಳುವುದೆಂಬ ಖಾತರಿ ಇಲ್ಲ.

ಈ ನಡುವೆ ಬಿಜೆಪಿ-ಕೂಟದ ಉದಾರೀಕರಣದ ಮಂತ್ರದಂತೆ ಕೆಲವು ರೈಲ್ವೆ ವಲಯಗಳಲ್ಲಿ ಖಾಸಗಿ ಉದ್ದಿಮೆದಾರರಿಗೆ ಅವಕಾಶ ನೀಡುವ ಪ್ರಸ್ತಾಪವಿದೆ.

ಹನ್ನರಡನೇ ತರಗತಿವರೆಗಿನ ಹೆಣ್ಣು ಮಕ್ಕಳಿಗೆ ರಿಯಾಯಿತಿ. ಕಾರ್ಗಿಲ್ ಯುದ್ಧದಲ್ಲಿ ಮಡಿದ ಸೈನಿಕರ ವಿಧವೆ ಪತ್ನಿಯರಿಗೆ ಕೆಲವು ರಿಯಾಯಿತಿ ಹಾಗೂ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಒಂದು ವರ್ಷಕ್ಕೆ ಕೆಲವು ರೈಲ್ವೆಗಳು ರಿಯಾಯಿತಿ ಘೋಷಿಸಿದ್ದಾರೆ. ಇಷ್ಟನ್ನು ಒಟ್ಟಾರೆ ಹೇಳಿಕೊಳ್ಳುವಂತಹ ವಿಶೇಷತೆ ಈ ಬಜೆಟ್‌ನಲ್ಲಿಲ್ಲ.

ರೈಲ್ವೆ ಮುಂಗಡ ಪತ್ರದ ಮೇಲೆ ಸಂಸತ್‌ನಲ್ಲಿ ಚರ್ಚೆ ನಡೆಯುವಾಗಲಾದರೂ ರೈಲ್ವೆ ಮಂತ್ರಿ ಮಮತಾ ಬ್ಯಾನರ್ಜಿ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇವೆ.



ವಿದೇಶದಿಂದ ಅನಿಯಂತ್ರಿಕ ಆಮದಿಗೆ ಅನುಮತಿ

ದೇಶದ ಹಿತಾಸಕ್ತಿಯ ಪೂರ್ಣಾಹುತಿ

ಪೂರ್ಣಾಹುತಿ ಎಂದರೆ ಬಲಿಪಶುಗಳನ್ನು ಹೋಮದಲ್ಲಿ ಹಾಕಿ ಸುಡುವುದು ಎಂದರ್ಥ ವಾಜಪೇಯಿ ಸರ್ಕಾರ ಅದನ್ನೇ ಮಾಡಿರುವುದು ಯಾವುದೇ ಸದ್ದು ಗದ್ದಲವಿಲ್ಲದೆ ಈ ಸರ್ಕಾರ ಇಂತಹ ಕೆಲಸಗಳನ್ನು ಮಾಡುತ್ತದೆ. ಆಳುವ ವರ್ಗದ ಹಿಡಿತದಲ್ಲಿರುವ ಸಮೂಹ ಮಾಧ್ಯಮಗಳೂ ಕ್ರೂರ ಮೌನ ವಹಿಸಿವೆ. ಪರಿಣಾಮ ಜನಸಾಮಾನ್ಯರ ಮೇಲೆ ಆಗಲಿದೆ.

ವಿಶ್ವ ವ್ಯಾಪಾರದ ಸಂದರ್ಭದಲ್ಲಿ ಬರುವ ವಿಷಯ ಈ ಪ್ರಾಮಾಣಾತ್ಮಕ ನಿರ್ಬಂಧ ಎನ್ನುವುದು. ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಆಗುವ ಆಮದು ರಫ್ತುಗಳ ಮೇಲೆ ಹಿಡಿತವಿರಿಸಲು ಈ ಪ್ರಮಾಣಾತ್ಮಕ ನಿರ್ಬಂಧಗಳನ್ನು ಬಳಸಲಾಗುತ್ತದೆ. ಇದು ದೇಶಗಳು ತಮ್ಮ ಆರ್ಥಿಕವನ್ನು ವಿದೇಶೀ ದಾಳಿಗಳಿಂದ ರಕ್ಷಿಸಿಕೊಳ್ಳಲು ನೆರವಾಗುತ್ತದೆ. ಉದಾಹರಣೆಗೆ ಭಾರತದೊಳಕ್ಕೆ ಹಲವು ಬಳಕೆ ವಸ್ತುಗಳನ್ನು ಆಮದು ಮಾಡಿಕೊಳ್ಳುವಲ್ಲಿ ನಿರ್ಬಂಧಗಳಿವೆ. ದೇಶೀ ಉದ್ದಿಮೆಗಳ ದೇಶಧ ಒಟ್ಟಾರೆ ಹಿತಾಸಕ್ತಿಗಳನ್ನು ಕಾಯಲು ಇದನ್ನು ಹೇರಲಾಗುತ್ತದೆ ಉದಾಹರಣೆಗೆ ಭಾರತದೊಳಕ್ಕೆ ಉಕ್ಕನ್ನು ಮುಕ್ತವಾಗಿ ಆಮದು ಮಾಡಿಕೊಳ್ಳುವಂತಿಲ್ಲ ಹಾಗೆಯೇ ಕೆಲ ಸರಕುಗಳ ಆಮದು ಇಂತಿಷ್ಟು ಪ್ರಮಾಣದವರೆಗೆ ಮಾತ್ರ ಎಂದು ವಿಧಿಸಲಾಗಿದೆ. ಆಮದು ಮಾಡಿಕೊಳ್ಳುವವರು ಲೈಸನ್ಸ್ ಪಡೆಯಬೇಕಾಗುತ್ತದೆ. ಇದು ಪ್ರಮಾಣಾತ್ಮಕ ನಿರ್ಬಂಧ.



ಅಮೆರಿಕದ ಅಧಿಕಾರಿ ಲಾರೆನ್ಸ್ ಸಮ್ಮರ್ಸ್‌ರೊಂದಿಗೆ ಹಣಕಾಸು ಸಚಿವ ಯಶವಂತ ಸಿನ್ಹಾ

ವಿಶ್ವ ವ್ಯಾಪಾರ ಸಂಸ್ಥೆಯ ಒಪ್ಪಂದದ ಪ್ರಕಾರ ಈ ಪ್ರಮಾಣಾತ್ಮಕ ನಿರ್ಬಂಧಗಳನ್ನು 2004 ನೇ ಇಸವಿಯ ಹೊತ್ತಿಗೆ ತೆಗೆದು ಹಾಕಬೇಕಾಗಿತ್ತು. ಆದರೆ ವಾಜಪೇಯಿ ಸರ್ಕಾರ 2001ನೇ ಇಸವಿಯ ಹೊತ್ತಿಗೆ ಇದನ್ನು ಪೂರ್ತಿಯಾಗಿ ತೆಗೆದು ಹಾಕುವ ಒಪ್ಪಂದ ಮಾಡಿಕೊಂಡಿದೆ. ಈ ಒಪ್ಪಂದದ ಪ್ರಕಾರ 714 ಸರಕುಗಳ ಮೇಲಿನ ಪ್ರಮಾಣಾತ್ಮಕ ನಿರ್ಬಂಧಗಳನ್ನು ಬರುವ ಏಪ್ರಿಲ್ ಒಂದನೇ ತಾರೀಖಿನೊಳಗಾಗಿ ತೆಗೆದು ಹಾಕಲಾಗುತ್ತದೆ. ಅಲ್ಲಿಂದ ಮುಂದಿನ ಒಂದು ವರ್ಷಗೊಳಗೆ ಇನ್ನೊಂದು 715 ಸರಕುಗಳ ಮೇಲಿನ ನಿರ್ಬಂದಗಳನ್ನು ತೆಗೆದು ಹಾಕಲಾಗುತ್ತದೆ.

ಈ ಸರಕುಗಳ ಪಟ್ಟಿಯಲ್ಲಿ ಮೀನು, ಹಾಲು, ತೆಂಗು, ಕಾಫಿ, ಚಹ, ರಾಗಿ ಹಾಗೂ ಇತರ ಹಲವು ಧಾನ್ಯಗಳು ಸೇರಿವೆ.

ಹೀಗೆ ಪ್ರಮಾಣಾತ್ಮಕ ನಿರ್ಬಂಧಗಳನ್ನು ತೆಗೆದು ಹಾಕಿದರೆ ಏನಾಗಬಹುದು ಎಂಬ ಪ್ರಶ್ನೆ ಏಳುತ್ತದೆ ಪರಿಣಾಮಗಳನ್ನು ಊಹಿಸಬಹುದು ಈರುಳ್ಳಿ ಟೊಮ್ಯೊಟೊಗಳ ಬೆಲೆ ಗಗನಕ್ಕೆ ಏರಿದ್ದು ಪಾತಾಳಕ್ಕೆ ಇಳಿದದ್ದು ನೆನಪಿದೆಯಲ್ಲವೆ? ಹಾಗೆ ಪ್ರತಿಯೊಂದು ಕೃಷಿ ಉತ್ಪನ್ನದ ವಿಷಯದಲ್ಲೂ ಆಗತೊಡಗಿದರೆ ದೇಶದ ಜನಜೀವನ ಏನಾಗಬಹುದು? ಸಿರಾದಲ್ಲಿ ಕಡಲೇಕಾಯಿಯ ಬೆಲೆಯ ಕುಸಿತದಿಂದುಟಾದ ಗಲಭೆ ಗೋಲಿಬಾರ್ ಸಾವುಗಳ ನೆನಪಿದೆಯಲ್ಲವೆ. ದಿನ ನಿತ್ಯ ಹಲವು ಪಟ್ಟಣ ಹಳ್ಳಿಗಳಲ್ಲಿ ಇಂತಹ ಸ್ಥಿತಿ ಉಂಟಾಗುವಂತಾದರೆ? ಇಂತಹ ಸ್ಥಿತಿ ಉಂಟಾಗಬೇಕಾದರೆ ದೇಶದ ಬಡ ರೈತ ಕೃಷಿ ಕೂಲಿಕಾರ ಕಾರ್ಮಿಕ ಎಂತಹ ನೋವು ಅನುಭವಿಸುತ್ತಾನೆ? ಅದು ದೇಶದ ತುಂಬೆಲ್ಲ ಹರಡುವಂತಾದರೆ? ನೀವೇ ಇಂತಹ ಪರಿಸ್ಥಿತಿಯನ್ನು ಊಹಿಸಿ ಕೊಳ್ಳಿ.

ಇದಕ್ಕೆ ಇನ್ನೊಂದು ಮುಖವಿದೆ. ಅದು ದೇಶಕ್ಕೆ ದೊಡ್ಡ ಲಾಭವಾಗುವ ವಾದ. ಹೇಗೆ ಎಂದರೆ ವಿದೇಶಗಳಿಂದ ಅತ್ಯುತ್ತಮ ಬಳಕೆ ವಸ್ತುಗಳೂ ಆಮದಾಗುತ್ತವೆ. ದೇಶದ ಜನರಿಗೆ ಉತ್ತಮ ಬಳಕೆ ವಸ್ತುಗಳು ಕಡಿಮೆ ಬೆಲೆಗೆ ದೊರೆಯುತ್ತದೆ ಎಂಬುದು.

ಇದಕ್ಕೆ ನಿಜದಲ್ಲಿ ಎರಡು ಆಯಾಮಗಳಿವೆ ದೇಶದ ಶ್ರೀಮಂತರಿಗೆ ಉತ್ತಮ ಭೋಗ ವಸ್ತುಗಳು ಕಡಿಮೆ ದರದಲ್ಲಿ ದೊರೆಯುತ್ತವೆ ಎಂಬುದು ನಿಜ. ಆದರೆ ಶ್ರೀಮಂತರ ಪ್ರಮಾಣ ಎಷ್ಟು? ಎರಡನೆಯ ಆಯಾಮ ದೇಶೀ ಉದ್ದಿಮೆಗಳ ಮೇಲಾಗುವ ಪರಿಣಾಮ ದೇಶೀ ಉದ್ದಿಮೆಗಳು ಈ ಸ್ಪರ್ಧೆಯನ್ನು ತಡೆದುಕೊಳ್ಳಲಾರವು. ಉದ್ದಿಮೆಗಳು ಮುಚ್ಚಿದರೆ ಕಾರ್ಮಿಕರು ಕೆಲಸ ಕಳೆದುಕೊಳ್ಳುತ್ತಾರೆ. ನಿರುದ್ಯೋಗ, ಬಡತನ ಹೆಚ್ಚಾಗುತ್ತದೆ.

ಮೇಲಿನ ಎರಡು ತರಹದ ಪರಿಣಾಮಗಳನ್ನು ಒಟ್ಟಾಗಿ ಊಹಿಸಿಕೊಳ್ಳಿ ರೈತರ ಬೆಳೆಗೆ ಉತ್ತಮ ಬೆಲೆಯ ಖಾತರಿಯಿಲ್ಲ ಕೃಷಿ ಕೂಲಿಕಾರರಿಗೆ ಕೆಲಸ ಸಿಗುವ ಭರವಸೆಯಿಲ್ಲ ಪಟ್ಟಣದ ಕಾರ್ಮಿಕರಿಗೂ ಕೆಲಸ ಉಳಿವ ಭರವಸೆಯಿಲ್ಲ ಮಾರುಕಟ್ಟೆಯಲ್ಲಿ ಸಿಗುವಂತಹದ್ದನ್ನು ಕೊಳ್ಳುವ ಶಕ್ತಿ ಬಹುತೇಕ ಜನರಿಗಿಲ್ಲ ಇಂತಹ ಪರಿಸ್ಥಿತಿ ಉಂಟಾದರೆ ಪ್ರಮಾಣಾತ್ಮಕ ನಿರ್ಬಂದಗಳನ್ನು ತೆಗೆಯುವುದರಿಂದ ಇಂತಹ ಸ್ಥಿತಿ ಉಂಟಾಗುತ್ತದೆ. ಇದು ಗೊತ್ತಿದ್ದೂ ವಾಜಪೇಯಿ ಸರ್ಕಾರ ಇಂತಹ ಕ್ರಮವನ್ನು ಕೈಗೊಂಡಿದೆ.

ಅಮೇರಿಕ ಭಾರತ ಸರ್ಕಾರದ ಮೇಲೆ ಮೊದಲಿನಿಂದಲೂ ಈ ವಿಷಯದಲ್ಲಿ ಒತ್ತಡ ಹೇರುತ್ತಲೇ ಬಂದಿತ್ತು. ಈ ಸಾರಿ ಅದು ವಿಶ್ವ ವ್ಯಾಪಾರ ಸಂಸ್ಥೆಯ ವಿವಾದ ಪರಿಹಾರ ಸಮಿತಿಯ ಮುಂದೆ ಹೋಯಿತು. ಈ ಮೊದಲು ಯುರೋಪಿನ ಸಮುದಾಯ ಆಸ್ಟ್ರೇಲಿಯಾ ಸ್ವಿಟ್ಜರ್‌ಲ್ಯಾಂಡುಗಳು ಭಾರತದ ವಿರುದ್ಧ ದೂರಿದ್ದವು. ಭಾರತ ಮಾತುಕತೆಗಳ ಮೂಲಕ ಆರು ವರ್ಷಗಳ ಸಮಯಾವಕಾಶ ಪಡೆಯಿತು.

ವಿಶ್ವ ವ್ಯಾಪಾರ ಸಂಘಟನೆಯ ನಿಯಮಗಳ ಪ್ರಕಾರ ಇದು ಅಮೇರಿಕಕ್ಕೂ ಅನ್ವಯಿಸುತ್ತಿತ್ತು. ಅಮೇರಿಕ ಇದರ ವಿರುದ್ಧ ದೂರು ಸಲ್ಲಿಸಿತು. ಆಗ ವಿಶ್ವ ಸಂಸ್ಥೆಯ ಸಮಿತಿ ಆರು ವರ್ಷಗಳು ತೀರ ದೊಡ್ಡ ಅವಧಿಯಾದ್ದರಿಂದ ಬೇಗ ಪ್ರಮಾಣಾತ್ಮಕ ನಿರ್ಭಂಧಗಳನ್ನು ತೆಗೆಯಬೇಕೆಂದಿತು.

ವಾಜಪೇಯಿ ಸರ್ಕಾರ ಈ ವಿಷಯದಲ್ಲಿ ಹೆಚ್ಚಿನ ಪ್ರಯತ್ನಗಳನ್ನೇನೂ ಮಾಡದೆ ಸಂಸತ್ತಿನಲ್ಲೂ ಕೇಳದೆ ಪ್ರಮಾಣಾತ್ಮಕ ನಿರ್ಬಂಧಗಳನ್ನು 2001ನೇ ಇಸವಿಯ ಏಪ್ರಿಲ್ ಒಂದನೇ ತಾರೀಖಿನೊಳಗೆ ತೆಗೆದು ಹಾಕಲು ಒಪ್ಪಿಕೊಂಡಿತು.

ಹೊಸ ಆಮದು ರಫ್ತು ನೀತಿಯನ್ನು ರೂಪಿಸಿ ಘೋಷಿಸುವ ಮೊದಲೇ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯ್ತು.

ಇಂತಹ ನಿರ್ಧಾರದ ಪರಿಣಾಮಗಳು ಬಡಜನರ ಹೊಟ್ಟೆಯ ಮೇಲೆ ಹೊಡೆಯುವುದಾದರೆ ಬಡಜನ ಪ್ರತಿಭಟನೆಯ ಹೋರಾಟದ ನಿರ್ಧಾರವನ್ನು ಕೈಗೊಂಡು ಬೀದಿಗಿಳಿಯಲೇ ಬೇಕಾಗುತ್ತದೆ ಅದೊಂದೇ ವಾಜಪೇಯಿ ಸರ್ಕಾರಕ್ಕೆಜನ ನೀಡುವ ಉತ್ತರ ಅಲ್ಲವೆ?.

ಕಾಫಿ ಬೆಳೆಗಾರರ ಪಾಡು

"ಕೊಡಗು ಕೃಷಿ ಪ್ರಧಾನ ಜಿಲ್ಲೆ ಇಲ್ಲಿಯ ಜನ ಮುಖ್ಯವಾಗಿ ಭತ್ತ ಕಾಫಿ, ಏಲಕ್ಕಿ, ಕರಿಮೆಣಸು, ಕಿತ್ತಳೆ ಮುಂತಾದ ಕೃಷಿ ಉತ್ಪನ್ನಗಳಿಂದ ಜೀವಿಸುವವರಾಗಿದ್ದಾರೆ. ಪ್ರಕೃತಿಯ ವೈಪರೀತ್ಯದಿಂದಾಗಿ ರೋಗಗಳ ಹಾವಳಿಯಿಂದಾಗಿ ಈ ಬೆಳೆಗಳಿಗೆ ಸಾಕಷ್ಟು ಹಾನಿಯಾಗಿದ್ದು. ಉತ್ಪಾದನೆ ಕುಂಠಿತವಾಗಿದೆ. ಏಲಕ್ಕಿ, ಕಿತ್ತಳೆ ಬೆಳೆಗಳ ನಾಶದಿಂದಾಗಿ ಜಿಲ್ಲೆಯ ಜನ ಮುಖ್ಯವಾಗಿ ಕಾಫಿಯನ್ನು ಅವಲಂಬಿಸಬೇಕಾಗಿದೆ. ಕೃಷಿಗೆ ಅಗತ್ಯವಾದ ಗೊಬ್ಬರ. ಕೀಟ ನಾಶಕಗಳ ಬೆಲೆ ಏರಿಕೆ ಕಾರ್ಮಿಕರ ಜೀವನಾವಶ್ಯಕ ವಸ್ತುಗಳ ಬೆಲೆ ಏರಿರುವುದರಿಂದ ಸ್ವಾಭಾವಿಕವಾಗಿಯೇ ಕೂಲಿ ಹೆಚ್ಚಾಗಿದೆ. ಈ ಸಂದರ್ಭದಲ್ಲೇ ಕಾಫಿಗೆ ಬೆಲೆ ಕುಸಿಯುತ್ತಿದೆ. ಇದು ರೈತರನ್ನು ವಂಚನೆಗೆ ಒಳಗಾಗಿಸಿದೆ. ಈ ಬಗ್ಗೆ ಚರ್ಚಿಸಿ ಹೋರಾಟ ಸಂಘಟಿಸಲು ರೈತರು ಸಮಾವೇಶ ಕರೆಯುವುದಾಗಿದೆ. ರೈತರ ಈ ಬೆಳೆಗಳಿಗೆ ಬೆಂಬಲ ಬೆಲೆ ಘೋಷಣೆಯಾಗಬೇಕು ಎಂದು ಭಾ.ಜ.ಪದ ಕೃಷಿ ಮೋರ್ಛಾದ ಮುಖಂಡ ಶ್ರೀ ರವಿ ಬಸಪ್ಪನವರು ಹೇಳಿಕೆ ನೀಡಿರುವುದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ತನ್ನ ಈ ಹೇಳಿಕೆಯಲ್ಲಿ ಶ್ರೀಯುತರು ಈ ಪರಿಸ್ಥಿತಿಗೆ ಕಾರಣರಾರೆಂದು, ಏನೆಂದು ವಿವರಿಸುತ್ತಿಲ್ಲ.

ಭತ್ತ, ಕಾಫಿಗಳ ಬೆಲೆ ಕುಸಿಯಲು ಕೃಷಿಗೆ ಅಗತ್ಯವಾದ, ರೈತ ನಿತ್ಯ ಉಪಯೋಗಿಸುವ ವಸ್ತುಗಳ ಬೆಲೆ ನಿರಂತರ ಏರಲು ಕಾರಣ ಕೇಂದ್ರದಲ್ಲಿ ಅಧಿಕಾರಾರೂಡ ಪಕ್ಷ ಹಾಗೂ ಪಕ್ಷಗಳು ಅನುಸರಿಸುತ್ತಾ ಬಂದ ನೀತಿಗಳೇ ಅಲ್ಲವೇ?

1991 ರಿಂದ ರಾಜ್ಯದಲ್ಲಿ ಜಾರಿಗೆ ಬಂದ ಜಾಗತೀಕರಣ ಮುಕ್ತ ಮಾರುಕಟ್ಟೆಯ ಚಿಂತನೆಯ ಪ್ರಚಾರವಾಗಿತ್ತು. ವ್ಯಾಪಾರಿಗಳು ಮತ್ತು ದೊಡ್ಡ ವ್ಯಾಪಾರಿಗಳ ಏಜಂಟರುಗಳ ಈ ಪ್ರಚಾರದ ಅಬ್ಬರಕ್ಕೆ ಪ್ರಭಾವಿತರಾದ ಸಾಮಾನ್ಯ ಬೆಳೆಗಾರರು ಇದನ್ನು ಬೆಂಬಲಿಸಿದರು. ಭಾ.ಜ.ಪ.ವನ್ನೊಳಗೊಂಡು ಬಂಡವಾಳ ಶಾಹಿ ಪಕ್ಷಗಳ ಈ ಮುಕ್ತ ಮಾರುಕಟ್ಟೆ ಘೋಷಣೆಗೆ ಬೆಂಬಲ ನೀಡಿದ್ದರು.

ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷವೊಂದೇ ಈ ಬಗ್ಗೆ ಸ್ಪಷ್ಟ ಎಚ್ಚರ ನೀಡಿತ್ತು. ಈ ವ್ಯವಸ್ಥೆಯಲ್ಲಿ ಬಡ ಮಧ್ಯಮ ಕಾಫಿ ಬೆಳೆಗಾರರು ವ್ಯಾಪಾರಿಗಳ ಅಂತರಾಷ್ಟ್ರೀಯ ಮಾರುಕಟ್ಟೆಯ ಏರುಪೇರುಗಳಿಗೆ ಬಲಿ ಪಶುಗಳಾಗುತ್ತಾರೆಂದು ಮುನ್ನೆಚ್ಚರಿಕೆ ಪಕ್ಷ ನೀಡಿತ್ತು. ಇಂದಿನ ಬೆಳವಣಿಗೆಗಳು ಪಕ್ಷದ ಮುನ್ನೆಚ್ಚರಿಕೆಯನ್ನು ಧೃಡ ಪಡಿಸುತ್ತಿದೆ.

ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಉತ್ಪಾದನಾ ಪ್ರಕ್ರಿಯೆ ಕುರುಡು ಪ್ರಕ್ರಿಯೆಯಾಗಿದ್ದು ಉತ್ಪಾದನೆಯ ಏಕೋದ್ದೇಶ ಮಾರುಕಟ್ಟೆ ಎಂದು ಇದರಿಂದ ಉತ್ಪಾದನೆ ಬೇಡಿಕೆಗಿಂತಲೂ ಹೆಚ್ಚಾಗಿ ಉತ್ಪಾದನೆಯ ಬೆಲೆ ಕುಸಿತವಾಗುವುದೆನ್ನುವುದನ್ನು ಹಿಂದೆ ವಿವರಿಸಿದ್ದೆವು ಈ ಬಾರಿ ಇದು ಸಂಭವಿಸುತ್ತದೆ ಎಂದು ಕಂಡು ಬಂದಿದೆ. ಕಾಫಿ ಉತ್ಪನ್ನ ಬೇಡಿಕೆಗಿಂತಲೂ ಹೆಚ್ಚಾಗಿದೆ ಎಂದು ತಜ್ಞರು ಹೇಳಿಕೆ ನೀಡಿದ್ದಾರೆ.

1999-2000 ಸಾಲಿನಲ್ಲಿ ವಿಶ್ವದಲ್ಲಿ 107 ಮಿಲಿಯನ್ ಚೀಲ ಕಾಫಿ ಉತ್ಪಾದನೆ ಗೊಂಡಿದ್ದು ಮಾರುಕಟ್ಟೆಯಲ್ಲಿ ಬೇಡಿಕೆಯು 102 ಮಿಲಿಯನ್ ಚೀಲಕ್ಕೆ ನಿಂತಿದೆ ಸುಮಾರು 5 ಮಿಲಿಯನ್ ಚೀಲ ಹೆಚ್ಚು ಉತ್ಪಾದನೆಯಾಗಿದೆ. ಜತೆಗೆ ಈಗಾಗಲೇ ಸುಮಾರು. 18 ಮಿಲಿಯನ್ ಚೀಲ ವ್ಯಾಪಾರಿಗಳಲ್ಲಿ ದಾಸ್ತಾನಾಗಿದ್ದು ಇದು 12 ವಾರಗಳ ಬಳಕೆ ಸಾಕಾಗಿದೆ ಈ ಹಿನ್ನೆಲೆಯಲ್ಲಿ ಬೆಲೆ ಕುಸಿಯುವುದರಲ್ಲಿ ಸಂಶಯ ವಿಲ್ಲ ಜೊತೆಗೆ ಮುಂದೆ ಬ್ರೆಜಿಲ್‌ನಲ್ಲಿ ಕಾಫಿ ಹೆಚ್ಚಾಗಿ ಉತ್ಪಾದನೆಯಾಗಲಿದ್ದು ಎಲ್ಲಾ ರೀತಿಯಲ್ಲೂ ಬೆಳೆಗಾರನಿಗೆ ಆತಂಕ ಉಂಟಾಗಿದೆ ಎಂದಿದ್ದಾರೆ.

ಅಲ್ಲದೆ 2000 ಮತ್ತು 2001 ರಲ್ಲಿ ಬ್ರೆಜಿಲ್‌ನಲ್ಲಿ 30 ಮಿಲಿಯನ್ ಚೀಲ ಕಾಫಿ ಉತ್ಪಾದನೆಯಾಗುವ ಕುರಿತು ಅಂದಾಜಿಸಲಾಗಿದ್ದುಮಾರುಕಟ್ಟೆಯ ಬೇಡಿಕೆ ಇದರಿಂದ ಸಮನಾಗಲಿದೆ. ವಿಶ್ವದಲ್ಲಿ ಶೇ. 30 ರಷ್ಟು ಪ್ರಮಾಣದಲ್ಲಿ ಕಾಫಿ ಉತ್ಪಾದಿಸುವ ಬ್ರೆಜಿಲ್ 40 ಮಿಲಿಯನ್ ಕಾಫಿ ಚೀಲ ಉತ್ಪಾದಿಸಿದಲ್ಲಿ ಮಾರುಕಟ್ಟೆಯಲ್ಲಿ ಅಸಮತೋಲನವುಂಟಾಗಲಿದ್ದು ಭಾರತದ ಪಾಲಿಗೆ ಮಾರಕವಾಗಲಿದೆ ಎಂದಿದ್ದಾರೆ ಕಾಫಿ ಮಂಡಳಿಯ ನಿರ್ದೇಶಕರು.

ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದರಿಂದಾಗುವ ಬಿಕ್ಕಟ್ಟನ್ನು ಭಾರತದಂತಹ ನಗಣ್ಯ ದೇಶವೇ ಹೊರ ಬೇಕಾಗುವುದೆನ್ನುವುದರಲ್ಲಿ ಸಂಶಯವಿಲ್ಲ.

ಇದರ ಭಾಗವಾಗಿಯೆ ಈ ಸರಕಾರ ಅಮೇರಿಕ ದೊಂದಿಗೆ ಒಪ್ಪಂದ ಮಾಡಿ ಕೊಂಡಿದ್ದು ಕೃಷಿ ಉತ್ಪನ್ನಗಳನ್ನೊಳಗೊಂಡು 2000ಕ್ಕೂ ಮೇಲ್ಪಟ್ಟು ಸರಕುಗಳನ್ನು ದೇಶಕ್ಕೆ ಅನಿರ್ಬಂದಿತ ಅಮದು ಮಾಡಿಕೊಳ್ಳಲು ಒಪ್ಪಿದ್ದಾರೆ ಹೀಗೆ ರಬ್ಬರ್ ಮೊದಲಾದ ಕೃಷಿ ಉತ್ಪನ್ನಗಳು ಶೀಘ್ರದಲ್ಲೆ ನಮ್ಮ ದೇಶವನ್ನು ಪ್ರವೇಶಿಸುತ್ತಿದ್ದು, ಕಾಫಿಯ ಪ್ರವೇಶಕ್ಕಿರುವ ನಿರ್ಬಂಧವನ್ನು ತೆಗೆದು ಹಾಕಲಾಗಿದೆ. ಈ ದೇಶದ ರೈತರನ್ನ, ಮಧ್ಯಮ ವಿಭಾಗದ ಕೈಗಾರಿಕೆಗಳನ್ನು ನಾಶದ ಹಾದಿಗೆ ಕೊಂಡೊಯ್ಯುತ್ತಿರುವ ವಾಜಪೇಯಿ ಜಸ್ವಂತ್ ಸಿಂಗ್ ಕೂಟ ಕಾಫಿಗೆ ಬೆಂಬಲ ಬೆಲೆ ಘೋಷಿಸುವುದೆಂದು ಆಶಿಸುವುದು ಮೂರ್ಖತನವಲ್ಲವೇ?

ಆದ್ದರಿಂದ ಕಾಫಿಗೆ ಬೆಂಬಲ ಬೆಲೆ ಘೋಷಿಸುವಂತೆ ಪ್ರೇರೇಪಿಸಲು ಭಾ.ಜ.ಪ. ನೇತೃತ್ವದ ಕೇಂದ್ರ ಸರಕಾರದ ವಿರುದ್ಧ ಹೋರಾಟ ಸಂಘಟಿಸಲು ಕೃಷಿ ಮುಖಂಡ ರವಿ ಬಸಪ್ಪನವರಿಗೆ ಸಾಧ್ಯವೇ? ಧೈರ್ಯವಿದೆಯೆ? ಅವರೇ ಉತ್ತರಿಸಬೇಕು ಇಲ್ಲದಿದ್ದರೆ ಮಗುವನ್ನು ಚಿವುಟುತ್ತಾ ತೊಟ್ಟಿಲನ್ನು ತೂಗುವಂತೆ ನಟಿಸುವ ನಾಟಕವನ್ನು ಜನತೆ ಅರಿತುಕೊಳ್ಳಬೇಕು.

ಬೆಂಗಳೂರು ಮಹಾನಗರ ಪಾಲಿಕೆ: ಕುಡಿಯುವ ನೀರಿನ ಹೆಸರಿನಲ್ಲಿ ದಲಿತರ ಹಣಲೂಟಿ

"ಬೇಲಿಯೇ ಎದ್ದು ಹೊಲ ಮೆಯ್ದರೆ" ಮಹಾನಗರ ಪಾಲಿಕೆಯಲ್ಲಿ ಇಂತಹ ಅದ್ಭುತಗಳು ಒಂದಲ್ಲ ಸಾವಿರಾರು ಲೂಟಿ ಮಾಡುವ ಜನರು ನಮ್ಮ ಮಹಾನಗರ ಪಾಲಿಕೆ ಸದಸ್ಯರು ಅಧಿಕಾರಿಗಳು ಇದೇ ಹೊಸತಲ್ಲ ಇದು ನಿರಂತರವಾಗಿ ನಡೆದುಕೊಂಡು ಬರುತ್ತಿರುವ ದಾಂಧಲೆ ಈಗಾಗಲೇ ನೂರಾರು. ಪ್ರಕರಣಗಳು ಬಹಿರಂಗ ಗೊಂಡಿವೆ. ಅಧಿಕಾರಿಗಳು ಭ್ರಷ್ಟಾಚಾರವೆಸಗಿದ್ದಕ್ಕೆ ಶಿಕ್ಷೆ ಅನುಭವಿಸಿರುವುದು ತಮಗೆಲ್ಲಾ ತಿಳಿದಿದೆ. ಆದರೆ ಪ್ರಜಾಪ್ರತಿನಿಧಿಗಳ ಮಹಾನಗರ ಪಾಲಿಕೆಯಲ್ಲಿ ಸಾರಾಸಗಟಾಗಿ ಹಗಲು ದರೋಡೆ ನಡೆಸುತ್ತಿದ್ದರು. ಈ ಅಕ್ರಮಗಳನ್ನು ತೆಗೆದುಕೊಂಡಿರುವ ಘಟನೆಗಳು ಮಾತ್ರ ಮಹಾನಗರ ಪಾಲಿಕೆಯಲ್ಲಿಲ್ಲ ಖಾಸಗಿ ಮಾಲೀಕರ ನಾಯಕತ್ವದಲ್ಲಿ ಸಿಂಗಪೂರ ನಗರ ನಿರ್ಮಿಸುವ ವಿಷಯಗಳು ಪತ್ರಿಕೆಯಲ್ಲಿ ಡಂಗೂರ ಬಾರಿಸಿವೆ. ನಗರ ಪಾಲಿಕೆ ನಾಲಾಯಕ್ ಎಂಬುದನ್ನು ಸರ್ಕಾರ ಮೈಮರೆತು ಹೇಳಿ ಕೊಂಡಿದೆ. ಇಂತಹ ನಗರ ಪಾಲಿಕೆ ದಿವಾಳಿಗೆ ಈ ಕೆಳಯೋಜನೆಗಳ ಲೂಟಿಗಳೇ ಕಾರಣ ಎಂಬುದನ್ನು ತಿಳಿಯಿರಿ.


ದಲಿತರ ಹೆಸರು
ನಗರ ಸಭಾ ಸದಸ್ಯರ ಬಾಯಿಗೆ ಮೊಸರು

ಬೆಂಗಳೂರು ಮಹಾನಗರ ಪಾಲಿಕೆ ದಲಿತೋದ್ಧಾರಕ್ಕಾಗಿ ಕೋಟ್ಯಾಂತರ ರೂಗಳನ್ನು ಹಲವಾರು ಯೋಜನೆಗಳ ಮೂಲಕ ಖರ್ಚು ಮಾಡುತ್ತಿದೆ. 1997-98 ರಲ್ಲಿ 772.11 ಲಕ್ಷ ರೂಗಳು 1998-99 ರಲ್ಲಿ 1165.00 ಲಕ್ಷ ರೂ ಗಳು ಬಜೆಟ್ ನಲ್ಲಿ ಖರ್ಚು ಮಾಡಿರುವುದಾಗಿ ಘೋಷಿಸಿದೆ 1990-2000 ದಲ್ಲಿ 17-15-80 ಲಕ್ಷ ರೂಗಳನ್ನು ಖರ್ಚು ಮಾಡುವ ಉದ್ದೇಶವನ್ನು ಹೊಂದಿದೆ. ಡಾ|| ಅಂಬೇಡ್ಕರ್ ವಸತಿ ಯೋಜನೆ, ಭಾಗ್ಯಜ್ಯೋತಿ, ಒಳಚರಂಡಿ, ಶೌಚಾಲಯ, ಆರೋಗ್ಯ, ಶಿಕ್ಷಣ, ಇತ್ಯಾದಿ ಕಲ್ಯಾಣ ಯೋಜನೆಗಳು ಈ ವ್ಯಾಪ್ತಿಗೆ ಬರುತ್ತವೆ. ಇಷ್ಟೊಂದು ಕೋಟಿ ಹಣ ವ್ಯಯವಾಗುತ್ತಿದ್ದರು ಕೊಳಗೇರಿ ಅಭಿವೃದ್ಧಿ ಮಾತ್ರ ಸಾಧ್ಯವಾಗುತ್ತಿಲ್ಲ. ಸ್ವಾತಂತ್ರ್ಯದ 50 ವರ್ಷಗಳ ಅವಧಿಯಲ್ಲಿರುವ ಕನಿಷ್ಟ ನಾಗರೀಕ ... ಜನರ ಹೇಯ ಬದುಕು ಶೋಚನೀಯ.

ಭಾಷ್ಯಾಂನಗರ ವಾರ್ಡ್‌ನಲ್ಲಿ
ನಗರ ಸಭಾ ಸದಸ್ಯರಿಂದ ವಂಚನೆ

ದಲಿತರ ಅಭಿವೃದ್ಧಿಗಾಗಿ ಹುಟ್ಟಿದ್ದೇವೆಂದು ಬೊಬ್ಬೆಹೊಡೆಯುವ ನಗರ ಸಭಾ ಸದಸ್ಯರೇನು ಕಡಿಮೆ ಇಲ್ಲ. ಇದಕ್ಕೆ ಉದಾಹರಣೆ ಭಾಷ್ಯಂ ನಗರ ವಾರ್ಡ್ ಕಳೆದ ನಗರ ಸಭಾ ಚುನಾವಣೆಗೆ ಮುಂಚಿತವಾಗಿ ಓಟು ಗಿಟ್ಟಿಸುವ ತಂತ್ರದಿಂದ ಭಾಷ್ಯಂನಗರ ಸಭಾ ಸದಸ್ಯರಾದ ಎಸ್.ಆರ್. ಕೃಷ್ಣಕುಮಾರ್ ರವರು ಭಾಷ್ಯಂ ನಗರದ ಆರ್. ಗೋಪಾಲಸ್ವಾಮಿ ಐಯ್ಯರ್ ಕಾಲೋನಿಗೆ ಬಂದು ನಿಮಗೆ ನಗರ ಸಭೆಯಿಂದ ಉಚಿತ ನೀರು ಸಂಪರ್ಕ ನೀಡುತ್ತೇವೆ. ಈಗ ತಕ್ಷಣಕ್ಕೆ ನೀವೇ ನಿಮ್ಮ ಸ್ವಂತ ಖರ್ಚಿನಿಂದ ಕೊಳಾಯಿ ಹಾಕಿಸಿಕೊಳ್ಳಿ ನಂತರ ನಗರ ಪಾಲಿಕೆಯಿಂದ ನಿಮಗೆ ಹಣ ಹಿಂತಿರುಗಿಸುತ್ತೇನೆ, ಅಲ್ಲದೆ ಮೀಟರ್‌ಗಳನ್ನು ಹಾಕಿಸಿ ಕೊಡುತ್ತೇನೆಂದು ತಿಳಿಸಿದರು.

ಕುಡಿಯುವ ನೀರಿಗಾಗಿ ಪರಿತಪಿಸುತ್ತಿದ್ದ ಜನರು ಸ್ವರ್ಗವೇ ಇಳಿದಂತಾಗಿ ಹಗಲು ರಾತ್ರಿ ಎನ್ನದೆ ಸಾಲ ಸೂಲ ಮಾಡಿ (ಅನೇಕರು ತಮ್ಮಲ್ಲಿದ್ದ ಒಡವೆಗಳನ್ನು ಒತ್ತೆಯಿಟ್ಟರು) ನೀರಿನ ಸಂಪರ್ಕ ಪಡೆದರು ಇದಾದ ನಂತರ ಈ ವಿಭಾಗ ಮಹಿಳಾ ಮೀಸಲು ಸ್ಥಾನವಾಯಿತು ಆಗ ಅವರ ಪತ್ನಿ ನಿರ್ಮಲ ಕೃಷ್ಣಕುಮಾರ್ ನಗರ ಸಭಾ ಸದಸ್ಯರಾಗಿ ಚುನಾಯಿತರಾದರು ನಂತರದಲ್ಲಿ ಈ ಬಡಾವಣೆಯ ಸುಮಾರು 40 ಮನೆಗಳಿಗೆ ಮೀಟರ್ ಹಾಕಿಸಿಕೊಟ್ಟರು ಈ ಮೀಟರ್ ಅಳವಡಿಕೆಗೆ ಮಹಾನಗರ ಪಾಲಿಕೆಯ ಶೇ.18 ರ ಯೋಜನೆಯ 2000 ರೂಗಳನ್ನು ನೀಡಿರುತ್ತದೆ. ಆದರೆ ಈ ಹಣದಲ್ಲಿ ಒಂದು ಪೈಸೆಯು ಈ ಬಡ ನಿವಾಸಿಗಳಿಗೆ ಸಿಗಲಿಲ್ಲ. ಮೀಟರ್ ಹಣ ಮಾತ್ರ ಕಟ್ಟಿದ್ದಾರೆ. ಬಾಕಿ ಉಳಿದ 80 ನಿವೇಶನದಾರರಿಗೆ ಮೀಟರ್ ಅಳವಡಿಸಿಲ್ಲ ವಾದ್ದರಿಂದ ಜಲಮಂಡಳಿಯವರು ನೋಟೀಸ್ ನೀಡಿ 1000 ರೂಗಳ ದಂಡ ವಿಧಿಸಿದರು. ದಿಕ್ಕು ಕಾಣದ ನಿವಾಸಿಗಳು ಈ ನಗರ ಸಭಾ ಸದಸ್ಯರಾದ ಕೃಷ್ಣ ಕುಮಾರ್‌ರವರನ್ನು ಕೇಳಿದಾಗ (ನಿರ್ಮಲರವರು ನಗರ ಸಭಾ ಸದಸ್ಯ ರಾಗಿದ್ದಾರೆ, ಅವರು ಜನರ ಬಳಿಗೆ ... ಕೃಷ್ಣಕುಮಾರ್‌ರವರೆ) ಮೀಟರ್ ಹಾಕಿಸಿಕೊಡುತ್ತೇವೆಂದು ಹೇಳಿದರು.



ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಭ್ರಷ್ಟಾಚಾರವನ್ನು ವಿರೋಧಿಸಿ ಸಿಪಿಐ(ಎಂ) ಕಾರ್ಯಕರ್ತರಿಂದ ನಗರ ಪಾಲಿಕೆ ಕಟ್ಟಡದ ಮುಂದೆ ಪ್ರತಿಭಟನೆ

ಅಷ್ಟರಲ್ಲಿ ಲೋಕಸಭಾ ವಿಧಾನ ಸಭಾ ಚುನಾವಣೆಗಳು ನಡೆದಾಗ ಕೃಷ್ಣಕುಮಾರ್‌ರವರು ಕಾಂಗ್ರೆ ಬಂಡಾಯ ಅಭ್ಯರ್ಥಿ ಯಾಗಿ ಸ್ಪರ್ಧೆಗಿಳಿದು ಸೋತರು.

ನಂತರದಲ್ಲಿ ಜಲಮಂಡಳಿ ಯವರು ಪೋಲೀಸ್ ನೆರವಿನಿಂದ ಮಧ್ಯಾಹ್ನ ನಿವೇಶನದ ಮಾಲೀಕರು ಈ ಸಮಯದಲ್ಲಿ ಕೆಲಸಕ್ಕೆ ಹೋಗಿರುತ್ತಾರೆ ಆರ್.ಜಿ.ಐ. ಕಾಲೋನಿಯ ಎಲ್ಲಾ ಬೀದಿಗಳನ್ನು ಅಗೆದು ನಿವೇಶನಗಳಿಗೆ ನೀಡಿದ ನೀರಿನ ಸಂಪರ್ಕವನ್ನು ಕಡಿದು ಹಾಕಿದ್ದಾರೆ. ಈ ಬಗ್ಗೆ ನಿವಾಸಿಗಳು ಕೇಳಿದರೆ ನೀವು ನಮಗೆ ಓಟಾಕಿಲ್ಲ ಎಂ.ಎಲ್.ಎ. ಯನ್ನು ಕೇಳಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಇಂತಹ ಮಾನವೀಯತೆಯ ಅರಿವೆ ಇಲ್ಲದವರು ನಮ್ಮ ಪ್ರಜಾ ಪ್ರತಿನಿಧಿಗಳು ಎಂಬುದು ನಾಚಿಸಬೇಕಾದ ಸಂಗತಿ.

ಈ ಪ್ರಕರಣದಲ್ಲಿ ಮೀಟರ್ ಅಳವಡಿಸಿರುವ 40 ಮನೆಗಳ ಒಟ್ಟು ಹಣ 80 ಸಾವಿರಕ್ಕೂ ಹೆಚ್ಚು ಇದೇ ರೀತಿ ದಯಾನಂದ ನಗರ ಗೌತಮನಗರ ರಾಮಕೃಷ್ಣ ಸೇವಾ ನಗರ, ಅಂಬೇಡ್ಕರ್‌ನಗರ ಗಳಲ್ಲಿ ಸುಮಾರು 800 ಮೀಟರ್‌ಗಳನ್ನು ಅಳವಡಿಸಿದ್ದಾರೆ. ಈ ಎಲ್ಲಾ ಮೊತ್ತ ಅಂದಾಜು 8 ಲಕ್ಷ ರೂಗಳಾಗುತ್ತದೆ.

ಇಷ್ಟೆ ಅಲ್ಲದೆ ಅಂಬೇಡ್ಕರ್ ನಗರದಲ್ಲಿ ಶೌಚಾಲಯಗಳನ್ನು ಪೂರ್ಣಗೊಳಿಸಿಲ್ಲ, ಕುಡಿಯುವ ನೀರಿನ ಸರಬರಾಜಿಲ್ಲ, ಎಲ್ಲಾಅಪೂರ್ಣ ಚೇಂಬರ್‌ಗಳಿಲ್ಲದ ಶೌಚಾಲಯ ನಿರ್ಮಿಸಿದ್ದಾರೆ. ಇಂತಹ ಯೋಜನೆಗಳ ಬಳಕೆ ಮಾಡಿ ದಲಿತರನ್ನು ವಂಚಿಸಿ ಹಗಲು ದರೋಡೆ ನಡೆಸುತ್ತಿದ್ದಾರೆ.


ಇದು ಒಂದು ಪ್ರಕರಣವಷ್ಟೆ ಬೆಂಗಳೂರು ನಗರದ ನೂರು ವಾರ್ಡ್‌ಗಳಲ್ಲಿ ಇಂತಹ ಪ್ರಕರಣಗಳು ಯಾವುದೇ ಎಗ್ಗಿಲ್ಲದೆ ನಡೆಯುತ್ತವೆ, ಮಂತ್ರಿ ಮಾನ್ಯರು, ಮಹಾ ಪೌರರು, ಶಾಸಕರು, ನಗರ ಸಭಾ ಸದಸ್ಯರು ಅಧಿಕಾರಿಗಳು ಈ ಲೂಟಿಯಲ್ಲಿ ತೊಡಗಿದ್ದಾರೆ, ಇವರ ಪರಮ ಮಿತ್ರರು ಗುತ್ತಿಗೆದಾರರು (ಕಂಟ್ರಾಕ್ಟರುಗಳು) ಎಲ್ಲಾ ಕಳಪೆ ಕೆಲಸಗಳಿಂದ ತೋರಿಕೆ ಕೆಲಸಮಾಡಿ ಹಣ ಪಡೆದುಕೊಂಡು ಸ್ವಾಮಿ ಕಾಣಿಕೆ ನಿಗದಿ ಮಾಡಿದಂತೆ ಒಂದಿಷ್ಟು ಕಡಿಮೆ ಯಾಗದಂತೆ ಈ ಮೇಲಿನ ಪ್ರಜಾ ಪ್ರತಿನಿಧಿಗಳಿಗೆ ಅರ್ಪಿಸುತ್ತಾರೆ.

ಭ್ರಷ್ಟಾಚಾರ ತನಿಖೆಗೆ ಒತ್ತಾಯಿಸಿ ಸಿಪಿಐ(ಎಂ) ಪ್ರತಿಭಟನೆ:

ಇಂತಹ ಹಗಲು ದರೋಡೆಯನ್ನು ಬಯಲಿಗೆಳೆಯಲು ಭಾರತ ಕಮ್ಯುನಿಸ್ಟ್ ಪಕ್ಷ ಶ್ರೀರಾಮಪುರ ವಲಯ ಸಮಿತಿ, ಶ್ರೀರಾಮಪುರದ ಎಲ್ಲಾ ವಿಭಾಗಗಳ ಜನರಿಂದ ಸಹಿ ಸಂಗ್ರಹಿಸಿ ಫೆ. 22 ರಂದು ಬೆಂಗಳೂರು ಮಹಾನಗರ ಪಾಲಿಕೆ ಎದುರು ಪ್ರತಿಭಟನೆ ನಡೆಸುತ್ತಿದೆ ಇಂತಹ ಅಕ್ರಮ ನೀತಿಗಳ ವಿರುದ್ಧ ಜನರನ್ನು ಸಂಘಟಿಸಿ ಹೋರಾಟ ನಡೆಸುತ್ತಿದೆ.

- ಗೋಪಾಲಕೃಷ್ಣ ಅರಳಹಳ್ಳಿ.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 26

ಅಸೆಂಬ್ಲಿ ಆವರಣದಲ್ಲಿ ಫೆಬ್ರವರಿ 16 ರಂದು ನಡೆಯಬೇಕಿದ್ದ ರ್‍ಯಾಲಿ ಬದಲಾಗಲಿಲ್ಲ. ಸದನದಲ್ಲಿ ಪ್ರಶ್ನೋತ್ತರ ಅವಧಿ ಮುಗಿಸಿ ಹೊರಬರುತ್ತಿದ್ದಂತೆ ಜ್ಯೋತಿಬಸುರವರನ್ನು ಬಂಧಿಸಬೇಕೆಂದು ಪೋಲೀಸರು ತಂತ್ರ ಹೂಡಿದ್ದರು. ಇದನ್ನರಿತು ಅಸೆಂಬ್ಲಿಯಲ್ಲೇ ಒಂದು ವಾರ ಕಳೆಯಲು ಮಾಡಿದ ಕೋರಿಕೆಯನ್ನು ಸ್ಪೀಕರ್ ಒಪ್ಪಿದರು. ಮುಂದೆ ನಡೆದ ರ್‍ಯಾಲಿ, ಪ್ರತಿಭಟನೆ, ಗೋಲಿಬಾರ್‌ನಲ್ಲಿ ಹಲವರು ಹುತಾತ್ಮರಾದರು. ಬಜೆಟ್ ಅಧಿವೇಶನ ಮುಗಿದ ಬಳಿಕ ಹೊರಬಂದ ಜ್ಯೋತಿಬಸುರವರನ್ನು ಬಂಧಿಸಿ ಸೆರಮನೆಗೆ ತಳ್ಳಲಾಯಿತು. ಇಷ್ಟೆಲ್ಲಾ ದಬ್ಬಾಳಿಕೆ ನಡೆದರೂ ಶಿಕ್ಷಕರ ಮುಷ್ಕರ ಯಶಸ್ವಿಯಾಯಿತು. ಕೆಲವು ಬೇಡಿಕೆಗಳೂ ಈಡೇರಿದವು. ಮುಂದೆ ರಿಟ್ರೆಂಚ್‌ಮೆಂಟ್ ವಿರುದ್ಧ ಚಳುವಳಿ ಭುಗಿಲೆದ್ದ ಬಗ್ಗೆ ಓದಿ.....

ರಿಟ್ರೆಂಚ್‌ಮೆಂಟ್ ವಿರುದ್ಧ ಭುಗಿಲೆದ್ದ ಚಳುವಳಿ

1954 ಮೇ 22. ಭಾರತ-ಚೀನಾದತ್ತ ತೆರಳುತ್ತಿದ್ದ ಫ್ರಾನ್ಸಿನ ಸೈವಮಾಸ್ಟರ್ ಯುದ್ಧವಿಮಾನವೊಂದು ಹಠಾತ್ತನೆ ಡಂ ಡಂ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಪ್ರಧಾನಿ ಜವಾಹರಲಾಲ್ ನೆಹರೂ ಪ್ರತಿಭಟನೆಗಳನ್ನು ಸಲ್ಲಿಸಿದ್ದರೂ ಸಾಮ್ರಾಜ್ಯಶಾಹಿ ಶಕ್ತಿಯೊಂದು ಅನುಮತಿಯಿಲ್ಲದೆ ನಡೆಸಿದ ಇಂಥ ಒಂದು ಘಟನೆ ದೊಡ್ಡ ಪ್ರಕರಣವಾಗಿದೆ. ಅದು ರಾಷ್ಟ್ರೀಯ ಸಮಗ್ರತೆ ಮತ್ತು ಭದ್ರತೆ ಮೇಲೆ ನೇರವಾಗಿ ಪರಿಣಾಮ ಬೀರುವಂಥ ಘಟನೆ ಫ್ರೆಂಚ್ ಸೈನಿಕರನ್ನು ಫ್ರಾನ್ಸಿನ ಕಾನ್ಸುಲೇಟ್ ಉಸ್ತುವಾರಿಯಲ್ಲಿ ಗ್ರಾಂಡ್ ಹೋಟೆಲ್‌ನಲ್ಲಿ ಇರಿಸಲಾಗಿತ್ತು.

ಆ ಅವಧಿಯಲ್ಲಿ ಅಮೇರಿಕದ ನಾಲ್ಕು ವಿಮಾನಗಳು ಮತ್ತು ಬ್ರಿಟಿಷ್ ಸರಕಾರಕ್ಕೆ ಸೇರಿದ್ದ ಕೆಲವು ಸರಂಜಾಮುಗಳು ಕೂಡ ನಮ್ಮ ವಿಮಾನ ನಿಲ್ದಾಣದಲ್ಲಿ ಬಂದಿಳಿದವು. ನಮ್ಮ ಪಕ್ಷದ ಮುಖವಾಣಿ 'ಸ್ವಾಧೀನತಾ' ಮಾತ್ರವೇ ಈ ಸುದ್ದಿಯನ್ನು ಮಹತ್ವ ನೀಡಿ ಪ್ರಕಟಿಸಿತು. ಭೂಪೇಶ ಗುಪ್ತಾ ಸಂಪಾದಕೀಯ ಮಂಡಳಿಯ ಮುಖ್ಯಸ್ಥರಾಗಿದ್ದರು. ನಾನು ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಘಟಕದ ಕಾರ್ಯದರ್ಶಿಯಾಗಿದ್ದೆ.

1954ರ ಜೂನ್‌ನಲ್ಲಿ ಪಾಕಿಸ್ತಾನ ಮತ್ತು ಅಮೆರಿಕದ ನಡುವೆ ಆದ ಒಡಂಬಡಿಕೆ ನಮ್ಮ ರಾಷ್ಟ್ರೀಯ ಭದ್ರತೆಗೆ ನೇರ ಬೆದರಿಕೆಯಾಗಿತ್ತು. ಜೂನ್ 14 ರಂದು ಪ್ರೊ. ಹಿರೇನ್ ಮುಖರ್ಜಿ ಅಧ್ಯಕ್ಷತೆಯಲ್ಲಿ ಕಲ್ಕತ್ತ ನಗರದ ವೆಲ್ಲಿಂಗ್ಟನ್ ಚೌಕದಲ್ಲಿ ಒಂದು ಸಭೆ ನಡೆಯಿತು.

"ಅಮೇರಿಕನರ ನೇರ ಮಧ್ಯಪ್ರವೇಶದಿಂದಾಗಿ ಸೇನಾ ಆಡಳಿತ ಸ್ಥಾಪಿಸುವಲ್ಲಿ ಮಹಮದ್ ಅಲಿ ಜಿನ್ನಾ ಯಶಸ್ವಿಯಾಗಿದ್ದಾರೆ. ಪೂರ್ವ ಬಂಗಾಳ (ಈಗಿನ ಬಾಂಗ್ಲ ದೇಶ)ದಲ್ಲಿ ಪ್ರಜಾತಾಂತ್ರಿಕ ಪ್ರಕ್ರಿಯೆಯನ್ನು ಬುಡಮೇಲು ಮಾಡಿದ್ದಾರೆ. ಪಾಕಿಸ್ತಾನ ಮತ್ತು ಅಮೆರಿಕ ನಡುವಿನ ಒಪ್ಪಂದದ ಮೊದಲ ಪರಿಣಾಮ ಇದಾಗಿದೆ. ಭಾರತದ ಮೇಲೆ ಒತ್ತಡ ಹೇರಲು ಪಾಕಿಸ್ತಾನ ಯತ್ನಿಸುತ್ತಿದೆ. ಈ ಕಾರಣದಿಂದಾಗಿಯೇ ನಾವು ಪೂರ್ವ ಬಂಗಾಳದ ಜನತೆಗೆ ಬೆಂಬಲ ನೀಡಬೇಕು ಮತ್ತು ಭಾರತದ ವಿರುದ್ದದ ಸಾಮ್ರಾಜ್ಯಶಾಹಿ ಶಕ್ತಿಗಳ ಕುತಂತ್ರಗಳ ವಿರುದ್ಧ ಬೃಹತ್ ಚಳವಳಿಯೊಂದನ್ನು ಹುಟ್ಟು ಹಾಕಬೇಕು. ಪೂರ್ವ ಬಂಗಾಳದ ಪ್ರಜಾಸತ್ತಾತ್ಮಕ ಜನರನ್ನು ಬಹಳ ಕಾಲ ತುಳಿದು ಹಿಡಿದಿಡಲಾಗದು ಎಂದು ನಾನು ಆಶಿಸುತ್ತೇನೆ" ಎಂಬುದಾಗಿ ನಾನು ಆ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದೆ.

ಕಮ್ಯುನಿಸ್ಟ್ ಪಕ್ಷ ನಿಷೇಧ

ಪೂರ್ವ ಬಂಗಾಳದ ಸೇನಾ ಆಡಳಿತ 1954 ಜುಲೈ ಆರರಂದು ಅಲ್ಲಿನ ಕಮ್ಯುನಿಸ್ಟ್ ಪಕ್ಷವನ್ನು ನೀಷೇದಿಸಿತು ಜುಲೈ 25 ರಂದು ಪಶ್ಚಿಮ ಪಾಕಿಸ್ತಾನದಲ್ಲಿ ಕೂಡ ಕಮ್ಯುನಿಸ್ಟ್ ಪಕ್ಷವನ್ನು ಕಾನೂನು ಬಾಹಿರಗೊಳಿಸಲಾಯಿತು. ಲಾಹೋರ್, ಫೇಷಾವರ, ರಾವಲ್ಪಿಂಡಿಗಳಲ್ಲಿ ವ್ಯಾಪಕ ಬಂಧನ ನಡೆಸಲಾಯಿತು. ಚೀನಾ ಪ್ರಧಾನಿ ಚೌ.ಎನ್. ಲಾಯ್ ಭಾರತಕ್ಕೆ ಭೇಟಿ ನೀಡಿದ್ದು 1954 ರ ಅತಿಮಹತ್ವದ ಘಟನೆಗಳಲ್ಲಿ ಒಂದು. ಅವರಿಗೆ ದೆಹಲಿಯಲ್ಲಿ ಭವ್ಯ ಹೃದಯಸ್ಪರ್ಶಿ ಸ್ವಾಗತ ನೀಡಲಾಯಿತು. ವೆಲ್ಲಿಂಗ್ಟನ್ ಚೌಕದಲ್ಲಿ ಜೂನ್ 28 ರಂದು ನಡೆದ ರ್‍ಯಾಲಿಯಿಂದ ಕಮ್ಯುನಿಸ್ಟ್ ಪಕ್ಷ ಒಂದು ಸಂದೇಶ ಕಳಿಸಿತು. ಭಾರತ ಮತ್ತು ಚೀನಾದ ಪ್ರಧಾನ ಮಂತ್ರಿಗಳ ನಡುವಿನ ಭೇಟಿಯನ್ನು ಈ ಸಂದೇಶ ಶ್ಲಾಘಿಸಿತು. ನಮ್ಮ ಶುಭಾಶಯವನ್ನು ಕೋರಲಾಯಿತು. ಸಭೆಯಲ್ಲಿ ಹಿರೇನ್ ಮುಖರ್ಜಿ ಮತ್ತು ಭೂಪೇಶ್ ಗುಪ್ತಾ ಕೂಡ ಮಾತನಾಡಿದರು.

ಆಹಾರ ಮತ್ತು ಪೂರೈಕೆ ಇಲಾಖೆಯಲ್ಲಿ ನೌಕರರನ್ನು ಕೆಲಸದಿಂದ ತೆಗೆದು ಹಾಕುತ್ತಿರುವುದರ (ರಿಟ್ರೆಂಚ್‌ಮೆಂಟ್) ವಿರುದ್ಧ 1954 ಜೂನ್ 26 ರಂದು ಒಂದು ಚಳವಳಿ ಭುಗಿಲೆದ್ದಿತು. ವಜಾ ಮಾಡಲಾದ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಕಲ್ಪಿಸುವಂತೆ ಪ್ರತಿಪಕ್ಷ ಶಾಸಕರು ಮತ್ತು ಸಂಸತ್ ಸದಸ್ಯರು ಒಂದು ಜಂಟಿ ಹೇಳಿಕೆ ಹೊರಡಿಸಿದರು.

ಹೀರೇನ್ ಮುಖರ್ಜಿ ಭೂಪೇಶ ಗುಪ್ತ, ರಣಜೀನ್ ಸೇನ್, ಕನ ಭಟ್ಟಾಚಾರ್ಜಿ ಅಮರ್ ಬಸ್ತು ಅಂದಿನ ಬಸುಮತಿ ಪತ್ರಿಕೆಯ ಸಂಪಾದಕ ಬಿನ್ ಘೋಷ್, ಮುಖೇನ್ ಪಾಲ್, ಮೊಹಿತ್ ಮೈತ್ರ ಮತ್ತು ನಾನು ಹೇಳಿಕೆಗೆ ಸಹಿ ಮಾಡಿದೆವು.

ಆಹಾರ ಮತ್ತು ಪೂರೈಕೆ ಖಾತೆಯ ಒಟ್ಟು ಸುಮಾರು 7000 ನೌಕರರು ವೆಲ್ಲಿಂಗ್ಟನ್ ಚೌಕದಲ್ಲಿ ಜಮಾಯಿಸಿದರು 100 ನೌಕರರನ್ನು ತೆಗೆದು ಹಾಕಲು ಹೊರಡಿಸಿದ್ದ ನೋಟಿಸ್ ವಾಪಾಸ್ ಪಡೆಯುವಂತೆ ಪಶ್ಚಿಮ ಬಂಗಾಳ ಸರಕಾರವನ್ನು ಮಣಿಸಲಾಗಿದೆ ಎಂದು ರ್‍ಯಾಲಿಯಲ್ಲಿ ಪ್ರಕಟಿಸಲಾಯಿತು. ಈ ಪ್ರಕಟಣೆಯಿಂದ ನೆರೆದಿದ್ದ ಜನರಲ್ಲಿ ನವೋಲ್ಲಾಸ ಮೂಡಿತು.

ನೌಕರರು ನಡೆಸಿದ ಒಗ್ಗಟ್ಟಿನ ಹೋರಾಟ ಹಾಗೂ ಪ್ರತಿಪಕ್ಷಗಳಿಂದ ಅವರಿಗೆ ದೊರೆತ ಬೆಂಬಲದ ಮುಂದೆ ಸರಕಾರ ಸೋಲನ್ನು ಒಪ್ಪಿಕೊಳ್ಳಬೇಕಾಯಿತು.

ಆಗಸ್ಟ್ 31 ರಂದು ಅಸೆಂಬ್ಲಿಯಲ್ಲಿ ಉದ್ವಿಗ್ನ ವಾತಾವರಣ ನೆಲೆಸಿತ್ತು. ಸ್ಪೀಕರ್ ಮತ್ತು ಮುಖ್ಯಮಂತ್ರಿ ಜತೆ ನಾನು ವಾಗ್ವಾದ ಮಾಡಿದೆ. ಲೇಕ್ ಬರಾಕ್ಸ್‌ನ ನಿರಾಶ್ರಿತರ ಶಿಬಿರದಲ್ಲಿ ನಡೆದ ಪೋಲೀಸ್ ದೌರ್ಜನ್ಯಕ್ಕೆ ಸಂಬಂಧಿಸಿ ಅಂಬಿಕಾ ಚಕ್ರವರ್ತಿ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಮುಖ್ಯಮಂತ್ರಿ, ಈ ಮುನ್ನವೇ ನೀಡಿದ ಸ್ಪಷ್ಟನೆಯನ್ನು ಬಿಟ್ಟರೆ ಬೇರೆನೂ ಹೇಳುವಂಥದ್ದಿಲ್ಲ ಎಂದರು.

ಅದನ್ನು ನಾನು ತಕ್ಷಣವೇ ಪ್ರತಿಭಟಿಸಿದೆ. ಯಾವ ಪ್ರಶ್ನೆಗಳನ್ನು ಕೇಳಬಹುದು ಎಂದು ನಿರ್ಧಾರಿಸುವ ಹಕ್ಕು ಸ್ಪೀಕರಿಗೆ ಇದೆ. ಇಂಥ ವಿಷಯಗಳಲ್ಲಿ ಮುಖ್ಯಮಂತ್ರಿ ತಲೆ ಹಾಕುವಂತಿಲ್ಲ ಎಂದು ನಾನು ಹೇಳಿದೆ. ಸದಸ್ಯರ ಹಕ್ಕುಗಳನ್ನು ಮೊಟಕು ಗೊಳಿಸಲಾಗುತ್ತಿದೆ ಎಂದು ಹೇಳಿದ ನಾನು ಸ್ಪೀಕರ್ ಜೊತೆಯೇ ದೀರ್ಘವಾದ ಮಾಡಿದೆ. ಅಂತಿಮವಾಗಿ ಅನಧಿಕೃತ ವಿಷಯಗಳನ್ನು ಪ್ರತಿ ಶುಕ್ರವಾರ ಚರ್ಚಿಸಬಹುದು ಎಂದು ಸಲಹೆ ಮಾಡಿದೆ.

ಈ ವಿಷಯವನ್ನು ಪರಿಶೀಲಿಸುವುದಾಗಿ ಸ್ಪೀಕರ್ ಹೇಳಿದರು.

ಇನ್ನು ಒಂದು ಘಟನೆ ನೆನಪಾಗುತ್ತದೆ. 1954 ಸೆಪ್ಟೆಂಬರ್‌ನಲ್ಲಿ ಜಲಪಾಯ್‌ಗುರಿ ಜಿಲ್ಲೆ ಪ್ರವಾಹದ ಪ್ರಕೋಪಕ್ಕೆ ಸಿಲುಕಿತು. ಪ್ರಕೃತಿಯ ಜತೆ ಚಹಾ ಎಸ್ಟೇಟ್‌ಗಳ ಬಿಳಿದೊಗಲ ಜನರು ಕೂಡ ಅನಾಹುತಕ್ಕೆ ಕಾರಣರು ಎಂಬುದನ್ನು ಬಿಪಿಟಿಯುಸಿ ಮತ್ತು ಜಲಪಾಯ್‌ಗುರಿ ಜಿಲ್ಲೆ ಚಹಾ ಎಸ್ಟೇಟ್ ಕಾರ್ಮಿಕರ ಸಂಘದ ಮುಖಂಡರು ನಡೆಸಿದ ಸ್ಥಳ ಅಧ್ಯಯನದಿಂದ ತಿಳಿದು ಬಂತು ಪ್ರವಾಹ ಪೀಡಿತ ಸ್ಥಳಗಳಲ್ಲಿ ನಾವು ಪರಿಹಾರ ಕಾರ್ಯ ಕೈಗೆತ್ತಿಕೊಂಡೆವು

ಉತ್ತರ ಬಂಗಾಳದಲ್ಲಿ ತೀಸ್ತಾ ನದಿ ಯಾವಾಗಲೂ ಪ್ರವಾಹ ಪ್ರಕೋಪಕ್ಕೆ ಕಾರಣವಾಗುತ್ತದೆ. ಆದರೆ ಎಷ್ಟು ಕಾಂಗ್ರೆಸ್ ಸರಕಾರ ಬಂದರೂ ತೀಸ್ತಾ ಬ್ಯಾರೇಜ್ ಯೋಜನೆ ಅನುಷ್ಠಾನಕ್ಕೆ ತರಲು ಏನನ್ನು ಮಾಡಿಲ್ಲ. ಆ ಮೇಲೆ ಎಡರಂಗ ಸರಕಾರ ಈ ಯೋಜನೆಗೆ ಪ್ರಾಶಸ್ತ್ಯ ನೀಡಿತು.

1954ರ ಸೆಪ್ಟೆಂಬರ್ 23, ಪಶ್ಚಿಮ ಬಂಗಾಳ ವಿಧಾನ ಸಭೆಯ ದಾಖಲೆಗಳಲ್ಲಿ ಒಂದು ಮಹತ್ವದ ದಿನವಾಗಿ ಉಳಿಯುತ್ತದೆ. ಅಭಿವೃದ್ಧಿ ನಿಗಮ ಮಸೂದೆ ಮೇಲಿನ ಮತದಾನ ಆದಾಗ ಕಾಂಗ್ರೆಸ್‌ನ 28 ಸದಸ್ಯರು ತಪ್ಪು ತಿಳಿವಳಿಕೆಯಿಂದ ಪಕ್ಷದ ನೀಲುವಿನ ವಿರುದ್ಧ ಮತ ಹಾಕಿ ಬಿಟ್ಟರು! ಇದರಿಂದ (ಕ್ಲಾಸ್) 5 ಅಸಿಂಧುವಾಯಿತು.

ಸ್ವತಃ ಮುಖ್ಯಮಂತ್ರಿ ಡಾ. ರಾಯ್ ತಮ್ಮದೇ ಪ್ರಸ್ತಾವದ ವಿರುದ್ಧ ಮತ ಹಾಕಿದರು. ಆದರೆ ಕಾಂಗ್ರೆಸ್ ಸದಸ್ಯರ ಈ ಆತ್ಮಹತ್ಯಾಕಾರಿ ಕ್ರಮ ಹಠಾತ್ ಏನೂ ಅಲ್ಲ. ಪ್ರತಿ ಪಕ್ಷ ಸದಸ್ಯರು ಮುಂಚಿಯೇ ವಿರೋಧದ ಧ್ವನಿಯನ್ನು ಎತ್ತಿದ್ದರು. ಪ್ರತಿಭಟನೆಯ ಅಲೆಯಿಂದಾಗಿ ಕಾಂಗ್ರೆಸ್‌ನಲ್ಲಿ ಅರಾಜಕತೆ ತಾಂಡವವಾಡಿತು. ಈ ಗೊಂದಲದಿಂದಾಗಿ ಕ್ಲಾಸ್5 ಗೆ 80 ಸದಸ್ಯರ ವಿರೋಧ ಮತ ಬಿದ್ದವು. 74 ಸದಸ್ಯರು ಪರವಾಗಿ ಮತ ನೀಡಿದರು. ಏಳು ಸದಸ್ಯರು ಗೈರು ಹಾಜರಾಗಿದ್ದರು.

ಆಹಾರ ಬಿಕ್ಕಟ್ಟು ಉಲ್ಬಣ

ಗ್ರಾಮೀಣ ಪ್ರದೇಶಗಳಲ್ಲಿ ಅಹಾರ ಬಿಕ್ಕಟ್ಟು ತೀವ್ರವಾಗುತ್ತಿತ್ತು ಅದನ್ನು ಎದುರಿಸಲು ಸರಕಾರ ಯಾವುದೇ ಕ್ರಮ ಕೈಗೊಳ್ಳಲಿಲ್ಲ ಹಸಿವಿನ ಹಾಹಾಕಾರ ತಾಂಡವವಾಡುತ್ತಿದ್ದ ಪ್ರದೇಶಗಳಲ್ಲಿ ಪಕ್ಷದ ಸೂಚನೆ ಮೇರೆಗೆ ನಾನು ಪ್ರವಾಸ ಮಾಡಿದೆ ಹರೋವಾ -ಶಾಸಕ ಸಂದೇಶ್ ಬಲಿ ಹೇಮಂತ ಘೋಶಾಲ್ ನನ್ನ ಜತೆಯಿದ್ದರು.

ಧಾರಾಕಾರ ಮಳೆ ಸುರಿಯುತ್ತಿದ್ದರೂ ನಮ್ಮ ಸಭೆಗಳಿಗೆ ಭಾರೀ ಸಂಖ್ಯೆಯ ಜನರು ಬರುತ್ತಿದ್ದರು. ಪೊಲೀಸ್ ದೌರ್ಜನ್ಯ ತೆರವು ಮತ್ತು ಅಕ್ರಮ ಬೇಲಿಗಳ ವಿರುದ್ಧ ನಿರಂತರ ಹೋರಾಟ ನಡೆಸುವಂತೆ ನಾನು ಕರೆ ನೀಡಿದೆ.

1954 ಜನವರಿಯಲ್ಲಿ ಸರಕಾರ ಕರಾಳ ಕಾನೂನಿನ ಅವಧಿಯನ್ನು ವಿಸ್ತರಿಸಿತು. ಅದು ಬಂಧನಕ್ಕೆ ಅಪರಿಮಿತ ಅಧಿಕಾರ ನೀಡಿತು. ವೆಲ್ಲಿಂಗ್ಟನ್ ಚೌಕದಲ್ಲಿ ಕಾಕಾಬಾಬು, ಕಾಮ್ರೇಡ್ ಇಸ್ಮಾಯಿಲ್ ಮತ್ತು ಕಾಮ್ರೇಡ್ ನಿರಂಜನ್ ಸೇನ್ ಗುಪ್ತಾರ ಜೊತೆ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ್ದು ನೆನಪಿದೆ. ಈ ಕಾನೂನಿನ ಅಡಿಯಲ್ಲಿ ಲೆಕ್ಕವಿಲ್ಲದಷ್ಟು ಕಮ್ಯುನಿಸ್ಟ್ ಮುಖಂಡರು ಮತ್ತು ಕಾರ್ಯಕರ್ತರನ್ನು ವಿಚಾರಣೆಯಿಲ್ಲದೆ ಬಂಧಿಸಲಾಯಿತು.

ಆಂಧ್ರದಲ್ಲಿ ಚುನಾವಣೆ ಸಮರ

ಈ ಕಾನೂನನ್ನು ಬಳಸುವ ಅಥವಾ ಬಳಸದಿರುವ ಆಯ್ಕೆಯನ್ನು ರಾಜ್ಯ ಸರಕಾರಗಳಿಗೆ ಬಿಡಲಾಗಿತ್ತು. 1967 ರಲ್ಲಿ ಪ್ರಥಮ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂದಾಗಷ್ಟೇ ಬಂಗಾಳದಲ್ಲಿ ಈ ಕಾನೂನಿನ ಅನುಷ್ಠಾನವನ್ನು ನಿಲ್ಲಿಸಲು ನಾವು ನಿರ್ಧರಿಸಿದೆವು. ಅವಿಭಜಿತ ಕಮ್ಯುನಿಸ್ಟ್ ಪಕ್ಷ ಸಂಸತ್ತಿನಲ್ಲಿ ಸಾಕಷ್ಟು ದನಿ ಎತ್ತಿತು. ಪಕ್ಷದ ನಿಲುವು ಸಂಸತ್ತಿನಲ್ಲಿ ಪ್ರತಿಧ್ವನಿಸುವಂತಾಗಲು ಹಾಗೂ ಸದನದಲ್ಲಿ ಅದನ್ನು ಕೇಳುವಂತಾಗಲು ಪ್ರೊ. ಹೀರೇನ್ ಮುಖರ್ಜಿ ಒಂದೇ ಒಂದು ಅವಕಾಶವನ್ನು ಬಿಟ್ಟು ಕೊಡಲಿಲ್ಲ.

ಆಂಧ್ರಪ್ರದೇಶ ಒಂದು ಪ್ರತ್ಯೇಕ ರಾಜ್ಯವಾದ ನಂತರ 1955 ರಲ್ಲಿ ಪ್ರಥಮ ಅಸೆಂಬ್ಲಿ ಚುನಾವಣೆಗೆ ನಡೆಯಿತು. ಈ ಚುನಾವಣೆಗೆ ನಮ್ಮ ಕೇಂದ್ರ ಸಮಿತಿ ತುಂಬಾ ಮಹತ್ವ ನೀಡಿತು ಕಮ್ಯುನಿಸ್ಟ್ ಪಕ್ಷ ಮತ್ತು ಕಾಂಗ್ರೆಸ್ ಪ್ರಮುಖ ಪ್ರತಿಸ್ಪರ್ಧಿಗಳಾಗಿದ್ದವು. ಚುನಾವಣೆ ಪ್ರಚಾರಕ್ಕಾಗಿ ನಾನು ಆಂಧ್ರಪ್ರದೇಶದಲ್ಲಿ ವ್ಯಾಪಕ ಪ್ರವಾಸ ಮಾಡಿದೆ. ದಕ್ಷಿಣದ ಈ ರಾಜ್ಯದ ಬಗ್ಗೆ ಪಶ್ಚಿಮ ಬಂಗಾಳದ ಜನತೆಯ ಪ್ರೀತಿಯ ಸಂಕೇತವಾಗಿ ನನ್ನ ಜತೆ ಎರಡು ಮೈಕ್ರೋಫೋನ್‌ಗಳನ್ನು ಒಯ್ದಿದ್ದೆ.

ಆ ದಿನಗಳಲ್ಲಿ ಮಾಧ್ಯಮಗಳಲ್ಲಿ ಯಾವುದೇ ಅಬ್ಬರದ ಪ್ರಚಾರ ವಿರಲಿಲ್ಲ. ಕಮ್ಯುನಿಸ್ಟ್ ಪಕ್ಷದ ಒಬ್ಬ ಅಭ್ಯರ್ಥಿಯನ್ನು ಕಾಂಗ್ರೆಸ್ಸಿಗರು ಒತ್ತೆಯಾಳಾಗಿ ಹಿಡಿದಿಟ್ಟು ಕೊಂಡಿದ್ದಾರೆ, ನಾಮಪತ್ರ ವಾಪಾಸ್ಸು ಪಡೆಯುವಂತೆ ಅವರಿಗೆ ಗಡುವು ನೀಡಲಾಗಿದೆ ಎಂದು ಒಂದು ದಿನ ನನಗೆ ತಿಳಿಸಲಾಯಿತು. ಆದರೆ ಕಾಂಗ್ರೆಸ್ಸಿಗರ ಈ ತಂತ್ರ ಫಲ ಕೊಡಲಿಲ್ಲ.

1955 ಜನವರಿ 12-13 ರಂದು ನಾನು ವಿಜಯನಗರ ಮತ್ತು ವಿಶಾಖಪಟ್ಟಣಂ ನಲ್ಲಿ ಎರಡು ಬೃಹತ್ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದೆ. ಆಂಧ್ರಪ್ರದೇಶದಲ್ಲಿ ಕಮ್ಯುನಿಸ್ಟ್ ಪಕ್ಷ ಗೆದ್ದರೆ ಅದು ಇಡೀ ದೇಶದ ಎಲ್ಲ ದುಡಿಯುವ ಜನರ ವಿಜಯವಾಗುತ್ತದೆ ಎಂದು ಈ ಸಭೆಗಳಲ್ಲಿ ನಾನು ಹೇಳಿದ್ದು ಇಂದಿಗೂ ನೆನಪಿದೆ.

ಆದರೆ ಕಾಂಗ್ರೆಸ್ ಗೆದ್ದಿತು. ನಮ್ಮ ಸೋಲಿನ ಕಾರಣಗಳನ್ನು ಕೇಂದ್ರ ಸಮಿತಿಯಲ್ಲಿ ಚರ್ಚಿಸಲಾಯಿತು ಆ ಚುನಾವಣೆಯ ಫಲಿತಾಂಶ ಹೀಗಿತ್ತು:

ಒಟ್ಟು ಸ್ಥಾನಗಳು	196
ಕಾಂಗ್ರೆಸ್ ನೇತೃತ್ವದ ಸಂಯುಕ್ತ ರಂಗ	146
ಕಮ್ಯುನಿಸ್ಟ್ ಪಕ್ಷ	15
ಪಿಎಸ್‌ಪಿ	13
ಸ್ವತಂತ್ರ ಪಕ್ಷ	22
ಒಟ್ಟು ಮತದಾರರು	86,30,311
ಕಾಂಗ್ರೆಸ್ ಮತ ಹಾಕಿದವರು	42,65,814
ಕಮ್ಯುನಿಸ್ಟ್ ಪಕ್ಷಕ್ಕೆ	29.95,562

(ಅಂದರೆ ಒಟ್ಟು ಮತದಾರರ ಪೈಕಿ ಶೇ. 30 ರಷ್ಟು ಜನರು'ನಮ್ಮ ಪಕ್ಷಕ್ಕೆ ಓಟು ನೀಡಿದ್ದರು)

ಹಿಂದಿನ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷ 14 ಲಕ್ಷ ಮತಗಳನ್ನು ಪಡೆದು .67 ಸ್ಥಾನಗಳಲ್ಲಿ ಗೆದ್ದಿತ್ತು. 1955ರ ಸೋಲು ಆಂದ್ರಪ್ರದೇಶದ ಪಕ್ಷದ ಕಾರ್ಯಕರ್ತರಲ್ಲಿ ಒಂದು ರೀತಿಯ ಗೊಂದಲವನ್ನು ಹುಟ್ಟಿಸಿದ್ದು ನಿಜ.

ಆಸಕ್ತಿದಾಯಕ ಘಟನೆಗಳು:

ಆ ವರ್ಷ ರಾಜಕೀಯ ರಂಗದಲ್ಲಿ ಅನೇಕ ಅಸಕ್ತಿಕರ ಘಟನೆಗಳು ನಡೆದವು. ಗೋವಾ ವಿಮೋಚನೆ ಸಮರ, ರಾಜ್ಯಗಳ ಸಂಘಟನೆ ಬಗ್ಗೆ ಪಶ್ಚಿಮ ಬಂಗಾಳ ವಿಧಾನಸಭೆಯಲ್ಲಿ ಚರ್ಚೆ, ಕರಾಳ ಕಾನೂನಿನ ವಿಸ್ತರಣೆಯ ವಿರುದ್ಧ ಚಳವಳಿ ಇವುಗಳು ಪ್ರಮುಖವಾದವು.

ನಮ್ಮ ಪಕ್ಷದ ಎಲ್ಲ ಮುಂಚೂಣಿ ಸಂಘಟನೆಗಳು ಈ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡವು. ಅದು ನಮ್ಮ ಆಂದೋಲನಕ್ಕೆ ಚೈತನ್ಯ ಕೊಡಲು ನೆರವಾಯಿತು. ಎಲ್ಲ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ, ಕಾಂಗ್ರೆಸ್ ವಿರೋಧಿ ಶಕ್ತಿಗಳನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಒಂದೇ ವೇದಿಕೆಗೆ ತರಲು ಸಾಧ್ಯವಾಯಿತು.

ಪರಿಮಿತ ಮತದಾನದ ಆಧಾರದಲ್ಲಿ ಬರ್ಧಮಾನ್ ಪುರಸಭೆಗೆ ಫೆಬ್ರವರಿ 16 ರಂದು ಚುನಾವಣೆ ನಡೆಯಿತು. ನಾನು ಪ್ರಚಾರದಲ್ಲಿ ಪಾಲ್ಗೊಂಡೆ ಕಮ್ಯುನಿಸ್ಟ್ ಪಕ್ಷದ ಮುತುವರ್ಜಿ ಮೇರೆಗೆ ರೂಪುಗೊಂಡ ಪ್ರಜಾಸತ್ತಾತ್ಮಕ ನಾಗರೀಕರ ಸಮಿತಿ 25 ಸ್ಥಾನಗಳ ಪೈಕಿ 10 ರಲ್ಲಿ ಗೆದ್ದಿತು. ಕಾಂಗ್ರೆಸ್ 9 ಹಾಗೂ ಪಕ್ಷೇತರರು ಆರು ಸ್ಥಾನಗಳಲ್ಲಿ ಗೆದ್ದರು ಪರಿಮಿತಿ ಮತದಾನ ವ್ಯವಸ್ಥೆಯಡಿ ಪ್ರಜಾಸತ್ತಾತ್ಮಕ ನಾಗರಿಕ ಸಮಿತಿ ಪಡೆದ ಗೆಲವು ಮಹತ್ವದ್ದಾಗಿತ್ತು.

ಸ್ಥಳೀಯಾಡಳಿತ ಸಚಿವ ಈಶ್ವರ ದಾಸ್ ಜಲಾನ್ ಫೆಬ್ರವರಿ 18 ರಂದು ಕಲ್ಕತ್ತ ಮುನ್ಸಿಪಾಲ್ ಕಾನೂನಿಗೆ (1951) ಒಂದು ತಿದ್ದುಪಡಿಯನ್ನು

(ಮುಂದುವರಿಯುವುದು)

ಚುನಾವಣಾ ಸುಧಾರಣೆಗಾಗಿ, ಒಕ್ಕೂಟ ಸ್ವರೂಪವನ್ನು ಬಲಪಡಿಸುವುದಕ್ಕಾಗಿ ಅಥವಾ ಜನಗಳ ಉದ್ಯೋಗ, ಶಿಕ್ಷಣ ಇತ್ಯಾದಿ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿ ಮಾಡುವುದಕ್ಕಾಗಿ ಸಂವಿಧಾನ ತಿದ್ದುಪಡಿ ತರಬೇಕೆಂಬುದು ಬಿಜೆಪಿಯ ಆಶಯವಲ್ಲ, ಏಕೆಂದರೆ ಆಗ ಇಂತಹ ಪರಾಮರ್ಶೆ ಆಯೋಗದ ಅಗತ್ಯವಿಲ್ಲ. ಆರ್.ಎಸ್.ಎಸ್. ನ ದೀರ್ಘಾವಧಿಯ ಅಜೆಂಡಾವನ್ನು ದೇಶದ ಅಜೆಂಡಾವಾಗಿಸುವುದೇ, ಅದರ ಮುಖ್ಯ ಉದ್ದೇಶ. ಈ ಆಯೋಗಕ್ಕೆ ನೇಮಿಸಲ್ಪಟ್ಟ ಹಲವು ಹೆಸರುಗಳು ಇದನ್ನು ಸಾಬೀತು ಮಾಡಿವೆ.

ಸಂವಿಧಾನ ಪರಾಮರ್ಶೆ ಆಯೋಗ

ಕಾವೀ ಅಜೆಂಡಾ ಹೇರಲೊಂದು ಕುಂಟು ನೆಪ

ರಾಷ್ಟ್ರಪತಿಗಳ ನೇರ ಟಿಪ್ಪಣಿ ಹಾಗೂ ದೇಶಾದ್ಯಂತ ವ್ಯಾಪಕ ವಿರೋಧವಿದ್ದಾಗ್ಯೂ ವಾಜಪೇಯಿ ಸರಕಾರ ಸಂವಿಧಾನ ಪರಾಮರ್ಶೆಗೆ ಆಯೋಗವನ್ನು ನೇಮಿಸಿಯೇ ಬಿಟ್ಟಿದೆ. ಅದರ ಅಧ್ಯಕ್ಷರೂ ಸೇರಿದಂತೆ ಹನ್ನೊಂದು ಸದಸ್ಯರ ಹೆಸರನ್ನು ಪ್ರಕಟಿಸಿದೆ. ಬಿಜೆಪಿ ಈ ಪ್ರಶ್ನೆಗೆ ಎಷ್ಟೊಂದು ಮಹತ್ವ ಕೊಡುತ್ತಿದೆ ಎಂಬುದನ್ನು ಈ ತರಾತುರಿಯೇ ಸೂಚಿಸುತ್ತಿದೆ.

ಈ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಾ ಈ ಆಯೋಗದ ಶಿಫಾರಸುಗಳು ಸಂಸತ್ತಿನ ಎದುರು ಬರಲೇಬೇಕು, ಯಾವುದೇ ತಿದ್ದುಪಡಿ ಸಂವಿಧಾನದಲ್ಲಿ ವಿಧಿಸಿದ ವಿಧಾನಗಳ ಪ್ರಕಾರವೇ ನಡೆಯುತ್ತದೆ ಎಂದು ಸರಕಾರದ ವಕ್ತಾರರು ಹೇಳುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ಸಂಗತಿ. ಆದ್ದರಿಂದ ಈ ಆಯೋಗಕ್ಕೆ ಸಂಸತ್ತಿನ ಮಂಜೂರಾತಿ ಇಲ್ಲ ಎಂಬ ಟೀಕೆಯನ್ನು ಎದುರಿಸುವುದಕ್ಕಾಗಿ ಕೊಟ್ಟಿರುವ ಟೊಳ್ಳು ಸಮರ್ಥನ ಇದು ಎಂಬುದು ಸ್ಪಷ್ಟ.

ಸಂವಿಧಾನ ಕೇವಲ ಒಂದು ಕಾನೂನಿನ ದಸ್ತಾವೇಜು ಅಲ್ಲ. ಆದ್ದರಿಂದ ಅದನ್ನು ಕೆಲವರು ಕಾನೂನಿನ ತಜ್ಞರು ಅಥವಾ ಸಂವಿಧಾನ ತಜ್ಞರು ಪರಾಮರ್ಶೆ ಮಾಡುವಂತಿಲ್ಲ. ಸಂವಿಧಾನ ಪರಾಮರ್ಶೆಯ ವಿಸ್ತಾರ ಮತ್ತು ನಿಬಂಧನೆಗಳನ್ನು ಭಾರತೀಯ ಜನತೆ ಆರಿಸಿದ ಸಂಸತ್ತು ಮಾತ್ರವೇ ನಿರ್ಧರಿಸಲು ಸಾಧ್ಯ.

ಏಕಾದರೂ ಈ ಆಯೋಗ?

ಸಂಸತ್ತನ್ನು ಬದಿಗೊತ್ತಲು ಸಾಧ್ಯವಿಲ್ಲದಿರುವಾಗ ಈ ಆಯೋಗದ ನೇಮಕದಿಂದ ತೊಂದರೆಯೇನು? ಇದು ಕೆಲವರು ಕೇಳುವ ಪ್ರಶ್ನೆ. ಇದಕ್ಕೆ ತದ್ವಿರುದ್ಧವಾದ ಇನ್ನೊಂದು ಪ್ರಶ್ನೆಯನ್ನು ಕೇಳಲಾಗುತ್ತಿದೆ. ಸ್ವತಃ ರಾಷ್ಟ್ರಪತಿಗಳಿಂದ ಹಾಗೂ ದೇಶದೆಲ್ಲೆಡೆಯಿಂದ ಟೀಕೆಗಳನ್ನು ಕಂಡು ಸಂವಿಧಾನದ ಮೂಲಭೂತ ಸ್ವರೂಪವನ್ನು ಬದಲಿಸಲಾಗುವುದಿಲ್ಲ ಎಂದು ಹೇಳಿರುವಾಗ ಈ ಪರಾಮರ್ಶೆ ಆಯೋಗದ ಅಗತ್ಯವಾದರೂ ಏನಿತ್ತು ಎಂಬುದೇ ಆ ಪ್ರಶ್ನೆ.

ಸಂಸತ್ತಿನ ಈಗಿನ ಬಲಾಬಲಗಳಿಂದಾಗಿ ಸಂವಿಧಾನದಲ್ಲಿ ತನಗೆ ಅಗತ್ಯವೆನಿಸುವ ಯಾವುದೇ ಮೂಲಭೂತ ಬದಲಾವಣೆ ಸಾಧ್ಯವಿಲ್ಲ ಎಂಬು ಸಂಗತಿ ಬಿಜೆಪಿಗೆ ಚೆನ್ನಾಗಿ ಗೊತ್ತಿದೆ. ಆದರೆ ಅದರ ಉದ್ದೇಶ ತಕ್ಷಣದ್ದಲ್ಲ, ದೀರ್ಘಕಾಲದ್ದು. ಅದರ ಈ ದೀರ್ಘಕಾಲದ ಉದ್ದೇಶವೆಂದರೆ ಆರ್.ಎಸ್.ಎಸ್. ನ ಧರ್ಮನಿರಪೇಕ್ಷತಾ-ವಿರೋಧಿ, ಸರ್ವಾಧಿಕಾರಶಾಹಿ ಸಿದ್ಧಾಂತಕ್ಕೆ ಅನುಗುಣವಾದ ಆದರೆ ಸಂವಿಧಾನದ ಈಗಿನ ಧರ್ಮನಿರಪೇಕ್ಷೆ, ಸಂಸದೀಯ ಪ್ರಜಾಪ್ರಭುತ್ವ ಸ್ವರೂಪಕ್ಕೆ ವಿರುದ್ಧವಾದ ವಿಷಯಗಳನ್ನು ಹೇಗಾದರೂ ಚರ್ಚೆಗೆ ಎಳೆಯುವುದು. ಈ ಆಯೋಗಕ್ಕೆ ಆರಿಸಿದ ಸದಸ್ಯರ ಹಿನ್ನೆಲೆ-ಮುನ್ನೆಲೆಗಳೂ ಇದನ್ನೇ ಸಾರುತ್ತಿವೆ.

ನಿಜ, ಸಂವಿಧಾನ ಪರಾಮರ್ಶೆ ಸಮಿತಿಯಲ್ಲಿ ಇರುವ ಯೋಗ್ಯತೆ-ಸ್ಥಾನಮಾನಗಳಲ್ಲಿರುವ ಮೂವರು ನಿವೃತ್ತ ನ್ಯಾಯಾಧೀಶರುಗಳು ಇದ್ದಾರೆ - ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿರುವ ಇನ್ನಿಬ್ಬರು ನ್ಯಾಯಮೂರ್ತಿಗಳಾದ ಜೀವನರೆಡ್ಡಿ ಮತ್ತು ಸರ್ಕಾರಿಯಾ. ಈ ಮೂವರೂ ನ್ಯಾಯಾಧೀಶರು ಸಂವಿಧಾನಕ್ಕೆ ಆಗಬೇಕಾಗಿರುವ ತಿದ್ದುಪಡಿಗಳ ಬಗ್ಗೆ ಈಗಾಗಲೇ ಸಲಹೆ-ಸೂಚನೆಗಳನ್ನು ಕೊಟ್ಟಿದ್ದಾರೆ. ಉದಾಹರಣೆಗೆ, ನ್ಯಾಯಮೂರ್ತಿ ಸರ್ಕಾರಿಯಾ ಅಧ್ಯಕ್ಷತೆಯ ಆಯೋಗದ ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತಂತೆ ಮಾಡಿದ ಶಿಫಾರಸುಗಳು ಎರಡು ದಶಕಗಳ ನಂತರವೂ ಧೂಳು ತಿನ್ನುತ್ತಿವೆ. ಕಾನೂನು ಆಯೋಗದ ಅಧ್ಯಕ್ಷರಾಗಿ ನ್ಯಾಯಮೂರ್ತಿ ಜೀವನರೆಡ್ಡಿ ಚುನಾವಣಾ ಸುಧಾರಣೆಗಳನ್ನು ಕುರಿತು ಹಲವು ಪ್ರಸ್ತಾವಗಳನ್ನು ಮುಂದಿಟ್ಟಿದ್ದಾರೆ. ಆದರೆ ವಾಜಪೇಯಿ ಸರಕಾರಕ್ಕೆ ನಿಜವಾಗಿ ಇಂತಹ ಬದಲಾವಣೆ ಬೇಕಿಲ್ಲ. ಅದಕ್ಕೆ ಎಂತಹ ಬದಲಾವಣೆ ಬೇಕು ಎನ್ನುವುದು ಅದು ನೇಮಿಸಿದ ಈ ಆಯೋಗದ ಇತರ ಸದಸ್ಯರ ಹೆಸರುಗಳನ್ನು ಕಂಡರೆ ಬೆಳಕಿನಷ್ಟು ಸ್ಪಷ್ಟವಾಗುತ್ತದ.

ಬಿಜೆಪಿ ಕೃಪಾ ಪೋಷಿತರು

ಉದಾಹರಣೆಗೆ ಒಬ್ಬ ನಿವೃತ್ತ ಅಧಿಕಾರಶಾಹಿ ಸುಭಾಷ್ ಕಶ್ಯಪ್‌ರ ಹೆಸರನ್ನು ಪರಿಶೀಲಿಸಿ. ಇದು ಈ ಆಯೋಗಕ್ಕೆ ಏನೇನೂ ಸೂಕ್ತವಲ್ಲದ ಹೆಸರು. ಈತ ಲೋಕಸಭೆಯ ಮಾಜಿ ಮಹಾಕಾರ್ಯದರ್ಶಿಯಾಗಿ ಕೆಲಸ ಮಾಡಿದವರು ಎಂಬ ಕಾರಣಕ್ಕಾಗಿ ಆತನನ್ನು ನೇಮಿಸಿದ್ದಲ್ಲ. ಈತ ನಿವೃತ್ತನಾದ ನಂತರ ಕಳೆದೆರಡು ವರ್ಷಗಳಲ್ಲಿ ಬಿಜೆಪಿಯ ಅತ್ಯಂತ ವಾಚಾಳಿ ವಕ್ತಾರನಾಗಿ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಾಜಪೇಯಿ ಸರಕಾರದ ಈ ಹಿಂದಿನ ಅವತಾರದಲ್ಲಿ ಎರಡೆರಡು ಬಾರಿ ಬಿಹಾರ ಸರ್ಕಾರದ ವಿರುದ್ಧ 356ನೇ ಕಲಮನ್ನು ದುರುಪಯೋಗಪಡಿಸಿಕೊಂಡದ್ದನ್ನು ಸಮರ್ಥಿಸಿಕೊಂಡಾತ ಇವರು. ಎಐಎಡಿಎಂಕೆ ತನ್ನ ಬೆಂಬಲವನ್ನು ಹಿಂತೆಗೆದುಕೊಂಡ ನಂತರ ವಾಜಪೇಯಿ ಸರಕಾರ ವಿಶ್ವಾಸಮತ ಪಡೆಯಬೇಕು ಎಂದು ರಾಷ್ಟ್ರಪತಿಗಳು ಸೂಚಿಸಿದಾಗ ರಾಷ್ಟ್ರಪತಿಗಳನ್ನು ಟೀಕಿಸಿದ ಪ್ರಮುಖರಲ್ಲಿ ಇವರೊಬ್ಬರು. 'ಸ್ಥಿರ ಸರ್ಕಾರ' ಕೊಡಲು ಸಂಸತ್ತಿನ ಮೇಲೆ ಕೆಲವು ಮಿತಿಗಳನ್ನು ಹಾಕಬೇಕೆಂಬ ಬಿಜೆಪಿಯ ಪಥ್ಯವನ್ನು ಸಂಪೂರ್ಣವಾಗಿ ಬೆಂಬಲಿಸುವ, ಆಳುವ ಪಕ್ಷವನ್ನು ಸುಪ್ರೀತಗೊಳಿಸಲು ಅಧ್ಯಕ್ಷ ಮಾದರಿ ಸರಕಾರದ ಶಿಫಾರಸು ನೀಡಲು ತುದಿಗಾಲ ಮೇಲೆ ನಿಂತಿರುವ ವ್ಯಕ್ತಿಯೀತ.

ಮತ್ತೊಂದು ವಿಚಿತ್ರ ಆಯ್ಕೆಯನ್ನು ನೋಡಿ ಪಿ.ಎ.ಸಂಗ್ಮಾರನ್ನು ನೇಮಿಸಿದ್ದು ಅವರು ಲೋಕಸಭಾಧ್ಯಕ್ಷರು ಎಂಬ ಕಾರಣಕ್ಕಾಗಿ ಅಲ್ಲ. ತನ್ನ ಪಕ್ಷ ಎನ್.ಸಿ.ಪಿ. ಸಂವಿಧಾನ ಪರಾಮರ್ಶೆಯನ್ನು ಬಲವಾಗಿ ವಿರೋಧಿಸಿದರೂ ಈ ವ್ಯಕ್ತಿಗೆ ಇಂತಹ ಪರಾಮರ್ಶೆ ಆಯೋಗದಲ್ಲಿ ಸೇರಲು ಎಳ್ಳಷ್ಟು ಹಿಂಜರಿಯಲಿಲ್ಲ. ಅಷ್ಟೇ ಅಲ್ಲ, ತಕ್ಷಣ ಆತ ವಿದೇಶಿ ಮೂಲದ ವ್ಯಕ್ತಿಗಳು ಸರಕಾರದಲ್ಲಿ ಅಧಿಕಾರದ ಸ್ಥಾನಗಳನ್ನು ಹೊಂದದಂತೆ ನಿಷೇಧಿಸುವ ಅಂಶವನ್ನು ಆಯೋಗ ಕೈಗೆತ್ತಿಕೊಳ್ಳಬೇಕು ಎಂದು ಸಾರಿದರು! 11ನೇ ಲೋಕಸಭೆಯ ಅಧ್ಯಕ್ಷರಾಗಿ ಸರಕಾರದ 'ಸ್ಥಿರತೆ'ಯ ಹೆಸರಲ್ಲಿ ಹಲವು ಪ್ರಸ್ತಾವಗಳನ್ನು ಸೂಚಿಸಿದ ಬಿಜೆಪಿಯ ಯೋಜನೆಗಳಿಗೆ ಅನುಗುಣವಾಗಿರುವ 'ಕೀರ್ತಿ' ಇವರದ್ದು. ಮೇಘಾಲಯದಲ್ಲಿ ತನ್ನ ಪಕ್ಷದ ಮುಖಂಡತ್ವದ ಆಶಯಗಳಿಗೆ ವಿರುದ್ಧವಾಗಿ ಬಿಜೆಪಿಯೊಂದಿಗೆ ಕೈಜೋಡಿಸಿ ಸರಕಾರ ರಚಿಸಿದ್ದಕ್ಕೆ ವಾಜಪೇಯಿ ಸರಕಾರ ಆತನಿಗೆ ನೀಡಿರುವ ಬಹುಮಾನ ಇದು.

ಈ ಆಯೋಗಕ್ಕೆ ನೇಮಕಗೊಂಡ ಮತ್ತೊಬ್ಬರೆಂದರೆ ಸುಮಿತ್ರಾ ಕುಲಕರ್ಣಿ. ಅವರೊಬ್ಬ 'ಸಾಮಾಜಿಕ ಕಾರ್ಯಕರ್ತೆ, ಮಹಾತ್ಮಗಾಂಧಿಯವರ ಮೊಮ್ಮಗಳು' ಎಂದು ವರ್ಣಿಸಲಾಗಿದೆ. ಆದರೆ ಆಕೆಯ ನೇಮಕವೂ ಈ ಕಾರಣಕ್ಕಾಗಿಯಲ್ಲ. ಎರಡು ವರ್ಷಗಳ ಹಿಂದೆ ಆಕೆ ಬಿಜೆಪಿ ಸೇರಿದ್ದರು ಎಂಬ ಅಂಶ ಅಧಿಕೃತ ಪತ್ರಿಕಾ ಹೇಳಿಕೆಯಲ್ಲಿ ಇಲ್ಲ.

ಬಂಡವಾಳಶಾಹಿಗಳ ಒಂದು ಪ್ರಮುಖ ಮುಖವಾಣಿ 'ಸ್ಟೇಟ್ಸ್‌ಮನ್' ದೈನಿಕದ ಸಂಪಾದಕ ಸಿ.ಆರ್.ಇರಾನಿಯವರೂ ಈ ಆಯೋಗದ ಸದಸ್ಯರು. ಈ ನೇಮಕವೂ ಆತನೊಬ್ಬ ಪ್ರಮುಖ ಪತ್ರಕರ್ತನೆಂಬುದಕ್ಕಿಂತ ಹೆಚ್ಚಾಗಿ ದೊಡ್ಡ ಬಂಡವಾಳಗಾರರ ವಕ್ತಾರ, ಅದಕ್ಕೂ ಮುಖ್ಯವಾಗಿ ಕಲ್ಕತ್ತಾದಿಂದ ಸಿಪಿಐ(ಎಂ) ಮತ್ತು ಎಡರಂಗ ಸರ್ಕಾರವನ್ನು ಹೀಗಳೆಯುವುದರಲ್ಲಿ ಪಾರಂಗತ ಎಂಬ ಕಾರಣಕ್ಕಾಗಿ.


ಮತ್ತೊಬ್ಬ ಸದಸ್ಯ ಸೋಲಿ ಸೊರಬ್‌ಜೀ ಕಳೆದೆರಡು ವರ್ಷಗಳಿಂದ ವಾಜಪೇಯಿ ಸರಕಾರದ ಅಟಾರ್ನಿ ಜನರಲ್ ಆಗಿರುವವರು, ಬಿಹಾರದಲ್ಲಿ 356 ನೇ ಕಲಮನ್ನು ಎರಡೆರಡು ಬಾರಿ ದುರುಪಯೋಗಪಡಿಸಿಕೊಂಡ ಸರಕಾರದ ಸಲಹಾಗಾರರು!

ಬೌದ್ಧಿಕ ಕಸರತ್ತು ಏತಕ್ಕಾಗಿ?

ಇಂತಹ ವ್ಯಕ್ತಿಗಳಿಂದ ಒಂದು ಆಯೋಗ ಮಾಡುವ 'ಸಮಗ್ರ ಪರಾಮರ್ಶೆ' ಯಾವ ಉಪಯೋಗಕ್ಕೆ ತಾನೇ ಬಂದೀತು? ಹೌದು, ಈ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿರುವ ನ್ಯಾಯಮೂರ್ತಿ ವೆಂಕಟಾಚಲಯ್ಯರ ವಿಶ್ವಾಸಾರ್ಹತೆ, ಬೌದ್ಧಿಕ ಸಮಗ್ರತೆ ಪ್ರಶ್ನಾತೀತ. ಆದರೆ ಅವರೇ ಇದೊಂದು ಅಕೆಡೆಮಿಕ್ ಅಥವಾ ಬೌದ್ಧಿಕ ಕಸರತ್ತು ಎಂದು ಒಪ್ಪಿಕೊಂಡಿದ್ದಾರೆ. ಈ ಮೇಲೆ ಹೇಳಿದಂತೆ ಸಂವಿಧಾನದ ಮೂಲಭೂತ ರಚನೆಯನ್ನು ಮುಟ್ಟುವುದಿಲ್ಲ. ಪರಾಮರ್ಶೆ ಸಂಸದೀಯ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೇ ನಡೆಯುತ್ತದೆಂದಾದರೆ ಈ ಪರಾಮರ್ಶೆ ಆಯೋಗದ ಅಗತ್ಯವಾದರೂ ಏನು ಎಂಬ ಪ್ರಶ್ನೆ ಉಳಿದೇ ಉಳಿಯುತ್ತದೆ.

ನಿಜಕ್ಕೂ ಈ ಸರಕಾರಕ್ಕೆ ಕೇಂದ್ರ-ರಾಜ್ಯ ಸಂಬಂಧಗಳ ಹಾಗೂ ಚುನಾವಣಾ ವ್ಯವಸ್ಥೆಯ ವಿಮರ್ಶೆ ನಡೆಸಬೇಕೆಂದಿದ್ದರೆ, ಈ ಮೇಲೆ ಹೇಳಿದಂತೆ ಈಗ ಈ ಆಯೋಗದ ಸದಸ್ಯರಾಗಿ ನೇಮಕಗೊಂಡಿರುವ ನ್ಯಾಯಮೂರ್ತಿ ಸರ್ಕಾರಿಯಾ ಹಾಗೂ ನ್ಯಾಯಮೂರ್ತಿ ಜೀವನರೆಡ್ಡಿಯವರ ಆಯೋಗಗಳು ಈಗಾಗಲೇ ಸಲ್ಲಿಸಿರುವ ಶಿಫಾರಸುಗಳನ್ನು ಪರಿಶೀಲಿಸಿ, ಸೂಕ್ತ ಸಂವಿಧಾನ ತಿದ್ದುಪಡಿ ಶಾಸನಗಳನ್ನು ತಂದರೆ ಸಾಕು.

ಆದರೆ ಬಿಜೆಪಿಗೆ ಬೇಕಾಗಿರುವುದು ಇದಲ್ಲ. ಚುನಾವಣಾ ಸುಧಾರಣೆಗಾಗಿ, ಒಕ್ಕೂಟ ಸ್ವರೂಪವನ್ನು ಬಲಪಡಿಸುವುದಕ್ಕಾಗಿ, ಜನಗಳ ಶಿಕ್ಷಣ, ಉದ್ಯೋಗ ಮತ್ತಿತರ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ ಸಂವಿಧಾನ ತಿದ್ದುಪಡಿ ತರಬೇಕೆಂಬುದು ಬಿಜೆಪಿಯ ಆಶಯವಲ್ಲ. ಆರ್.ಎಸ್.ಎಸ್.ನ ದೀರ್ಘಾವಧಿಯ ಅಜೆಂಡಾವನ್ನು ಅಂದರೆ ತನ್ನ ಸರ್ವಾಧಿಕಾರಶಾಹಿ ಹಿಂದುತ್ವಕ್ಕೆ ಅನುಗುಣವಾಗಿ ಸಂವಿಧಾನವನ್ನು ಮತ್ತೆ ಬರೆಯುವ ಅಜೆಂಡಾವನ್ನು ದೇಶದ ಅಜೆಂಡಾವಾಗಿಸುವುದೇ ಅದರ ನಿಜವಾದ ಉದ್ದೇಶ. ಸಂವಿಧಾನ ಪರಾಮರ್ಶೆಯ ಪ್ರಶ್ನೆಯನ್ನು ಉದಾರಮನೋಭಾವದ ಹಲವರು ಕಾನೂನು-ಸಂವಿಧಾನದ ಚೌಕಟ್ಟಿನಾಚೆಗೆ ನೋಡದೆ ಬಿಜೆಪಿಯ ಈ ಮೂಲಭೂತ ಒತ್ತನ್ನು ಕಾಣಲಾರದೇ ಹೋಗಿರುವುದು ನಿಜಕ್ಕೂ ದುರದೃಷ್ಟಕರ.



ಸಂವಿಧಾನ ಪರಾಮರ್ಶೆ ಆಯೋಗ

ಫೆಬ್ರವರಿ 13 ರಂದು ವಾಜಪೇಯಿ ಸರಕಾರ ಸಂವಿಧಾನ ಪರಾಮರ್ಶೆ ಆಯೋಗ ಸದಸ್ಯರುಗಳನ್ನು ಪ್ರಕಟಿಸಿತು. ಈ ಆಯೋಗ 'ಸಂಸದೀಯ ಪ್ರಜಾಪ್ರಭುತ್ವದ ಚೌಕಟ್ಟಿನೊಳಗೆ ಬದಲಾವಣೆಗಳು ಏನಾದರೂ ಅಗತ್ಯವಿದ್ದರೆ ಅವನ್ನು ಒಂದು ವರ್ಷದೊಳಗೆ' ಸೂಚಿಸುವ ವರದಿಯನ್ನು ಸಲ್ಲಿಸುತ್ತದೆ ಎಂದು ನಿರೀಕ್ಷಿಸಲಾಗಿದೆಯಂತೆ. ಆಯೋಗದ ಸದಸ್ಯರುಗಳ ಹೆಸರುಗಳು ಹೀಗಿವೆ -

ನಿವೃತ್ತ ನ್ಯಾಯಮೂರ್ತಿ **ಎಂ.ಎನ್.ವೆಂಕಟಾಚಲಯ್ಯ**, ಅಧ್ಯಕ್ಷರು

ನಿವೃತ್ತ ನ್ಯಾಯಮೂರ್ತಿ **ಆರ್.ಎಸ್.ಸರ್ಕಾರಿಯಾ**, ಕೇಂದ್ರ - ರಾಜ್ಯ ಸಂಬಂಧಗಳ ಕುರಿತು ಆಯೋಗದ ಮುಖ್ಯಸ್ಥರಾಗಿದ್ದವರು.

ನ್ಯಾಯಮೂರ್ತಿ **ಬಿ.ಪಿ.ಜೀವನರೆಡ್ಡಿ**, ಕಾನೂನು ಆಯೋಗದ ಮುಖ್ಯಸ್ಥರಾಗಿದ್ದವರು.

ನ್ಯಾಯಮೂರ್ತಿ **ಕೊಂಡಪ್ಪಲ್ಲಿ ಪುನ್ನಯ್ಯ**, ನಿವೃತ್ತ ಆಂಧ್ರ ಹೈಕೋರ್ಟ್ ನ್ಯಾಯಾಧೀಶರು

ಸೋಲಿ ಸೋರಬ್‌ಜೀ, ಹಾಲಿ ಅಟಾರ್ನಿ ಜನರಲ್

ಪರಾಸರನ್, ಮಾಜಿ ಅಟಾರ್ನಿ ಜನರಲ್

ಪಿ.ಎ.ಸಂಗ್ಮಾ, ಮಾಜಿ ಲೋಕಸಭಾಧ್ಯಕ್ಷರು

ಸುಭಾಷ್ ಕಶ್ಯಪ್, ಮಾಜಿ ಲೋಕಸಭಾ ಮಹಾಕಾರ್ಯದರ್ಶಿ

ಸಿ.ಆರ್.ಇರಾನಿ, 'ಸ್ಟೇಟ್ಸ್‌ಮನ್' ದೈನಿಕದ ಪ್ರಧಾನ ಸಂಪಾದಕ

ಅಬಿದ್ ಹುಸೇನ್, ಅಮೆರಿಕಾದಲ್ಲಿ ಭಾರತೀಯ ರಾಯಭಾರಿಯಾಗಿದ್ದವರು.

ಸುಮಿತ್ರಾ ಕುಲಕರ್ಣಿ, ಮಾಜಿ ಸಂಸತ್ ಸದಸ್ಯೆ

ಹಿಂದುಸ್ತಾನ್ ಟೈಮ್ಸ್‌ನಲ್ಲಿ



ತೊಲಗು ತೊಲಗಾಚೆ ಬಿಳಿದೊಗಲ

"ತೊಲಗು ತೊಲಗಾಚೆ ಬಿಳಿದೊಗಲ ಸುರಿಗೆಗಾರ
ನಾವಲ್ಲ ತೊತ್ತು ನಿನಗಲ್ಲ ತುತ್ತು ನಮ್ಮಾಸೆ ನುಡಿ, ವಿಚಾರ
ಹೋ ಎಂಬ ವೀರಮಂತ್ರ ಮಾರ್ಮೊರೆದುದಭ್ರದಲ್ಲಿ"

ಇದು 1927 ರಲ್ಲಿ ಭಾರತಕ್ಕೆ ಭೇಟಿ ಕೊಟ್ಟ ಸೈಮನ್ ಎಂಬ ರಾಜದೂತರನ್ನು ಎದುರಿಸಿದ ಧ್ವನಿ. 'ಸೈಮನ್ ಗೋ ಬ್ಯಾಕ್' ದೇಶದ ಉದ್ದಗಲಕ್ಕೂ ಮೊಳಗಿದ ಕಹಳೆಯಿದು.ಸೈಮನ್ ತೆಪ್ಪಗೆ ಹಿಂದಿರುಗಬೇಕಾಯಿತು. ಆದರೆ ಇಂದು ಭಾರತ ಸ್ವತಂತ್ರವಾದ 52 ವರ್ಷಗಳತರುವಾಯ ಸ್ವತಂತ್ರ ಸಾರ್ವಭೌಮ ಗಣತಂತ್ರವಾದ 50 ವರ್ಷಗಳ ನಂತರ ಇಂದಿನ ಜಗತ್ತಿನ ಸಾರ್ವಭೌಮನಂತೆ ವರ್ತಿಸುತ್ತಿರುವ ಜಗತ್ತಿನ ಸಾಮಾನ್ಯ ಜನರ ಜೀವ ಹಿಂಡುವುದರಲ್ಲಿ ಅಗ್ರಮಾನ್ಯವಾಗಿರುವ ಇರಾಕ್, ಯುಗೋಸ್ಲಾವಿಯಾಗಳಲ್ಲಿ ರಕ್ತದ ಹೊಳೆ ಹರಿಸಿರುವ, ಮರಣದ ಮೆರವಣಿಗೆಗೆ ಕಾರಣವಾಗಿರುವ ಕ್ಲಿಂಟನ್ ದೊರೆಯನ್ನು ಸ್ವಾಗತಿಸಲು ದಿಲ್ಲಿಯ ಸರ್ಕಾರ ಸಂಭ್ರಮ ಪಡುತ್ತಿದೆ. ನಡ ಮುಡಿಗೆ ಹಾಸಿ 'ಹೆಜ್ಜೆ ಹೆಜ್ಜೆಗೆ ಏಳೇಳ ಎಳಿ ದೀಪ ಹಚ್ಚೇವ ಬಾಸ್ವಾಮಿ ಕುಂಡ್ರಾಕರೆ" 'ಕುಂಬಳನಿಂದೋ, ಕುಡಗೋಲನಿಂದೋ ಹೆಂಗರೆ ಹೆರಚಿಂತಂದೇವ' ಎಂದು ಹಲವು ರಾಜ್ಯಗಳ ಮುಖ್ಯಮಂತ್ರಿಗಳು ದುಂಬಾಲು ಬೀಳುತ್ತಿದ್ದಾರೆ.

ನಾಚಿಕೇಗೇಡು! ಇಂತಹ ಸಂದರ್ಭದಲ್ಲಿ ಅಮೆರಿಕಾದ ಈ ಸಾರ್ವಭೌಮನ ಕಾಲ ತುಳಿತಕ್ಕೆ ಗುರಿಯಾಗುವುದನ್ನು ಕಷ್ಟದಿಂದ ತಪ್ಪಿಸಿಕೊಳ್ಳಲು ಹೆಣಗಾಡುತ್ತಿದ್ದ ಭಾರತವನ್ನು ಅವರ ಕಾಲಬುಡಕ್ಕೆ ಹಾಕಿ ಕೃತಾರ್ಥರಾಗಲು ಸ್ಪರ್ಧೆ ನಡೆಸುತ್ತಿರುವುದೇಕೆ ಎಂಬ ಬಗ್ಗೆ ವಿವರವಾದ ಲೇಖನ.

ಭಾರತದ ಗೋಣು ತಿರುಚಲು ಇಲ್ಲಿಯವರೆಗೆ ಅಮೆರಿಕ ನಡೆಸಿದ ಪ್ರಯತ್ನಗಳನ್ನು, ಜಗತ್ತಿನಾದ್ಯಂತ ನಡೆಸಿದ ದಾಂಧಲೆ ಹಾಗೂ ಕ್ರೌರ್ಯವನ್ನು ನೆನಪಿಗೆ ತರುವ ಲೇಖನಗಳು

ಭಾರತವನ್ನು ಛಿದ್ರ ವಿಚ್ಛಿದ್ರ ಮಾಡಲು ಬಯಸುವ ಖಳ - ಅಮೆರಿಕಾ

ಜಿ.ಎನ್.ನಾಗರಾಜ್

ಇಂದು ಯುಗೋಸ್ಲಾವಿಯಾ ಎಂಬ ದೇಶದ ದುರಂತವನ್ನು ನೆನಪಿಸಿಕೊಳ್ಳೋಣ. ಒಂದು ದೇಶವಾಗಿ ಏಳ್ಗೆ ಹೊಂದುತ್ತಿದ್ದ ಈ ದೇಶ ಕೇವಲ 7-8 ವರ್ಷಗಳಲ್ಲಿ ಸರ್ಬಿಯಾ, ಕ್ರೋಷಿಯ, ಹರ್ಷ್‌ಗೋವೇನಿಯ, ಕೊಸಾವೋ ಎಂದು ಚಿದ್ರ, ವಿಚ್ಛಿದ್ರವಾಗಿದೆ. ಲಕ್ಷಗಟ್ಟಲೆ ಜನರು ಪ್ರಾಣ ತೆತ್ತಿದ್ದಾರೆ. ಹತ್ತಾರು ಲಕ್ಷ ಜನರು ಮನೆ ಮಾರು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಮಕ್ಕಳನ್ನು ಕಳಕೊಂಡ ತಂದೆ ತಾಯಿಂದಿರ, ಸೋದರರನ್ನು ಕಳೆದುಕೊಂಡ ಸೋದರಿಯರ, ತಂದೆತಾಯಿಯನ್ನು ಕಳದುಕೊಂಡ ಮಕ್ಕಳ ರೋದನ ಮುಗಿಲು ಮುಟ್ಟುತ್ತಿದೆ. ಯುಗೋಸ್ಲಾವಿಯಾ ಎಂಬ ದೇಶದ ಕರುಳು ಒಂದೆಡೆ, ಹೃದಯವೊಂದೆಡೆ, ರುಂಡವೊಂದುಕಡೆ, ಮುಂಡವೊಂದುಕಡೆ ಚೆಲ್ಲಾಡಿ ಬಿದ್ದಿದೆ. ಏಕೆ? ಅದರ ತಪ್ಪು ಇಷ್ಟೇ. ಈಜಿಪ್ಟ್, ಭಾರತಗಳ ಜೊತೆ ಸೇರಿ ಜಗತ್ತಿನ ಬಡ ರಾಷ್ಟ್ರಗಳನ್ನೆಲ್ಲಾ ಕೂಡಿಸಿ ಅಮೆರಿಕಾ ಮತ್ತು ಅದರ ಜೊತೆಯ ಕಿರಾತಕರ ಕಾಲ್ತುಳಿತಕ್ಕೆ ಸಿಗದಂತೆ ಸಂರಕ್ಷಿಸಿದ್ದು.

ಅದೇ ಗತಿಯನ್ನು ಭಾರತಕ್ಕೂ ಕಾಣಿಸಲು ಅಮೆರಿಕ ಹಂಚಿಕೆ ಹಾಕಿತ್ತು. ಅದು ಇಂದೂ ಮುಂದುವರಿದಿದೆ. ಭಾರತ ಎಂಬ ಇಡೀ ದೇಶವನ್ನೇ ಏಕಾಪೋಶನ ಮಾಡಿ ನುಂಗಿಬಿಡುವ ಅಮೆರಿಕದ ಕುತಂತ್ರ 2-3 ದಶಕಗಳ ಕಾಲ ಸಾಕಷ್ಟು ಫಲ ನೀಡದಿದ್ದಾಗ ಜೀನ್ ಕೀರ್ತ್ ಪ್ಯಾಟ್ರಿಕ್ ಎಂಬ ಪೂತನಿ ವಿಶ್ವಸಂಸ್ಥೆಯಲ್ಲಿ ಅಮೆರಿಕದ ಪ್ರತಿನಿಧಿಯಾಗಿ ಮಂತ್ರಿ ಪದವಿಯಸಮಾನ ಸ್ಥಾನಮಾನ ಹೊಂದಿದ್ದವಳು ರೂಪಿಸಿದ ಯೋಜನೆ ಇದು - ಭಾರತವನ್ನು ತುಂಡು ತುಂಡಾಗಿ ಕತ್ತರಿಸಿದರೆ ಮಾತ್ರ ನುಂಗಲು ಸಾಧ್ಯ. ಇದು ಅವಳ ದುಷ್ಟ ಯೋಜನೆ. ಇದಕ್ಕೆ ಇಂಗ್ಲೀಷಿನಲ್ಲಿ `Balkamisation (ಬಾಲ್ಕನೈಸೇಷನ್) ಎಂದು ಕರೆದಳು. ಇದಕ್ಕನುಗುಣವಾಗಿ ಅಮೆರಿಕದ ಸರ್ಕಾರ, ಅವರ ಕ್ರೂರಾತಿಕ್ರೂರ ಗೂಢಚರ್ಯ ಸಂಸ್ಥೆ ಸಿಐಎ, ಅಮೆರಿಕದ ಹಲವು ಬುದ್ಧಿಜೀವಿಗಳು, ವಿಶ್ವವಿದ್ಯಾಲಯಗಳ ಹಣ ನೀಡುವ ದಾನಶೂರರ ನಿಧಿಗಳು ದುಡಿದವು.

ಅಸ್ಸಾಂ, ಈಶಾನ್ಯ ಭಾರತದ ಸಮಸ್ಯೆ

ಅಸ್ಸಾಂ, ಮಣಿಪುರ, ನಾಗಾಲ್ಯಾಂಡ್, ಮಿಜೋರಾಂಗಳ ಗಿರಿಜನರ ಜೀವನ, ಸಂಸ್ಕೃತಿಯನ್ನು ಅಧ್ಯಯನ ಮಾಡುವ ನೆಪದಲ್ಲಿ ವಿಶ್ವವಿದ್ಯಾಲಯಗಳ ಪ್ರೊಫೆಸರುಗಳು ಅಮೇರಿಕದ ಗೂಢಚರ್ಯೆ ಸಂಸ್ಥೆಗಳ ಹಸ್ತಕರಾಗಿ ಈ ರಾಜ್ಯಗಳನ್ನು ಪ್ರವೇಶಿಸಿದರು. ಅಲ್ಲಿಯ ಹತ್ತಾರು ಗಿರಿಜನ ಬುಡಕಟ್ಟುಗಳನ್ನು ಒಂದರ ವಿರುದ್ಧ ಮತ್ತೊಂದು ಕಟ್ಟಿದರು ಎಲ್ಲರನ್ನು ಭಾರತದ ವಿರುದ್ಧ ಎತ್ತಿಕಟ್ಟಿದರು. 'ಜಾರ್ಜ್ ವಾಶಿಂಗ್ಟನ್' ಎಂಬ ವಿಶ್ವವಿದ್ಯಾಲಯ 'ವಿಶೇಷ ಸಂಶೋಧನ ಕಛೇರಿ'(ಸೋರೋ - SORO- Special oparation Research Office) ಎಂಬ ಸಂಶೋಧನ ಸಂಸ್ಥೆ(?) ಇದರ ಮೂಲ. ಈ ಸಂಶೋಧನೆ ಯೋಜನೆಯ ಹೆಸರು 'ಆಪರೇಷನ್ ಬ್ರಹ್ಮಪುತ್ರ' ಇದಕ್ಕೆ ಜೊತೆಗೂಡಿದವರು ಫೋರ್ಡ್ ಫೌಂಡೇಷನ್, ಕ್ಯಾಲಿಫೋರ್ನಿಯ ವಿಶ್ವ ವಿದ್ಯಾಲಯದ ಹಿಮಾಲಯದ ಅಂಚಿನ ದೇಶಗಳ ನಿರ್ದೇಶಕರು ಇತ್ಯಾದಿ.

ಇವರ ಸಂಶೋಧನೆಯ ಫಲ ಅಸ್ಸಾಂನಲ್ಲಿ ಹತ್ತಾರುವರ್ಷ 'ಭಾರತದ ನಾಯಿಗಳೇ ಅಸ್ಸಾಂ ಬಿಟ್ಟು ತೊಲಗಿ' ಎಂಬ ಘೋಷಣೆ, ಅಸ್ಸಾಂ ಬಂದ್, ಅಸ್ಸಾಂನಿಂದ ಪೆಟ್ರೋಲ್ ಭಾರತಕ್ಕೆ ಹೋಗಲು ಬಿಡುವುದಿಲ್ಲ ಎಂಬ ಪ್ರಯತ್ನ, ನಾಗಾಲ್ಯಾಂಡ್, ಮಣಿಪುರ, ಮಿಜೋರಾಂಗಳಲ್ಲಿ ಭಯೋತ್ಪಾದಕರ ಹಾವಳಿ. ಇಂದೂ ಕೂಡಾ ಹತ್ತು ಹಲವು ರೂಪದಲ್ಲಿ ಮುಂದುವರಿಯುತ್ತಿದೆ. ಭಾರತದ ಹಾಗೂ ಈಶಾನ್ಯ ಭಾರತದ ಅಭಿವೃದ್ಧಿ ಹತ್ತಾರು ವರ್ಷ ಕಾಡಿದೆ, ಹಿಂದೆ ತಳ್ಳಿದೆ.

ಪಂಜಾಬ್

ಅಸ್ಸಾಂ ಜೊತೆ ಜೊತೆಗೇ ಅಮೆರಿಕ, ಕೆನಡಾ, ಬ್ರಿಟನ್‌ಗಳಲ್ಲಿದ್ದ ಸಿಕ್ ಧರ್ಮೀಯರಾದ ಭಾರತೀಯರನ್ನು ಬಳಸಿ, ಅವರಿಗೆ ರಾಜಕೀಯ ಹಾಗೂ ಮಿಲಿಟರಿ ತರಬೇತಿ ನೀಡಿ ಭಾರತದ ಮೇಲೆ ಛೂ ಬಿಟ್ಟಿತು ಅಮೆರಿಕ. 'ಖಲಿಸ್ಥಾನ್ ಜಿಂದಾಬಾದ್' ಎಂಬ ಘೋಷಣೆ ಎರಡು ದಶಕಗಳು ಮೊಳಗಿತು. ಪಂಜಾಬ್‌ನ ಹಳ್ಳಿ ನಗರಗಳು ಭಯೋತ್ಪಾದಕರ ಗೂಡುಗಳಾದವು. ಶಾಂತಿಯಿಂದ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುವುದೇ ದುಸ್ತರವಾಯಿತು. ಹತ್ತಾರು ಸಾವಿರ ಪಂಜಾಬಿಗಳ ಬರ್ಬರ ಹತ್ಯೆ ನಡೆಸಲಾಯಿತು. ಎ.ಕೆ.-47 ಹೊತ್ತು ಭಯೋತ್ಪಾದಕರ ದರ್ಬಾರು ನಡೆಯಿತು. ಸಾಮಾನ್ಯ ಪಂಜಾಬಿಗಳ ಮೇಲೆ ವಿಶೇಷ ತೆರಿಗೆ ವಸೂಲಿ ಮಾಡಲಾಯಿತು. ಮಹಿಳೆಯರ ಮೇಲೆ ಮಾನಭಂಗಗಳು, ಸುಲಿಗೆ, ದರೋಡೆಗಳು ದಿನನಿತ್ಯದ ಮಾತಾದವು. ಇಡೀ ದೇಶದ ಧಾನ್ಯದ ಕಣಜ, ಕುಶಲ ತಂತ್ರಜ್ಞರ ರಾಜ್ಯ ಪಂಜಾಬು ನರಳಿತು.

ಇದಕ್ಕೆ ಪಂಜಾಬ್ ಗಡಿಯಾದ ಪಾಕಿಸ್ತಾನದಲ್ಲಿ ನೂರಾರು ತರಬೇತಿ ಕ್ಯಾಂಪ್‌ಗಳು, ನೆಲ ಪಾಕಿಸ್ತಾನದ್ದಾದರೂ ಯೋಜನೆ, ಹಣ, ಶಸ್ತ್ರಾಸ್ತ್ರ ಅಮೆರಿಕದ ಸಿಐಎ ದ್ದು.

ಇಂದಿರಾಗಾಂಧಿಯವರ ಕೊಲೆ

ಈ ಭಯೋತ್ಪಾದಕರ ಗುಂಪಿಗೆ ಭಾರತದ ಜೊತೆಗೂಡಿ ಬದುಕ ಬಯಸಿದ ಲೊಂಗೋವಾಲ್ ಜೊತೆಗೆ ಕಾಂಗ್ರೆಸ್, ಸಿಪಿಐ, ಸಿಪಿಐ(ಎಂ) ನ ಹಲವು ನೂರು ನಾಯಕರು ಬಲಿ. ಕೊನೆಗೆ ಭಾರತದ ಪ್ರಧಾನಿ ಇಂದಿರಾಗಾಂಧಿಯೇ ಬಲಿಯಾಗ ಬೇಕಾಯಿತು. ಪಂಜಾಬನ್ನು ಭಾರತದಿಂದ ಕಿತ್ತು ಹಾಕಲೇಬೇಕೆಂಬ ಹಠದಿಂದ ಅಮೆರಿಕ ಕೆಲಸ ಮಾಡುವಾಗ ಭಾರತದ ಸೈನ್ಯದಲ್ಲಿ ಅಪಾರವಾಗಿದ್ದ ಸಿಖ್ ಜನರನ್ನು ಹೊರಗೆಳೆಯುವ ಮೂಲಕ ಸೈನ್ಯವನ್ನೇ ದುರ್ಬಲಗೊಳಿಸುವ ಕುತಂತ್ರ ಅಡಗಿತ್ತು. ಖಲಿಸ್ತಾನಿಗಳು ಯಾವ ಬೇಡಿಕೆಯನ್ನು ಯಾವಾಗ ಹೇಗೆ ಎತ್ತಬೇಕೆಂಬ ಬಗ್ಗೆ ಅಮೆರಿಕಾದ ಹಲವು ವಿಶ್ವವಿದ್ಯಾಲಯಗಳ ಸಂಶೋಧಕರ ಸಲಹೆ ನೀಡುತ್ತಿದ್ದರು. ಇಂದಿರಾಗಾಂಧಿ ಲೋಕಸಭಾ ಚುನಾವಣೆಗಳ ಮೊದಲು ಸತ್ತರೆ ಏನಾಗಬಹುದು ನಂತರ ಸತ್ತರೆ ಏನಾಗಬಹುದು ಎಂಬ ಸಂಶೋಧನೆ ಗಳನ್ನು ಕೂಡ ಅಮೆರಿಕ ಸರ್ಕಾರದ ವಿದೇಶಾಂಗ ಸಚಿವಾಲಯದ ಹಣದ ಸಹಾಯದಿಂದ ನಡೆಸಲಾಗಿತ್ತು ಎಂಬುದು ಅಮೆರಿಕದ ದುಷ್ಟ ಯೋಜನೆಯ ಆಳವನ್ನು ತಿಳಿಸುತ್ತದೆ.

ಪಂಜಾಬನ್ನು ಶಾಂತಿಪ್ರಿಯ ಜನತೆ, ಭಾರತದ ಪ್ರಜಾಪ್ರಭುತ್ವ ಶಕ್ತಿಗಳ ಪ್ರಯತ್ನದಿಂದ ಈ ಸಮಸ್ಯೆ ಸದ್ಯಕ್ಕೆ ತಣ್ಣಗಾಗಿದೆ. ಆದರೆ ಖಾಲಿಸ್ತಾನಿ ಮುಖಂಡರಿಗೆ ಇನ್ನೂ ಅಮೆರಿಕದಲ್ಲಿ ರಾಜ ಸನ್ಮಾನ, ದೊರಕುತ್ತಿದೆ. ಅಮೆರಿಕ ಮತ್ತೆ ಸಮಯಕ್ಕಾಗಿ ಹೊಂಚು ಹಾಕುತ್ತಿದೆ.

ಕಾಶ್ಮೀರ

ಪಂಜಾಬ್ ಜೊತೆ ಜೊತೆಗೆ ಬಡತನ, ನಿರುದ್ಯೋಗದಿಂದ ಕಾಶ್ಮೀರ ಅಭಿವೃದ್ಧಿ ಹೊಂದದಿರುವು ದರಿಂದ ಅತೃಪ್ತರಾದ ಕಾಶ್ಮೀರಿ ಯುವಕರನ್ನು ಸೆಳೆದು ಭಯೋತ್ಪಾದಕರಾಗಿ ತರಬೇತಿ ನೀಡುವುದು ಒಂದು ಕಡೆ. ಪಾಕಿಸ್ತಾನಕ್ಕೆ ಕುಮ್ಮಕ್ಕು ನೀಡಿ ಅವರ ಸೈನ್ಯಕ್ಕೆ ಸಕಲ ಶಸ್ತ್ರಾಸ್ತ್ರಗಳನ್ನು ಒದಗಿಸಿ ಭಾರತದ ಮೇಲೆ ಹರಿಬಿಡುವುದು ಮತ್ತೊಂದು ನೀತಿ. ಇಂದು ಅತ್ಯಂತ ಅಪಾಯಕಾರಿ ಯಾಗಿರುವ ಈ ಪ್ರದೇಶದಲ್ಲಿ ಕೈಯಾಡಿಸಿ ಕಾಶ್ಮೀರವನ್ನು ಬೇರ ಮಾಡುವ ಈ ಕುಂತ್ರದ ಬಗ್ಗೆ ಇದೇ ಪುಟಗಳಲ್ಲಿರುವ ಪ್ರತ್ಯೇಕ ಲೇಖನ ನೋಡಿ.

ಶ್ರೀಲಂಕಾ ತಮಿಳರ ಪ್ರಶ್ನೆ

ಶ್ರೀಲಂಕಾದ ಉತ್ತರ ಭಾಗದಲ್ಲಿ ನೆಲೆಸಿರುವ ತಮಿಳರ ಅತೃಪ್ತಿಯನ್ನು ಬಳಸಿ ಅವರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಾ ಹಲವು ದಶಕಗಳಿಂದ ಶ್ರೀಲಂಕಾದ ಅಭಿವೃದ್ಧಿಯನ್ನು ಕುಂದಿಸಿದೆ.

ನಿಜ ಉದ್ದೇಶ

ಆದರೆ ತಮಿಳರ ಆಕ್ರೋಶವನ್ನು ಹುಟ್ಟಿಸುವ ಈ ಪ್ರಯತ್ನದ ನಿಜ ಉದ್ದೇಶ ಉತ್ತರ ತೀರವನ್ನು ಶ್ರೀಲಂಕಾದಿಂದ ಬೇರ್ಪಡಿಸಿ ಸ್ವತಂತ್ರ ದೇಶವನ್ನಾಗಿಸಿ ಅಲ್ಲಿ ಅಮೆರಿಕದ ಸೈನ್ಯ ಶಿಬಿರವನ್ನು ಸ್ಥಾಪಿಸುವುದು, ಆ ಮೂಲಕ ಭಾರತವನ್ನು ನಿಯಂತ್ರಿಸುವುದು. ಈ ಕುತಂತ್ರಕ್ಕೆ ಈಡಾಗಿ ಅದೆಷ್ಟು ಸಾವಿರ ತಮಿಳು ಯುವಕ, ಯುವತಿಯರು ಬಲಿಯಾಗಬೇಕಾಯಿತು! ಭಾರತ ಮತ್ತೊಬ್ಬ ಪ್ರಧಾನಿ ಇಂದಿರಾಗಾಂಧಿಯವರ ಮಗ ರಾಜೀವ್ ಗಾಂಧಿಯವರು ಅಮೆರಿಕಾದ ಕುಮ್ಮಕ್ಕಿನ ಈ ತಮಿಳು ಭಯೋತ್ಪಾದಕತೆಗೆ ಬಲಿಯಾಗಬೇಕಾಯಿತು.

ಹೀಗೆ ಭಾರತದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ದಿಕ್ಕುಗಳಲ್ಲಿ ಮೇಲೆ, ಕೆಳಗೆ ಆಕಡೆ ಈಕಡೆ ಎಲ್ಲ ಕಡೆಯಿಂದ ವ್ಯಾಪಿಸಿ ಭಾರತವನ್ನು ತುಂಡರಿಸಲು ಪ್ರಯತ್ನಿಸಿದ, ಪ್ರಯತ್ನಿಸುತ್ತಿರುವ ದೇಶ ಅಮೆರಿಕಾದ ಅಧ್ಯಕ್ಷ ಕ್ಲಿಂಟನ್ ಇಂದು ನಮ್ಮದೇಶಕ್ಕೆ ಬರುತ್ತಿದ್ದಾನೆ. ಭಾರತದ ಸಾವಿರಾರು ಜನರನ್ನು ಬಲಿತೆಗೆದುಕೊಂಡ ದುಷ್ಟ ಯಂತ್ರಗಳ ಈ ನಾಯಕನಿಗೆ ನಾವು ಸ್ವಾಗತ ಮಾಡಿ ಮಂಗಳ ಹಾಡಬೇಕೆ? ಭಾರತ ಅನುಭವಿಸಿದ್ದ ಅನುಭವಿಸುತ್ತಿರುವ ನೋವೆಲ್ಲಾ ಒಗ್ಗೂಡಿ ಕ್ಲಿಂಟನ್ ನಿನ್ನ ರಕ್ತಪೂರಿತ ಪಾದಗಳನ್ನು ಭಾರತದ ಮೇಲೆ ಊರಬೇಡ ಎಂದು ಘರ್ಜಿಸಬೇಕೆ?

"ನೆನೆ ಓ ಭಾರತ ಬಾಂಧವ
ನೆನೆ ನೆನೆಯೋ ಭಾರತದ ಈ ನೋವು ಸಂಕಟಗಳ"



ಸ್ಫುಲಿಗೆಗಾರ

ಸ್ವತಂತ್ರ ಭಾರತವನ್ನು ಸಾಮಂತ ದೇಶವನ್ನಾಗಿಸುವ ಹವಣಿಕೆ

ಎಸ್.ವೈ.ಗುರುಶಾಂತ್

ಉಗ್ರಗಾಮಿಗಳಿಂದ ಅಪಹರಣಗೊಂಡ ಭಾರತದ ವಿಮಾನ ಕಂದಹಾರ್‌ನಲ್ಲಿರುವಾಗ ದೇಶವೇ ಆತಂಕಗೊಂಡಿತ್ತು. ಎಲ್ಲರ ಹೃದಯ ಬಡಿತ ಕಂದಹಾರ್ ಕಡೆಗೆ. ಆದರೆ ಈ ನಡುವೆ ಸದ್ದು ಗದ್ದಲವಿಲ್ಲದೇ ಭಾರತ ಸರ್ಕಾರದ ಪ್ರತಿನಿಧಿಗಳು ಅಮೆರಿಕಾದ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದರು. ಚರ್ಚೆ ವಿಷಯ ಉಗ್ರಗಾಮಿಗಳಿಂದ ಜನರನ್ನು ಬಿಡಿಸುವುದಾಗಿರಲಿಲ್ಲ! ಭಾರತ ದೇಶವು ಅಮೆರಿಕಾದ ಕೃಷಿ ಆಧಾರಿತ ಉತ್ಪನ್ನಗಳ ಆಮದಿನ ಮೇಲಿರುವ ನಿರ್ಬಂಧವನ್ನು ತೆಗೆದುಹಾಕಬೇಕು ಎಂಬುದೇ ಚರ್ಚೆಯ ವಿಷಯ. ಭಾರತ ಅಮೆರಿಕಾದ ಒತ್ತಡದ ಪ್ರಸ್ತಾಪಗಳನ್ನು ಒಪ್ಪಿ ಸಹಿ ಹಾಕಿತು.

ಹಿಂದೆ ಪೋಖ್ರಾನ್‌ನಲ್ಲಿ ಅಣು ಸ್ಫೋಟಿಸಿ, ಎಲ್ಲೆಡೆ 'ದೇಶಪ್ರೇಮಿ ಉನ್ಮಾದ'ದ ಧೂಳು ಅಡರಿರುವಾಗಲೇ ಅಮೆರಿಕಾ, ಜಪಾನ್‌ನಂತಹ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದ ಅತ್ಯಮೂಲ್ಯ, ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್, ಚಿನ್ನದ ಗಣಿಗಳನ್ನು ಬರೆದುಕೊಟ್ಟಂತೆ. ಹಿಂದಿನ 1400 ವಸ್ತುಗಳ ಜೊತೆಗೆ ಈಗಿನ 714 ವಸ್ತುಗಳು ಈ ವ್ಯಾಪ್ತಿಯಲ್ಲಿವೆ ಎಂದು ವರದಿ ಇದೆ. **ಕಂದಹಾರ್‌ನಲ್ಲಿ ಹಿಡಿದಿಟ್ಟಿದ್ದ ಜನರೇನೋ ಜೀವಂತ ಬಿಡುಗಡೆಯಾದರು. ಆದರೆ 'ಪ್ರಮಾಣಾತ್ಮಕ ನಿರ್ಬಂಧ' (ಕ್ವಾಂಟೀಟೇಟಿವ್ ರಿಸ್ಟ್ರಿಕ್ಷನ್) ತೆಗೆದದ್ದರಿಂದ ಇಂದಿನ ಮತ್ತು ಮುಂದಿನ ಹಲವಾರು ಪೀಳಿಗೆಗಳವರೆಗೂ ಕೃಷಿ ಮತ್ತು ಕೃಷಿಕರೂ ಸಾಯುತ್ತಾ ಸಾಗುತ್ತಾರೆ.** ಇದು ಮಾರ್ಚ್‌ನಲ್ಲಿ ಭಾರತಕ್ಕೆ ಆಗಮಿಸಲಿರುವ ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ಭೇಟಿ ಸಮಯದಲ್ಲಿ ಕೊಡಬೇಕೆಂದಿರುವ ಉಡುಗೊರೆಗಳಲ್ಲಿ ಒಂದೆಂದು ಹೇಳಲಾಗುತ್ತಿದೆ.

ಪಾಕಿಸ್ತಾನವನ್ನು ಭಯೋತ್ಪಾದಕ ದೇಶವೆಂದು ಕರೆಯಲು ನಿರಾಕರಣೆ

ಕಂದಹಾರ್‌ನ ಈ ಪ್ರಕರಣದಲ್ಲಿ ವಾಜಪೇಯಿ ಹಾಗೂ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಮುಂತಾಗಿ ಕೆಲವು ಸಚಿವರು ಅಫಘಾನಿಸ್ತಾನದ ತಾಲಿಬಾನ್‌ನನ್ನು ಹೊಗಳಿದರು. ಇನ್ನೊಂದೆಡೆ ಪಾಕಿಸ್ತಾನವನ್ನು 'ಭಯೋತ್ಪಾದಕ ದೇಶ'ವೆಂದು ಘೋಷಿಸಬೇಕೆಂದು ಅಮೆರಿಕಾವನ್ನು ಪ್ರಾರ್ಥಿಸಿದರು!

ಆದರೆ ಹೀಗೆ **ಪಾಕಿಸ್ತಾನವನ್ನು ಭಯೋತ್ಪಾದಕ ದೇಶವೆಂದು ಘೋಷಿಸಲು ಬೇಕಾದ ಪುರಾವೆಗಳು ಇಲ್ಲವೆಂದು ಅಮೆರಿಕಾ ನಿರಾಕರಿಸಿತು. ಬಹಳ ವಿಚಿತ್ರವೆಂದರೆ ಪಾಕಿಸ್ತಾನದ ಎಲ್ಲಾ ಆಡಳಿತಗಾರರಿಗೆ ನಿರಂತರವಾಗಿ ಹಣ, ಅಸ್ತ್ರ, ಆಶ್ರಯ ನೀಡುತ್ತಾ ಬಂದಿರುವುದು ಇದೇ ಅಮೇರಿಕಾ.** ಅಷ್ಟು ಮಾತ್ರವಲ್ಲ ಹಿಂದಿದ್ದ ಕಮ್ಯುನಿಸ್ಟ್ ಆಡಳಿತವನ್ನು ಉರುಳಿಸಲು ಅಫಘಾನಿಸ್ತಾನದ ತಾಲಿಬಾನ್‌ಗೆ ಸಂಪೂರ್ಣವಾಗಿ ಹಣ, ಅಸ್ತ್ರ, ತರಬೇತಿ ನೀಡಿರುವುದು ಅಮೆರಿಕಾದ ಕುಖ್ಯಾತ ಗೂಢಾಚಾರ ಸಂಸ್ಥೆ 'ಸಿಐಎ' ಮತ್ತು ಪಾಕಿಸ್ತಾನ 'ಐಎಸ್‌ಐ'. ಈ ಪ್ರದೇಶದಲ್ಲಿ ಆಟವಾಡಲು ಇದೊಂದು ದೂರಗಾಮಿ ತಂತ್ರ.

ಹಲವಾರು ದಶಕಗಳಿಂದ ಭಾರತ, ಚೀನಾ, ಹಿಂದಿನ ಅಫಘಾನಿಸ್ತಾನ ಬಿಟ್ಟರೆ ಈ ಉಪಖಂಡದ ವಲಯದಲ್ಲಿ ತನ್ನ ಅಧಿಪತ್ಯ ಸ್ಥಾಪಿಸಲೆ ಮತ್ತು ಬುಡಮೇಲು ರಾಜಕೀಯಕ್ಕೆ ಅಮೇರಿಕಾ ಪಾಕಿಸ್ತಾನವನ್ನೇ ಬಳಸಿಕೊಂಡಿದೆ. ಈ ವಲಯದಲ್ಲಿ ತನ್ನ 'ಸಹಭಾಗೀದಾರ'(ಜೂನಿಯರ್ ಪಾರ್ಟನರ್) ರನ್ನಾಗಿಸಿಕೊಂಡಿದೆ. ವಾಜಪೇಯಿಯವರು ಹೇಳುತ್ತಾರೆ "ಭಯೋತ್ಪಾದನೆಯನ್ನು ನಿರ್ಮೂಲನ ಮಾಡಲು ಅಮೆರಿಕಾ ಮತ್ತು ಭಾರತದ ನಡುವೆ ಉತ್ತಮ ಬಾಂಧವ್ಯ, ತಿಳುವಳಿಕೆ ಏರ್ಪಡಲು 'ಜಂಟಿ ಕಾರ್ಯಾಚರಣೆ ತಂಡ'(JWG) ರಚಿಸಲಾಗಿದೆ" ಎಂದು. ಆದರೆ ಇಂತಹ 'ಸ್ನೇಹ ಜೀವಿಗಳು' ಭಾರತೀಯ ವಿಮಾನವನ್ನು ಅಪಹರಿಸಿದ ಘಟನೆಯನ್ನು 'ಟೀಕಿಸಲು' ಅಮೇರಿಕಾಕ್ಕೆ 4 ದಿನಗಳೇಕೆ ಹಿಡಿದವು ಎಂಬುದು?

ಅಮರಿಕಾವು ಪಾಕಿಸ್ತಾನದ ನಂಟನ್ನು ಅಷ್ಟು ಸುಲಭದಲ್ಲಿ ಬಿಡಲು ಸಾಧ್ಯವಿಲ್ಲ. ಆದಾಗ್ಯೂ **ವಾಜಪೇಯಿ ಸರ್ಕಾರ ಅಮೇರಿಕಾವನ್ನು ಗೋಗರೆಯುತ್ತಲೇ ಇದೆ....."ಪಾಕಿಸ್ತಾನವನ್ನು ಕೈಬಿಡಿ, ನಮ್ಮನ್ನು ನಿಮ್ಮ ಅಣತಿ ಪಾಲಿಸುವ ಒಬ್ಬ ಜೂನಿಯರ್ ಪಾರ್ಟನರ್' ರನ್ನಾಗಿಸಿಕೊಳ್ಳಿ"ಎಂದು.** ಮಹಾನ್ ಭಾರತವನ್ನು ಒಂದು ಮರಿ ಪಾಕಿಸ್ತಾನವನ್ನಾಗಿಸಲು ಷಡ್ಯಂತ್ರಗಳನ್ನೇ ರೂಪಿಲಾಗುತ್ತಿದೆ. ಪಾಕಿಸ್ತಾನ ವಹಿಸಿದ ಕುಖ್ಯಾತ ಪಾತ್ರವನ್ನು ವಹಿಸಲು ಭಾರತವನ್ನು ದೂಡಲಾಗುತ್ತಿದೆ.... ಅಲಿಪ್ತ ವಿದೇಶಾಂಗ ನೀತಿ ಅನುಸರಿಸಿ, ಎಲ್ಲಾ ಶೋಷಿತ, ಜನತೆಯ ಪರವಾಗಿ ನಿಂತ, ವಿಮೋಚನಾ ಹೋರಾಟಗಳಿಗೆ ಬೆಂಗಾವಲಾಗಿ ಸ್ನೇಹ ಹಸ್ತ ನೀಡಿದ, ನಿಶ್ಶಸ್ತ್ರೀಕರಣ, ಯುದ್ಧ ವಿರೋಧಿ,ಶಾಂತಿ, ಸಹಬಾಳ್ವೆ ಪ್ರತಿಪಾದಿಸಿದ, ಅಭಿವೃದ್ಧಿ ಪರವಾದ ದೇಶಗಳ ಸಾರ್ವಭೌಮತೆ, ಸ್ವಾತಂತ್ರ್ಯ ಕಾಯ್ದುಕೊಂಡು ಜಗತ್ತಿನಲ್ಲಿ ಪ್ರತಿಷ್ಠಿತ ಸ್ಥಾನದಲ್ಲಿದ್ದ ಭಾರತ 'ಭವಿಷ್ಯದಲ್ಲಿ ಖಳನಾಯಕ' ನ ಪಾತ್ರ ವಹಿಸಬೇಕೆ? ಅದಕ್ಕೆ ಸಿದ್ದರು ಎನ್ನುತ್ತಾರೆ ವಾಜಪೇಯಿಯವರು.

ದುರ್ಬಲಗೊಂಡ ಭಾರತ ಸ್ಥಾನ

1999 ರ ಪೋಖ್ರಾನ್ ನಲ್ಲಿ ಅಣು ಸ್ಫೋಟ ಮಾಡಿದ್ದು ಒಂದು ಮಹಾ ಪ್ರಮಾದ. ಇದು ಕೇವಲ ಭಾರತ-ಪಾಕಿಸ್ತಾನಗಳು ಮತ್ತು ಚೀನಾದಂತಹ ನೆರೆ-ಹೊರೆ ದೇಶಗಳ ಸಂಬಂಧಗಳನ್ನು ಹಾಳುಗೆಡವಿದ್ದು ಮಾತ್ರವಲ್ಲ, ಅಂತರ್ರಾಷ್ಟ್ರೀಯವಾಗಿ ಭಾರತದ ಸ್ಥಾನ ಹಿಂದಕ್ಕೆ ತಳ್ಳಲ್ಪಟ್ಟಿತು ಹಾಗೂ ಅಂತರ್ರಾಷ್ಟ್ರೀಯ ಸಮುದಾಯದ ನಡುವೆ ಗಟ್ಟಿ ಧ್ವನಿಯಿದ್ದ ಭಾರತ 'ದೂರವಾಯಿತು'. ಸದಾ ಚೀನಾದ ವಿರುದ್ಧ ಹಲ್ಲು ಮಸೆಯುತ್ತಿರುವ ಅಮೇರಿಕಾವನ್ನು ಮೆಚ್ಚಿಸಲು ಅದರ ಕೈಕೆಳಗಿನ 'ಪೇದೆ' ಯಾಗಲು ಈ ಅಣುಸ್ಫೋಟ 'ಚೀನಾ'ದ ಬೆದರಿಕೆ ವಿರುದ್ಧ ಎಂದು ಗುಪ್ತಪತ್ರವನ್ನು ವಾಜಪೇಯಿ ಬರೆದರು. ತಾವು ನ್ಯೂಕ್ಲಿಯರ್ ಶಕ್ತಿಯೆಂದು ಪರಿಗಣಿಸಬೇಕೆಂದು ಅಮೆರಿಕಾದ ಮೊರೆ ಇಟ್ಟರು. ಅಂತರ್ರಾಷ್ಟ್ರೀಯ ಸ್ಥಾನ ದುರ್ಬಲಗೊಂಡದ್ದನ್ನು ಗಮನಿಸಿದ ಅಮೇರಿಕಾ ಇದೇ ಅಣ್ವಸ್ತ್ರ ಪ್ರಶ್ನೆಯನ್ನು ಹಿಡಿದು ಕುಖ್ಯಾತ ಸಿಟಿಬಿಟಿಗೆ ಸಹಿ ಹಾಕಲು ಒತ್ತಡ ಹೇರುತಿದೆ. ಜಾಗತಿಕ ಅಧಿಪತ್ಯ ಹೇರಲು ಪ್ರಬಲ ಯೋಜನೆ ರೂಪಿಸಿರುವ **ಅಮೇರಿಕಾ ಭಾರತವನ್ನು ಮಣಿಸಲು ಯತ್ನಿಸುತ್ತಿದೆ. ಆ ಸಾಮ್ರಾಜ್ಯಾಧಿಪತಿ ಆಸ್ಥಾನದಲ್ಲಿ ಪಾಕಿಸ್ತಾನದ ಬದಲು ತನ್ನನ್ನೇ ಸಾಮಂತನನ್ನಾಗಿಸಿಕೊಳ್ಳಲು ವಾಜಪೇಯಿ ಸರ್ಕಾರ ಬಯಸುತ್ತಿದೆ.** ಈ ಐದು ದಶಕಗಳ ನಂತರದಲ್ಲಿ ಭಾರತ ಹೀಗೆ ಹಪಾಹಪಿಸುವುದನ್ನು ಕಂಡಿರುವ ಅಮೇರಿಕಾ ಹೆಚ್ಚೆ ಹೆಚ್ಚು ಕಬಳಿಸಲು ಮುಂದಾಗಿದೆ. ಹೀಗಾಗಿ 1998 ರಲ್ಲಿ ವಾಜಪೇಯಿ ಸರಕಾರ ಅಧಿಕಾರಕ್ಕೆ ಬಂದ ನಂತರದಿಂದ ಇಲ್ಲಿಯವರೆಗೂ ಜಸ್ವಂತ್ ಸಿಂಗ್ ಮತ್ತು ಅಮೇರಿಕಾದ ಟಾಲ್‌ಬೋಟ್‌ರವರ ಮಾತುಕತೆಗಳು ಹತ್ತು ಸುತ್ತು ದಾಟಿವೆ. ಅದೂ ಭಾರತ ಅಥವಾ ಅಮೇರಿಕಾದಲ್ಲಿ ಅಲ್ಲ ಬದಲಾಗಿ ಬ್ರಿಟನ್, ಸಿಂಗಾಪುರ ಮುಂತಾದ ಮೂರನೇ ದೇಶದಲ್ಲೇ ಮಾತುಕತೆ ನಡೆಯುತ್ತಿವೆ. ಅವು ಏನೆಂಬುದು ಸಾರ್ವಭೌಮ ಜನತೆಗೆ, ಜನಪ್ರತಿನಿಧಿಗಳಿಗೆ ಒಂದಿಷ್ಟು ತಿಳಿಯದಂತೆ ನೋಡಿಕೊಳ್ಳಲಾಗುತ್ತಿದೆ. ಈ ಎಲ್ಲಾ ಬೆಳವಣಿಗೆಗಳು ಬಿಜೆಪಿ - ಅದರ ನಿಯಂತ್ರಕವಾಗಿರುವ ಆರ್.ಎಸ್.ಎಸ್. ಸಂಘ ಪರಿವಾರಕ್ಕೆ ಸಂತೋಷ, ಸಂತೃಪ್ತಿಯನ್ನು ತಂದಿವೆ. ಹಾಗೆ ನೋಡಿದರೆ ಸಂಘ ಪರಿವಾರ ಎಂದೂ ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಇತಿಹಾಸದುದ್ದಕ್ಕೂ ತಾಳಿಲ್ಲ. ಬದಲಾಗಿ ಅವರ ಪರವಾಗಿಯೇ ನಿಂತಿದೆ. ದೇಶ ಸ್ವಾವಲಂಬನೆ, ಸಾರ್ವಭೌಮತ್ವದಿಂದ ಇರುವ ಬಗ್ಗೆ ಅವರಿಗೆ ಅಮೇರಿಕಾವೇ ಆದರ್ಶ.

ಈ ಸಂಘ ಪರಿವಾರವು ಅಮೆರಿಕಾದ ಜೊತೆಗೂಡಿದರೆ ಅವರು ಎಸೆಯುವ ಒಂದಿಷ್ಟು ಎಂಜಲುಗಳು ಸಿಗಬಹುದೇ ಎಂದು ಆಶಿಸುತ್ತಿದ್ದಾರೆ. ಅಭಿವೃದ್ಧಿಶೀಲ, ಮೂರನೆಯ ಜಗತ್ತಿನ ಬಡ ರಾಷ್ಟ್ರಗಳ್ನು ಸುಲಿಯಲು ಭಾರತಕ್ಕೂ ಪಾಲು ಸಿಗಬಹುದೇ ಎಂದು

ನರಳುತ್ತಿದ್ದು, ಹೋರಾಡುತ್ತಿದ್ದ ದೇಶಗಳಿಗೆ ಬೆಂಗಾವಲಾಗಿ ನಿಂತ ಅಲಿಪ್ತ ಭಾರತವೆಲ್ಲಿ? ತೊತ್ತಿನ ಗುಲಾಮರಾಗಬಯಸುವ ಸಂಘಪರಿವಾರದ ಕನಸಿನ ಮದನಕ ಭಿಕ್ಷುಕ ಭಾರತವೆಲ್ಲಿ?

ಕಾರ್ಗಿಲ್ ಕದನವನ್ನು ತನ್ನ ರಾಜಕೀಯಕ್ಕೆ ಬಳಕಲು ಅಮೇರಿಕಾ ಕಾರ್ಗಿಲ್ ಕದನವನ್ನು ತನ್ನ ರಾಜಕೀಯಕ್ಕೆ ಬಳಸಲು ಅಮೇರಿಕಾ ಮುಂದಾಯಿತು. ಈ ಕದನ ಕೊನೆಗೊಳಿಸುವಾಗ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಮತ್ತು ಅಂದಿನ ಪಾಕಿಸ್ತಾನದ ಪ್ರಧಾನಿ ನವಾಜ್ ಶರೀಫ್‌ರವರು ಬಿಡುಗಡೆ ಮಾಡಲಾದ ಹೇಳಿಕೆಯಲ್ಲಿ ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಲು 'ವೈಯಕ್ತಿಕ ಆಸಕ್ತಿ' ವಹಿಸುವುದಾಗಿ ಕ್ಲಿಂಟನ್ ಭರವಸೆ ನೀಡಿದ್ದಾರೆ. ಈ ಆಸಕ್ತಿಯೆಂದರೆ 'ಕಾಶ್ಮೀರದ ಪ್ರಶ್ನೆಯನ್ನು ಅಂತರ್ರಾಷ್ಟ್ರೀಯಗೊಳಿಸುವುದು ಮತ್ತು ಸ್ವತಂತ್ರ ರಾಷ್ಟ್ರವನ್ನಾಗಿಸುವುದು' ಅಣ್ವಸ್ತ್ರ ಸ್ಫೋಟವನ್ನು ಕಾಶ್ಮೀರದ ಪ್ರಶ್ನೆಗೆ ತಳುಕು ಹಾಕಿದ ಬಿಜೆಪಿ, ಸಂಘ ಪರಿವಾರ ಸಹಜವಾಗಿ ಅದನ್ನು ಅಂತರ್ರಾಷ್ಟ್ರೀಯ ಪ್ರಶ್ನೆಯಾಗಿಸಲು ಅಮೇರಿಕಾಕ್ಕೆ ಅವಕಾಶ ಒದಗಿಸಿತು. ಇಂತಹ ಗಂಭೀರ ಸ್ಥಿತಿಯಿರುವಾಗ ಅಮೇರಿಕಾದ ಜೊತೆ ನಮ್ಮ ಸೈನ್ಯದ ಜಂಟಿ ಕವಾಯತು, ಜಂಟಿ ತರಬೇತು, ಪ್ರತಿನಿಧಿಗಳ ವಿನಿಮಯಗಳಂತಹ ಅಪಾಯಕಾರಿ ಕ್ರಮಗಳು ನಡೆದಿವೆ. ನಮ್ಮ ದೇಶದ ರಕ್ಷಣಾ ವ್ಯವಸ್ಥೆಯೊಳಗೆ ಕೈಹಾಕಲು ಇದು ಅಮೇರಿಕಾಕ್ಕೆ ವಿಫುಲ ಅವಕಾಶ ಕಲ್ಪಿಸುತ್ತಿದೆ.

ಇದೀಗ 22 ವರುಷಗಳ ನಂತರ ಅಮೇರಿಕಾದ ಅಧ್ಯಕ್ಷ ಕ್ಲಿಂಟನ್ ಬರುತ್ತಿದ್ದಾನೆ. ಆತನ ಭೇಟಿಗೆ ಹಾತೋರೆದು, ಸ್ವಾಗತಿಸಲು ಸಕಲ ಸಿದ್ಧತೆಗಳನ್ನು ವಾಜಪೇಯಿ ಸರ್ಕಾರ ಮಾಡುತ್ತಿದೆ. 'ಬಂದಾನೋ ಬಾರನೋ' ಎಂದು ನಾಯ್ಡು, ಕೃಷ್ಣರಂತಹ ಉದಾರೀಕರಣದ ಆರಾಧಕರು ಪರಿತಪಿಸತೊಡಗಿದ್ದಾರೆ. ಪತ್ರಿಕೆ, ಟಿ.ವಿ.ಯಂತಹ ಮಾಧ್ಯಮಗಳು ಇಲ್ಲಸಲ್ಲದ ಪ್ರಾಧಾನ್ಯತೆ ನೀಡುತ್ತಿವೆ. ಈಗಾಗಲೇ ಐ.ಎಂ.ಎಫ್.-ವಿಶ್ವಬ್ಯಾಂಕ್, ವಿಶ್ವ ವಾಣಿಜ್ಯ ಸಂಸ್ಥೆಗಳ ಮೂಲಕ ಸಾಕಷ್ಟು ಭಾರತವನ್ನು ದೋಚಲು ಮುಂದಾಗಿರುವ ಅಮೇರಿಕ ಇನ್ನಷ್ಟು ಕ್ಷೇತ್ರಗಳನ್ನು ಕೊಡಬೇಕೆಂದು ಕೇಳುತ್ತಿದೆ. ಬರುತ್ತಿರುವುದು ಕೇವಲ ಕ್ಲಿಂಟನ್ನರಲ್ಲ, ಬಹುರಾಷ್ಟ್ರೀಯ ಕಂಪನಿಗಳ ದಂಡು ಎಂಬುದು ನೆನಪಿರಲಿ. ಇಲ್ಲಿನ ಬ್ಯಾಂಕ, ವಿಮೆ ಅಲ್ಲದೇ ಭಾರತೀಯ ಕೃಷಿ, ಕೈಗಾರಿಕೆ, ಎಲ್ಲವೂ ಅದರ ಒಡಲಿಗೆ ತುಂಬಬೇಕು. ಈಗಾಗಲೇ ಅಮೆರಿಕಾದ ದೊರೆಯನ್ನು ಖುಷಿಗೊಳಿಸಲು ವಿವಿಧ ರಂಗಗಳಲ್ಲಿ ಸೇ 74 ರಿಂದ 100 ರಷ್ಟು ಬಂಡವಾಳದ ಪಾಲು ಪಡೆಯಲು ಅವಕಾಶ ಘೋಷಿಸಲಾಗಿದೆ. ಕಾರ್ಗಿಲ್, ಮಾನ್ಸಂಟೋನಂತಹ ರಾಕ್ಷಸಿ ಕಂಪನಿಗಳಿಗೆ ಭೂಮಿ ನೀಡಲಾಗುತ್ತಿದೆ. ಜಗತ್ತಿನಲ್ಲಿ ಬುಡಮೇಲು ವಿಧ್ವಂಸಕ ಕೃತ್ಯಗಳನ್ನು ಸಂಘಟಿಸುತ್ತಿರುವ ಪೈಶಾಚಿಕ ಗೂಢಾಚಾರ ಸಂಸ್ಥೆ 'ಫೆಡರಲ್ ಬ್ಯೂರೋ. ಆಫ್ ಇನ್‌ವೆಸ್ಟಿಗೇಷನ್' (FBI)ನ ಕಛೇರಿಯನ್ನು ದೆಹಲಿಯಲ್ಲಿ ತೆರೆಯಲು ಸ್ವಾತಂತ್ರ್ಯ ನಂತರ ಮೊಟ್ಟಮೊದಲ ಬಾರಿಗೆ ಅವಕಾಶ ನೀಡಲಾಗಿದೆ. ಡಿಯಾಗೋ ಗಾರ್ಸಿಯಾದಲ್ಲಿ ಭೀಕರ ಶಸ್ತ್ರಾಸ್ತ್ರಗಳು ಭಾರತದತ್ತ ಗುರಿಯಿಟ್ಟು ಹೂಂಕರಿಸುತ್ತಿರುವಾಗಲೇ ಇನ್ನೊಂದೆಡೆ ಸ್ನೇಹದ ಮಾತು ಆಡುತ್ತಿರುವ ಅಮೇರಿಕಾದ ರಾಯಭಾರತ್ವ ಎಂತಹುದು ಎಂದು ಅರಿಯಬೇಕು. ಈಗ ಬಿಜೆಪಿ - ಆರ್.ಎಸ್.ಎಸ್.ನ ಹುಸಿ ರಾಷ್ಟ್ರೀಯತೆ, ದೇಶಪ್ರೇಮಗಳು ಬಯಲಾಗಿವೆ. ದೇಶದ್ರೋಹ ಸಾಬೀತಾಗಿದೆ. ಅಮೇರಿಕಾದಂತಹ ಅಹಂಕಾರಿ, ಆಕ್ರಮಣಕಾರಿ ಸಾಮ್ರಾಜ್ಯಶಾಹಿ ಸೂಪರ್ ಪವರ್‌ನ್ನು ನಾವು ಸ್ವಾಗತಿಸುವದಲ್ಲ, ಹಿಂದೆ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ 'ಸೈಮನ್ ಗೋ ಬ್ಯಾಕ್' ಎಂದಂತೆ ಇಂದು 'ಕ್ಲಿಂಟನ್ ಗೋ ಬ್ಯಾಕ್' ಎಂದು ಘರ್ಜಿಸಬೇಕು. ಯುವ ಕವಿ ಜಿ.ಎನ್.ಮೋಹನ್ ಹೇಳುವಂತೆ -

ಡಾಲರ್ ಕಣ್ಣಿನ ಗಿಡುಗವ ಕೊಂದು
ಕಾಪಾಡಬೇಕಿದೆ ಜಗವನು ಇಂದು
ಪಾರಿವಾಳಗಳೇ ಎದ್ದೇಳಿ ನೀವು....
ಮನುಕುಲ ಉಳಿಸಲು ಒಂದಾಗಿ

ಬಾಂಗ್ಲಾ ವಿಮೋಚನೆ

1971 ವಿಶ್ವದ ಇತಿಹಾಸದಲ್ಲಿ ಒಂದು ಪ್ರಮುಖ ಘಟನೆ. ಒಂದು ದೇಶವಾಗಿದ್ದ ಎರಡು ತುಂಡುಗಳು ಎರಡು ದೇಶಗಳಾದ ಪ್ರಸಂಗ. ಇಸ್ಲಾಂ ಎಂಬ ಧಾರ್ಮಿಕ ಆಧಾರದ ಮೇಲೆ ಒಂದು ರಾಷ್ಟ್ರವಾಗಲು ಬಯಸಿದ್ದ ಪಶ್ಚಿಮ ಪಾಕೀಸ್ತಾನ ಪೂರ್ವ ಪಾಕೀಸ್ತಾನ ಎಂಬ ದೊಡ್ಡ ಪ್ರದೇಶಗಳ ಜನರಲ್ಲಿ ದೊಡ್ಡವಿವಾದ ತಲೆದೋರಿತು. ಪಶ್ಚಿಮ ಪಾಕೀಸ್ತಾನದ ಆಳುವಜನ ಪೂರ್ವ ಪಾಕೀಸ್ತಾನದ ಬಂಗಾಲಿ ಭಾಷಿಕರ ಮೇಲೆ ಉರ್ದು ಭಾಷೆಯನ್ನು ಹೇರಲು ಹಾಗೂ ಅದನ್ನು ಕೇವಲ ಕೃಷಿ ಪ್ರದೇಶವಾಗಿ ಪ. ಪಾಕೀಸ್ತಾನದ ಕೈಗಾರಿಕಾ ಉತ್ಪನ್ನಗಳಿಗೆ ಮಾರುಕಟ್ಟೆಯಾಗಿ ಹಾಗೂ ಕಚ್ಚಾವಸ್ತುಗಳ ಸರಬರಾಜುದಾರನಾಗಿ ಬಳಸಿಕೊಳ್ಳಲು ಪ್ರಯತ್ನಿಸಿದ್ದು ಒಂದು ದೊಡ್ಡ ವಿಮೋಚನಾ ಹೋರಾಟಕ್ಕೆ ಕಾರಣವಾಯಿತು. ಕೋಟಿಗಟ್ಟಲೆ ಜನ ಹೋರಾಟಕ್ಕೆ ಧುಮುಕಿದ ಆ ರಭಸವನ್ನು ತುಳಿಯಲು ಮಿಲಿಟರಿ ದಬ್ಬಾಳಿಕೆಯನ್ನು, ನಿರ್ದಾಕ್ಷಿಣ್ಯವಾದ ದಮನವನ್ನು ಹೇರಲಾಯಿತು. ಆಗ ಕೋಟಿಗೂ ಹೆಚ್ಚು ಜನ ತಮ್ಮ ದೇಶವನ್ನು ತೊರೆದು ಭಾರತಕ್ಕೆ ಓಡಿಬರಬೇಕಾಯಿತು. ಜನತಮ್ಮದೇ ಸಶಸ್ತ್ರ ಹೋರಾಟವನ್ನು ಆರಂಭಿಸಿದರು. ಈ ನಿರ್ವಸಿತರ ಒತ್ತಡವನ್ನು ತಡೆಯಲಾರದೆ ಭಾರತ ಸರ್ಕಾರ ಬಂಗಾಲಿ ಜನರ ವಿಮೋಚನಾ ಹೋರಾಟಕೆ ಬೆಂಬಲ ನೀಡಿತು. ಕೊನೆಗೆ ಮುಜಿಬೂರ್ ರೆಹಮಾನ್‌ರವರ ನೇತೃತ್ವದಲ್ಲಿ ಬಂಗಾಲಿಜನರ ಧೀರ ಹೋರಾಟ ಭಾರತದ ಸೇನೆಯ ಸಹಾಯದಿಂದ ಬಂಗ್ಲಾದೇಶದ ವಿಮೋಚನೆಯಾಯಿತು.

ಈ ಸಂದರ್ಭದಲ್ಲಿ ಜಗತ್ತಿನಯಾವುದೇ ಮೂಲೆಯಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟನಡೆಸಿದರೂ ಅದನ್ನು ಹತ್ತಿಕ್ಕುವ ಅಮೇರಿಕ, ಅನೇಕ ದೇಶಗಳನ್ನು ಒಡೆಯಲು ಕಾರಣವಾದ ಅಮೆರಿಕ ತನ್ನ ಹಸ್ತಕನಂತೆ ಏಜೆಂಟ್‌ನಂತೆ ವರ್ತಿಸುತ್ತಿದ್ದ ಪಾಕೀಸ್ತಾನಕ್ಕಾಗುತ್ತಿದ್ದ ಮುಖಭಂಗವನ್ನು ಸಹಿಸಿಕೊಳ್ಳಲಾಗಲಿಲ್ಲ. ತಕ್ಷಣವೇ ಭಾರತದಲ್ಲಿ ನೀರಾವರಿ ಯೋಜನೆಗಳು, ವಿದ್ಯುತ್ ಇವುಗಳಿಗೆ ನೀಡಲಾಗುತ್ತಿದ್ದ ಹಣಸಹಾಯವನ್ನು ನಿಲ್ಲಿಸಿತು. ಅಮೇರಿಕಾದ ಬ್ಯಾಂಕುಗಳಿಗೆ ಯಾವುದೇ ಹಣ ವಿತರಣೆಯನ್ನು ತಡೆಯಲು ಸೂಚನೆ ನೀಡಿತು. ವಿಶ್ವಬ್ಯಾಂಕು ನೀಡುತ್ತಿದ್ದ ಸಾಲಗಳಿಗೂ ಅಡ್ಡಪಡಿಸಿತು. ಹೀಗೆ ಭಾರತಕ್ಕೆ ಆರ್ಥಿಕ ಸಂಕಟವನ್ನು ನೀಡಲು ಆ ಮೂಲಕ ಮಣಿಸಲು ಪ್ರಯತ್ನಿಸಿತು.

ಇಷ್ಟೇ ಸಾಲದೆಂಬಂತೆ ಭಾರತಕ್ಕೆ ಮಿಲಿಟರಿ ಬೆದರಿಕೆ ಹಾಕಲು ಬಂಗಾಲಕೊಲ್ಲಿಯಲ್ಲಿ ನೂರಾರು ಹಡಗು, ವಿಮಾನವಾಹಕ ಹಡಗುಗಳು, ಬಾಂಬರ್‌ಗಳಿಂದ ತುಂಬಿದ 7ನೇ ನಾವಿಕ ಸೈನ್ಯವನ್ನು ತಂದುನಿಲ್ಲಿಸಿತು. ಅಮೇರಿಕದ ಅಧ್ಯಕ್ಷರು ನೇರವಾಗಿ ಪಾಕಿಸ್ತಾನ ಪರನೀತಿತಳೆಯಲು, ಪಾಕೀಸ್ತಾನಕ್ಕೆ ನೀಡುತ್ತಿದ್ದ ಹಣಸಹಾಯವನ್ನು ಮುಂದುವರೆಸಲು ನಿರ್ದೇಶನನೀಡಿದರು. ಇವು ಯಾವುದಕ್ಕೂ ಭಾರತ ಮಣಿಯಲಿಲ್ಲವೆಂದು ಅಧ್ಯಕ್ಷರು ರುದ್ರಕೋಪ ತಾಳಿದರು. ಇದು ಭಾರತದ ಜನಸಮುದಾಯಕ್ಕೆ ದೊಡ್ಡ, ಆಘಾತವನ್ನುಂಟುಮಾಡಿತು.

ನಿಮ್ಮ ಹೊಟ್ಟೆಯಲ್ಲಿ ಕೊಕೊಕೊಲಾ.... ಇಲ್ಲದಿದ್ದರೆ ಬೆನ್ನಿನಲ್ಲಿ ಚೂರಿ

ನೂರು ವರ್ಷಗಳ ಅಮೆರಿಕದ ಮಿಲಿಟರಿ/ಸಿಐಎ ಹಸ್ತಕ್ಷೇಪ

ಅಮೆರಿಕದ ಅಧ್ಯಕ್ಷ ಕ್ಲಿಂಟನ್ ಬರುತ್ತಿದ್ದಾರೆ. ನಮ್ಮ ಘನ ಸರ್ಕಾರ ಕ್ಲಿಂಟನ್ ಭೇಟಿ 'ಸಾಧ್ಯ' ಮಾಡಲು, ಭೇಟಿ 'ಸಾಧ್ಯ'ವಾದ ಮೇಲೆ ಅವರ ಕೃತಾರ್ಥರ್ಣವಾಗಿ ದೇಶದ ಇದ್ದ 'ಮಾನ' ಎಲ್ಲಾ ಅಡವಿಟ್ಟು 'ಉರುಳುಸೇವೆ' ಮಾಡುತ್ತಿದೆ. ಅಮೆರಿಕದ ವಿದೇಶಾಂಗ ಸಚಿವೆ ಹೇಳಿದ ಹಾಗೆ, ಕ್ಲಿಂಟನ್ ಬರುತ್ತಿರುವುದೇ, ಇಂಡಿಯಾವನ್ನು, ಕಾಶ್ಮೀರ ಮತ್ತು ಸಿಟಿಬಿಟಿ ಪ್ರಶ್ನೆಯಲ್ಲಿ ನಮ್ಮ 'ಹಠಮಾರಿ' ಧೋರಣೆ ಮಣಿಸಲು. ಕ್ಲಿಂಟನ್ ಭೇಟಿ ಎರಡು 'ದೊಡ್ಡ'(ಒಂದು ಜನಸಂಖ್ಯೆಯಲ್ಲಿ, ಇನ್ನೊಂದು ಶಸ್ತ್ರಾಸ್ತ್ರಗಳ ಸಂಖ್ಯೆಯಲ್ಲಿ, ಅದರ ಮಿಲಿಟರಿ ಕಗ್ಗೊಲೆ ಮಾಡಿದ 'ಜನಸಂಖ್ಯೆ'ಯಲ್ಲಿ) 'ಪ್ರಜಾಪ್ರಭುತ್ವ'ಗಳ ನಡುವೆ ಸಮಾನ ಸಂಬಂಧ ಸ್ಥಾಪಿಸುವಲ್ಲಿ, ಉತ್ತಮಪಡಿಸುವಲ್ಲಿ ಸಹಾಯಕವಾಗಬಹುದು ಎಂಬ ಭ್ರಮೆ ಇಟ್ಟುಕೊಂಡವರ ಕಣ್ಣು ತೆರೆಸಬಲ್ಲ ಅಂಕಿ ಅಂಶಗಳು. — ಶರತ್‌ಚಂದ್ರ

ಕಳೆದ ನೂರು ವರ್ಷಗಳಲ್ಲಿ 50 ದೇಶಗಳಲ್ಲಿ 116 ಬಾರಿ ಮಿಲಿಟರಿ/ಅಥವಾ ಸಿಐಎ ಮೂಲಕ ಅಮೆರಿಕದ ಸರ್ಕಾರಿ ನೇರ ಮಧ್ಯಪ್ರವೇಶ ಮಾಡಿದೆ. ಹಲವಾರು ಚಿಕ್ಕ ದೇಶಗಳನ್ನು ಆಕ್ರಮಿಸಿಕೊಂಡಿದೆ. ಕ್ರಾಂತಿಗಳನ್ನು ಗರ್ಭದಲ್ಲೇ ಹೊಸಕಿ ಹಾಕಿದೆ. ಮಿಲಟರಿ ಸರ್ವಾಧಿಕಾರಿಗಳನ್ನು ಅಧಿಕಾರಕ್ಕೆ ತಂದಿದೆ. 15 ಬಾರಿ



ಸಿಐಎ ಬಂಧನದಲ್ಲಿ ಕ್ರಾಂತಿಕಾರಿ ಚೆಗೆವಾರ

ಅಣ್ವಸ್ತ್ರ ದಾಳಿ ಬೆದರಿಕೆ ಹಾಕಿದೆ. 25 ದೇಶಗಳ 33 ಅದಕ್ಕೆ ಇಷ್ಟವಿಲ್ಲದ ಪ್ರಮುಖ ನಾಯಕರುಗಳ ಕೊಲೆ ಪ್ರಯತ್ನ ಮಾಡಿದೆ. 23 ದೇಶಗಳ ಮೇಲೆ 30 ಅವಧಿ (ಕೆಲವು ವರ್ಷಗಟ್ಟಲೆ ನಡೆದ) ಗಳಲ್ಲಿ ಬಾಂಬ್ ಮಳೆಗರೆದಿದೆ. ಆದು ದೇಶಗಳ ಚುನಾವಣೆಗಳು ತನಗೆ ಇಷ್ಟವಿಲ್ಲದ 'ನಾಯಕ'ರನ್ನು ತರಬಹುದು ಎಂಬ ಗುಮಾನಿ ಮೇಲೆ 'ಪ್ರಜಾಪ್ರಭುತ್ವ' ವನ್ನು ಸಸ್ಪೆಂಡ್ ಮಾಡಿದೆ. ಕೇವಲ 5 ದೇಶಗಳ ಮೇಲೆ ನಡೆಸಿದ ಮಿಲಿಟರಿ ದಾಳಿಯಲ್ಲಿ 50 ಲಕ್ಷಕ್ಕೂ ಹೆಚ್ಚು ಜನರ ಸಾವಿಗೆ ನೇರವಾಗಿ ಕಾಣವಾಗಿದೆ. ಅಣ್ವಸ್ತ್ರವನ್ನು ಬಳಸಿದ ಜಗತ್ತಿನ ಏಕಮಾತ್ರ ಬೇಜವಾಬ್ದಾರಿ ದೇಶ.

ಇಂತಹ ದೇಶದ ನಾಯಕ ಕ್ಲಿಂಟರನ್ನು ಸ್ವಾಗತಿಸಬೇಕೇ? ಇಲ್ಲಾ ಇದನ್ನು ಓದಿದ ನಂತರ 'ಚಲೇಜಾವ್' ಅನ್ನಬೇಕೆ? ನೀವೇ ನಿರ್ಧರಿಸಿ

ಅಮೆರಿಕ ಕಳೆದ ನೂರು ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಮಿಲಿಟರಿ ಮಧ್ಯ ಪ್ರವೇಶ ಮಾಡಿದ ದೇಶ. ಈ ಲೇಖನದಲ್ಲಿ ಮಂಡಿಸಲಾಗುತ್ತಿರುವ ಅಂಕಿ-ಅಂಶಗಳು 'ಅಂತೆ-ಕಂತೆ'ಯಲ್ಲ. ಅಮೆರಿಕದ 'ಪತ್ರಾಗಾರ'ದಲ್ಲಿ 30 ವರ್ಷದ 'ಗುಪ್ತ ಅವಧಿ' ಮುಗಿದು ಸಾರ್ವಜನಿಕರ ಅವಗಾಹನೆಗೆ ಇರುವ, ಅಮೆರಿಕದ ಪಾರ್ಲಿಮೆಂಟಿಗೆ ಕೊಡಲಾದ ಮಾಹಿತಿ, ಸರ್ಕಾರಿ ಪ್ರಕಟಣೆಗಳ ಮೇಲೆ ಆಧಾರಿತ. ಇಲ್ಲಿ ಕೊಡುವ ಅಂಕಿ ಅಂಶಗಳ 1980 ರಿಂದ 1999 ರ ವರೆಗಿದ್ದು.

ಅಮೆರಿಕ ಹಲವು ರೀತಿಯಲ್ಲಿ ಮಧ್ಯಪ್ರವೇಶ ಮಾಡುತ್ತದೆ. ಇಲ್ಲಿನ ಅಂಕಿ-ಅಂಶಗಳು ಈ ಕೆಳಗಿನ ನೇರ ಮಿಲಿಟರಿ / ಸಿಐಎ ಮಧ್ಯ ಪ್ರವೇಶಕ್ಕೆ ಮಾತ್ರ ಸಂಬಂಧಿಸಿತ್ತು

- ಅಮೆರಿಕದ ಸೈನ್ಯ ವಿದೇಶವೊಂದರಲ್ಲಿ ಕಾರ್ಯಾಚರಣೆ ನಡೆಸಿದ್ದು
- ಸೈನ್ಯ ಭೂ ಅಥವಾ ನೌಕಾ ಸೈನ್ಯ ವಿದೇಶವೊಂದರಲ್ಲಿ ಹೋಗಿ ಇಳಿದು ಮಧ್ಯ ಪ್ರವೇಶ ಮಾಡಿದ್ದು.
- ಬಾಂಬ್ ಅಥವಾ ಕ್ಷಿಪಣಿ ದಾಳಿ ಮಾಡಿದ್ದು.
- ಅಣ್ವಸ್ತ್ರ ಬೆದರಿಕೆ ಹಾಕಿದ್ದು
- ಸಿಐಎ ಅಥವಾ ಮಿಲಿಟರಿ ನೇರವಾಗಿ ವಿದೇಶಿ ನೆಲದಲ್ಲಿ ಆ ದೇಶದ ಅಥವಾ ಇನ್ನೊಂದು ದೇಶದ ಸೈನ್ಯ ಅಥವಾ ಅರೆ-ಸೈನ್ಯ ಪಡೆಗಳನ್ನು ನೇರವಾಗಿ ನಿಯಂತ್ರಿಸಿ/ಬಳಸಿದ್ದು.

ಅಮೆರಿಕದ ಅರೆ-ಸೈನ್ಯ ಪಡೆಗಳುನ್ನು (ಉದಾ. ನೇಶನಲ್ ಗಾರ್ಡ್ಸ್) ಬಳಸಿದ, ಮಿಲಿಟರಿ ಅಥವಾ ಸಿಐಎ, ನೇರ ನಿಯಂತ್ರಣ ಹೊಂದಿದ ಆದರೆ ಭಾಗವಹಿಸಿದ, ಸೈನ್ಯವನ್ನು ಶಾಶ್ವತ ನೆಲೆ ಸ್ಥಾಪಿಸಿದ, ಅಮೆರಿಕನ್ ಮಿಲಿಟರಿ ಅಥವಾ ಸಿಐಎ ಪಾತ್ರಗಳನ್ನು ಗುಪ್ತವಾಗಿಡುವ, ಅಮೆರಿಕ ತನ್ನ ಇತರ 'ಶಾಂತಿಯುತ' ಸಂಘಟನೆಗಳನ್ನು ಬಳಿಸದ ನೂರಾರು ಮಧ್ಯಪ್ರವೇಶಗಳು ಇದರಲ್ಲಿ ಸೇರಿಲ್ಲ.

ಅಮೆರಿಕ್ ಮಿಲಿಟರಿ/ಸಿಐಎ ನೇರ ಹಸ್ತಕ್ಷೇಪದ ಅಂಕಿ ಅಂಶಗಳಲ್ಲದೆ - ಸಿಐಎ ಪ್ರಮುಖ ನಾಯಕರ (ಮುಖ್ಯವಾಗಿ ಮೂರನೇ ಜಗತ್ತಿನ) ಕೊಲೆ ಯತ್ನ, ದೀರ್ಘ ಮಿಲಿಟರಿ ಆಕ್ರಮಣ, ಕಬಳಿಕೆ, ತೀವ್ರ ಸಾವು-ನೋವು ಮಾಡಿದ ಯುದ್ಧಗಳ, ಚುನಾವಣೆಯಲ್ಲಿ ನೇರ ಹಸ್ತಕ್ಷೇಪದ, ಒಟ್ಟಾರೆ ಪ್ರಮುಖ ಹಸ್ತಕ್ಷೇಪಗಳ - ಬಗೆಗೂ ಅಂಕಿ ಅಂಶಗಳಿವೆ ಬಾಕ್ಸ್‌ನಲ್ಲಿ.



ಕೊಲೆಯಾದ 'ಚೆ'ನ ಎದೆಯಲ್ಲಿ ಗುಂಡು ಎಣಿಸುತ್ತಿರುವ ಹಂತಕರು

ಅತಿದೊಡ್ಡ ಅಮೆರಿಕ್ ನರಮೇಧಗಳು

ಕಂಬೋಡಿಯಾ (69-95, 20 ಲಕ್ಷ ಸಾವು ಅಮೆರಿಕನ್ ಬಾಂಬ್ ದಾಳಿ ಮತ್ತು ಅದರಿಂದ ಉಂಟಾದ ಹಸಿವು, ರಾಜಕೀಯ ಅರಾಜಕತೆಯಿಂದ)

ವಿಯೆಟ್ನಾಂ (60-75, 10 ಲಕ್ಷ ಸಾವು, ಭಾರಿ ಆಸ್ತಿಪಾಸ್ತಿ, ಪರಿಸರ ಹಾನಿ)

ಇಂಡೋನೋಶ್ಯಾ (...... ಸಿಐಎ ನಿರ್ದೇಶಿತ ಮಿಲಿಟರಿ ಕ್ಷಿಪ್ರಕ್ರಾಂತಿಯಲ್ಲಿ ಕಮ್ಯುನಿಸ್ಟರ ಕೊಲೆ)

ಫಿಲಿಪೈನ್ಸ್(1898-1910, ಸ್ಪೈನ್‌ನ ವಿರುದ್ಧ ಯುದ್ಧ, 6 ಲಕ್ಷ ಜನರ ಕೊಲೆ)

ಇರಾಕ್ (90-?, ಎರಡು ಲಕ್ಷ ಜನ ಕೊಲೆ, ಮುಂದುವರೆಯುತ್ತಿರುವುದು)

ಚುನಾವಣೆಯಲ್ಲಿ

ಅಮೆರಿಕದ ಮಿಲಿಟರಿ/ಸಿಐಎ ಚುನಾವಣೆಯಲ್ಲಿ ನೇರವಾಗಿ ಮಧ್ಯಪ್ರವೇಶಿಸಿದ ದೇಶಗಳೆಂದರೆ ಕ್ಯೂಬಾ (06, 09), ಪನಾಮಾ(08, 12, 20) ಹೊಂಡೂರಾನ್(24, 24), ಡೊಮಿನಿಕನ್ ರಿಪಬ್ಲಿಕ್ (65, 66), ಚಿಲಿ (73), ಇಂಡೋನೇಶ್ಯಾ (65), ಇದಲ್ಲದೆ ಪೂರ್ವ ಯುರೋಪಿನಲ್ಲಿ 48-56, ಪಶ್ಚಿಮ ಯುರೋಪು 48-80 ರವರೆಗೆ.

ಕಮ್ಯುನಿಸ್ಟರನ್ನು ಅಧಿಕಾರಕ್ಕೆ ಬಾರದಂತೆ, ಮುಂದುವರೆಯದಂತೆ ವಿರೋಧಿ ರಂಗಗಳ ಚದುರಂಗದಾಟ (ಮುಖ್ಯವಾಗಿ ಇಟಲಿಯಲ್ಲಿ)

ಕಮಾಂಡ್-ಕಂಟ್ರೋಲ್

ಎರಡನೇ ಮಹಾಯುದ್ಧದ ನಂತರ ಅಮೆರಿಕ ನೇರ ತನ್ನ ಸೈನಿಕರನ್ನು .... ಬಳಸಿ ಮಿಲಿಟರಿ ದಾಳಿಗಿಂತ ಹಚ್ಚಾಗಿ (ಅದರಲ್ಲಿ ಪ್ರಮುಖ ದೊಡ್ಡ ದೇಶಗಳಲ್ಲಿ) ತನ್ನ ಮಿಲಿಟರಿ/ಸಿಐಎ ಉನ್ನತ ಅಧಿಕಾರಿಗಳನ್ನು ಬಳಸಿ ಸ್ಥಳೀಯ ಸೈನ್ಯ ಅಥವಾ ಇತರ ವಿರುದ್ಧ ಸೈನ್ಯ ಬಳಸುವ ತಂತ್ರ ಪರಿಪಕ್ವ ಗೊಳಿಸಿತ್ತು. ಇದಕ್ಕಾಗಿ ಎಲ್ಲಾ ಇಂತಹ ದೇಶಗಳ ಮಿಲಿಟರಿ ನಾಯಕನ ಒಂದು ವಿಭಾಗದ ಜತೆ ಯಾವಾಗಲೂ ಸಂಬಂಧವಿರಿಸಿಕೊಂಡಿತ್ತು. ಮಿಲಿಟರಿ - ಸಹಕಾರ 'ತರಬೇತಿ' ಕಾರ್ಯಕ್ರಮದ ಮೂಲಕ ಇದನ್ನು ಸಾಧಿಸಲಾಗಿತ್ತು. ಭಾರತದ ಮಿಲಿಟರಿ ಜತೆ ಇಂತಹ 'ಮಿಲಿಟರಿ ಸಹಕಾರ', 'ತರಬೇತಿ', 'ಜಂಟಿ ಕವಾಯತು' ಆಗಲೇ ಆರಂಭವಾಗಿದೆ. ದೆಹಲಿಯಲ್ಲಿ ಅಮೆರಿಕದ ಅಂತರಿಕ ಬೇಹುಗಾರಿಕೆ ಸಂಸ್ಥೆ ಎಫ್‌ಬಿಐಗೆ ಕಚೇರಿ ಆರಂಭಿಸಲು ಅನುಮತಿ ನೀಡಲಾಗಿದೆ ಎಂಬುದು ಈ ಕೆಳಗಿನ ಅಂಕೆ-ಸಂಖ್ಯೆ ನೋಡಿದರೆ ಬೆಚ್ಚಿಬೀಳುವಂತಹದು. ಇಂತಹ 'ಮಿಲಿಟರಿ ಕಾರ್ಯಾಚರಣೆ'ಗಳು ದೀರ್ಘ ಕಾಲ ನಡೆದಿವೆ(ಏಕೆಂದರೆ ಅಮೆರಿಕದ ಸೈನಿಕರ ಹಾನಿ-ಅಂತರಿಕ ರಾಜಕೀಯ ಸಮಸ್ಯೆ ಇಲ್ಲವಲ್ಲ) ಇಂತಹ ಪ್ರಮುಖ ಕಾರ್ಯಾಚರಣೆಗಳೆಂದರೆ

ಗ್ರೀಸ್(47-49, ಅಲ್ಲಿನ ಬಲಪಂಥೀಯರನ್ನು ಪ್ರಗತಿಪರರಚಳುವಳಿಯ ವಿರುದ್ಧ ಬಳಸಿದ್ದು)

ಫಿಲಿಪ್ಪೈನ್ಸ್ (48-54, ಅಮೆರಿಕದ ಪಾಳೆಗಾರಿಕೆ ವಿರುದ್ಧ ಎದ್ದ ಹಕ್ ದಂಗೆಯ ವಿರುದ್ಧ)

ಇರಾನ್ (53 ರಲ್ಲಿ ರಾಷ್ಟ್ರೀಯವಾದಿ ಅಧ್ಯಕ್ಷರ ಪದಚ್ಯುತಿ, ದೊರೆ ಷಾ ಗದ್ದುಗೆಯಲ್ಲಿ ಕೂಡಿಸಿದ ಕ್ಷಿಪ್ರಕ್ರಾಂತಿ)

ಗ್ವಾಟೆಮಾಲಾ(66-67, ಗೆರಿಲ್ಲಾಗಳ ವಿರುದ್ಧ ಸ್ಥಳೀಯ ಗ್ರೀನ್ ಬೆರೆಟ್ಸ್ ಬಳಕೆ)

ಅಂಗೋಲಾ(75-92, ಸಿಐಎ ನಿರ್ದೇಶಿತ ದ.ಆಫ್ರಿಕಾ ಬೆಂಬಲಿತ ವಿರೋಧಿ ಗೆರಿಲ್ಲಾಗಳು

ಕ್ಯೂಬಾ (61 -- ಬೇ ಆಫ್ ಪಿಗ್ಸ್ ದಾಳಿ -ಸಿಐಎ ನಿರ್ದೇಶಿತ)

ಇಂಡೋನೇಶ್ಯಾ (65-66, ಹತ್ತು ಲಕ್ಷ ಕಮ್ಯುನಿಸ್ಟರು-ಬೆಂಬಲಿಗರನ್ನು ಕೊಂದು ಅಧಿಕಾರಕ್ಕೆ ಬಂದ ಜನರಲ್ ಸುಹಾರ್ತೋ ಹಿಂದೆ ಸಿಐಎ ನಿರ್ದೇಶನ

ಲಾವೋಸ್ (71-73 ವಿಯೆಟ್ನಾಮ್ ಮೇಲೆ ಅಲ್ಲಿಂದ ದಾಳಿ)

ಚಿಲಿ (73 - ಅಲೆಂದೆ ಉರುಳಿಸಿ ಕುಖ್ಯಾತ ಜನರಲ್ ಪಿನೋಶೆ ಅಧಿಕಾರಕ್ಕೆ ತಂದದ್ದು ಪೂರ್ಣ ಸಿಐಎ ನಿರ್ದೇಶಿತ)

ಎಲ್-ಸಾಲ್ವಡೋರ್(81-90, ಪೂರ್ಣ ಸಿಐಎ ನಿರ್ದೇಶಿತ 'ಕಾಂಟ್ರಾ' ಕೊಲೆಗಳು ದಾಳಿಗಳ ಮೂಲಕ)

ದೇಶವನ್ನು ಆಕ್ರಮಿಸಿ, ದೀರ್ಘಕಾಲ ವಶಪಡಿಸಿಕೊಂಡದ್ದು

ಅಮೆರಿಕ ಹಲವು ಮಧ್ಯಪ್ರವೇಶಗಳು ಮಿಲಿಟರಿ ಆಕ್ರಮಣ, ವಶಪಡಿಸುವಿಕೆಯು ಅಮೆರಿಕದ ವಸಾಹತುನಲ್ಲಿ ಕೊನೆಗೊಂಡಿದೆ. ಇಂತಹ ಉದಾಹರಣೆಗಳು

ಹವಾಯಿ (1893, ಸ್ಪೈನ್‌ನಿಂದ ಕಸಿದುಕೊಂಡದ್ದು)

ಕ್ಯೂಬಾ 1898, ಸ್ಪೈನ್‌ನಿಂದ ಕಸಿದುಕೊಂಡದ್ದು)

ಫಿಲಿಪೈನ್ಸ್ (1898-1910 ಸ್ಪೈನ್‌ನಿಂದ ಕಸಿದುಕೊಂಡದ್ದು - 6 ಲಕ್ಷ ಜನರ ಕೊಲೆ)

ಕೆಲವೊಮ್ಮೆ ಅವರು ಸತ್ಯ ಹೇಳುವುದುಂಟು!!

ನಾವು ಜಗತ್ತಿನ ಕೇವಲ ಶೇಕಡಾ 6.3 ಜನಸಂಖ್ಯೆಯಲ್ಲ, ಆದರೆ ಜಗತ್ತಿನ ಅರ್ಧ ಸಂಪತ್ತು ನಮ್ಮಲ್ಲಿದೆ.... ಇಂತಹ ಸಂದರ್ಭದಲ್ಲಿ ನಾವು ಎಲ್ಲರ ಮತ್ಸರ ಮತ್ತು ಅತೃಪ್ತಿಗೆ ಈಡಾಗುವುದು ಸಹಜ. ಇನ್ನು ಮುಂದೆ ಬರುವ ದಿನಗಳಲ್ಲಿ ಈ ಅಸಮಾನತೆಯನ್ನು ಉಳಿಸಿಕೊಳ್ಳುವ ರೀತಿಯಲ್ಲಿ ಇತರರ ಜತೆ ಸಂಬಂಧ ಏರ್ಪಡಿಸಿಕೊಳ್ಳುವುದು ನಮ್ಮ ಕೆಲಸ. ನಾವು ಜೀವನಮಟ್ಟ ಏರಿಸುವ, ಮಾನವ ಹಕ್ಕುಗಳ, ಪ್ರಜಾಸತ್ತಾತ್ಮೀಕರಣ ಬಗ್ಗೆ ಮಾತನಾಡುವುದು ನಿಲ್ಲಿಸಬೇಕು. ಬರಿ ತೋಳ್ಬಲದ ಭಾಷೆಯಲ್ಲಿ ಮಾತನಾಡಬೇಕಾದ ದಿನಗಳು ದೂರವಿಲ್ಲ. ಈ ಆದರ್ಶದ ಮಾತುಗಳನ್ನು ಕಡಿಮೆ ಮಾಡಿದಷ್ಟು ನಮಗೆ ತೊಂದರೆ ಕಡಿಮೆ.

ಜಾರ್ಜ್ ಕೆನ್ನನ್,
ಅಮೆರಿಕದ ವಿದೇಶ ಸಚಿವಾಲಯದ ನೀತಿ ಯೋಜನಾ ಸಮಿತಿಯ ಡೈರೆಕ್ಟರ್, 1948

ಪನಾಮಾ (1903-14, ಕೊಲಂಬಿಯದಿಂದ ಕಸಿದುಕೊಂಡ 1914 ರಲ್ಲಿ ಪನಾಮಾ ಕಾಲುವೆ ನೇರ ವಸಾಹತು ಮಾಡಿದ್ದು)

ನಿಕರಾಗುವ (1912-33, 10 ವರ್ಷಗಳ ಕಾಲ ನೇರ ಹಿಡಿತ)

ಹೈಟಿ (1914-34, 19 ವರ್ಷಗಳ ಕಾಲ ನೇರ ಆಡಳಿತ)

ಗುವಾಮ್ (1898, ನೇರ ವಸಾಹತು, ಈಗಲೂ ಮಿಲಿಟರಿ ನೆಲೆ)

ಪೋರ್ಟೋರಿಕೋ (1898, ನೇರ ವಸಾಹತು, ಈಗ ದೇಶದ ಒಂದು ಪ್ರಾಂತ್ಯ)

ಡೊಮಿನಿಕನ್ ರಿಪಬ್ಲಿಕ್ (1906-24, 8 ವರ್ಷಗಳ ಕಾಲ ಮಿಲಿಟರಿ ಹಿಡಿತ/ ಆಡಳಿತ)

ಗ್ರೆನಾಡಾ(1989-84, ನೇರ ಆಡಳಿತ)

ಜನಪ್ರಿಯ ನಾಯಕರ ಕೊಲೆಗೆ ಸಿಐಎ ಯತ್ನ

ಸಿಐಎ ನೇರವಾಗಿ ಒಪ್ಪಿಕೊಂಡ (ಅತ್ಯಂತ 'ಹೆಮ್ಮೆ'ಯಿಂದ) ಕೊಲೆಗಳೆಂದರೆ ಪ್ರಸಿದ್ಧ ಜನನಾಯಕ ಚೆಗೆವಾರ(1968) ಮತ್ತು ಚಿಲಿಯ ಚುನಾಯಿತ ಅಧ್ಯಕ್ಷ ಅಲೆಂದೆ (1973)ರದ್ದು ಮಾತ್ರ. ಸಿಐಎ ಇನ್ನೂ ಹಲವಾರು ನಾಯಕರನ್ನು ಕೊಲೆ ಮಾಡಲು ಪ್ರಯತ್ನಿಸಿದೆ. ಕೆಲವದರಲ್ಲಿ ಸಫಲವಾಗಿದೆ, ವಿಫಲವಾಗಿದೆ. 1955 ರಲ್ಲಿ ನೆಹರೂ ಕೊಲೆಗೂ ಯತ್ನಿಸಿತ್ತು ಎಂಬುದು ನಿಮಗೆ ಗೊತ್ತೆ?

ಈ ಬಗ್ಗೆ ಕೆಲವು ಅಂಕಿ ಅಂಶಗಳು

- ಕೇವಲ ಕಳೆದ 50 ವರ್ಷಗಳಲ್ಲಿ 25 ದೇಶಗಳ 33 ನಾಯಕರನ್ನು ಕೊಲೆ ಮಾಡಲು ಪ್ರಯತ್ನಿಸಿದೆ.
- ಕೆಲವು ನಾಯಕರ ಕೊಲೆಗೆ ಹಲವು ಬಾರಿ ಪ್ರಯತ್ನಿಸಿ ವಿಫಲವಾಗಿದೆ. ಇದರಲ್ಲಿ ಅಗ್ರಗಣ್ಯರೆಂದರೆ ಕ್ಯೂಬಾದ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ. ಕಳೆದ 40 ವರ್ಷಗಳಲ್ಲಿ ಅವರನ್ನು ಕೊಲ್ಲಲು ಲೆಕ್ಕವಿಲ್ಲದಷ್ಟು ಯತ್ನಗಳಾಗಿವೆ. ಅವರ ಕೊಲೆ ಯತ್ನದಲ್ಲಿ ಸಿಐಎ ತನ್ನ ಬತ್ತಳಿಕೆಯಲ್ಲಿನ ಎಲ್ಲಾ ಬಾಣಗಳನ್ನು ಬಳಸಿ ವಿಫಲವಾಗಿದೆ.
- ಹಲವು ಕೊಲೆ ಯತ್ನಕ್ಕೆ ಗುರಿಯಾದ ಇತರ ನಾಯಕರೆಂದರೆ ಕ್ಯೂಬಾದ ರಾವುಲ್ ಕ್ಯಾಸ್ಟ್ರೋ, ಇರಾಕ್‌ನ ಸದ್ದಾಂ ಹುಸೇನ್, ಲಿಬ್ಯಾದ ಗದ್ದಾಫಿ, ಚೀನಾದ ಚೌ-ಎನ್-ಲಾಯ್, ಇಂಡೋನೇಶ್ಯಾದ ಸುಕರ್ಣೋ, ಕೊರಿಯಾದ ಕಿಮ್-ಸುಂಗ್
- ಸಿಐಎ ಕೊಲೆ ಯತ್ನದಲ್ಲಿ ಸಫಲ ರಾದದ್ದೆಂದರೆ ಚೆಗವಾರಾ, ಅಲೆಂದೆಯಲ್ಲದೆ ಸಿಐಎ ಕೊಲೆ ಮಾಡಲು ಪ್ರಯತ್ನಿಸಿದ ಪ್ರಮುಖರೆಂದರೆ ನೆಹರೂ(ಇಂಡಿಯಾ), ನಾಸೆರ್(ಈಜಿಪ್ಟ್), ಸಿರನೌಕ್ (ಕೆಂಬೋಡಿಯಾ), ಖೊಮೆನಿ (ಇರಾನ್), ಚಾರ್ಲ್ಸ್ ಡಿಗಾಲೆ(ಫ್ರಾನ್ಸ್)
- 1950 ರ ದಶಕದಲ್ಲಿ ಪಶ್ಚಿಮ ಜರ್ಮನಿಯಲ್ಲಿ ಹಲವು ಪ್ರಮುಖ ಪ್ರಗತಿಪರ/ಎಡಪಂಥೀಯ ನಾಯಕರು, 1984 ರಲ್ಲಿ ನಿಕರಾಗುವ ಹಲವು ಸ್ಯಾಂಡಿನಿಸ್ತಾ ನಾಯಕರ ಕೊಲೆಗೂ ಯತ್ನ ನಡೆಯಿತು.



ಪ್ರತಿಕ್ರಾಂತಿಯಲ್ಲಿ ಕೊಲೆಯಾದ ಅಲೆಂದೆ

ಅಮೆರಿಕದ ಸಿಂಹಸ್ವಪ್ನ, ಅವರ ಎಲ್ಲಾ ಕೊಲೆ ಯತ್ನಗಳನ್ನು ಮೆಟ್ಟಿ ನಿಂತ ಕ್ಯಾಸ್ಟ್ರೋ ಹಾಗೂ ಸಿಐಎಯಿಂದ ಕೊಲೆಗೀಡಾದ ಚೆ



ಮಾರ್ಚ್ 9 'ದೆಹಲಿ ಚಲೋ' ಜನಾಂದೋಲನವಾಗಲಿ

- ಡಾ|| ಜಿ. ರಾಮಕೃಷ್ಣ

ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಬಿ.ಜೆ.ಪಿ. ಮೈತ್ರಿ ಕೂಟದ ಕೇಂದ್ರ ಸರ್ಕಾರದ ಉದಾರೀಕರಣ ಆರ್ಥಿಕ ನೀತಿಗಳ ವಿರುದ್ಧ ಬೃಹತ್ ಹೋರಾಟಕ್ಕೆ ಕರೆ ನೀಡಿರುವುದು ಅಭಿನಂದನೀಯ ಎಂದು ರಾಜ್ಯದ ಎಸ್.ಪಿ.ಎಂ.ಓ. ಸಮಾವೇಶ ಉದ್ಘಾಟಿಸಿ ಮಾತು ಆರಂಭಿಸಿದ ಸಮಾಜ ವಾದಿ ಚಿಂತಕ ಪ್ರಖ್ಯಾತ ಬರಹಗಾರರಾದ ಡಾ|| ಜಿ. ರಾಮಕೃಷ್ಣ ನುಡಿದರು. ಇಂತಹ ಹೋರಾಟಕ್ಕೆ ಎಲ್ಲಾ ಸಂಘಟನೆ ಒಕ್ಕೊರಲಿನಿಂದ ಕೂಡಿರುವುದು ಪ್ರಶಂಸನೀಯ ಎಂದರು.

ಬಿಜೆಪಿಯ ಈ ಕೋಮುವಾದಿ ಅಜೆಂಡಾವನ್ನು ಎಳೆ ಎಳೆಯಾಗಿ ಬಿಚ್ಚಿಟ್ಟ ಅವರು ಬಿಜೆಪಿಯ ಉದಾರೀಕರಣ ನೀತಿಯಿಂದಾಗಿ ಇಡೀ ದೇಶ ಬೃಹತ್ ಸಂಕಷ್ಟಗಳನ್ನು ಎದುರಿಸುವ ಪರಿಸ್ಥಿತಿ ಬಂದಿದೆ ಇದರ ವಿರುದ್ಧ ತೀವ್ರರೂಪದ ಹೋರಾಟ ಅಗತ್ಯ ಎಂದರು.

ಉದಾರೀಕರಣ ಒಪ್ಪಿಕೊಂಡವರು ಈಗ ಅದರ ಪರಿಣಾಮದ ತೀವ್ರತೆಯನ್ನು ಅರಿಯುವ ಸ್ಥಿತಿ ಉಂಟಾಗಿದೆ ಎಂದು ಪ್ರಜಾವಾಣಿಯ ಸಂಪಾದಕೀಯ ಉದಾಹರಿಸುತ್ತಾ ಮೈಸೂರು ಕಾಗದ ಕಾರ್ಖಾನೆಯಲ್ಲಿ ಪೇಪರ್ ಖರೀದಿಸುವಿಕೆಯಲ್ಲಿ ಆಮದು ಮಾಡಿಕೊಳ್ಳಲು ವಿದೇಶಿ ದರ ಒಂದು ಟನ್‌ಗೆ 17 ಸಾವಿರ ರೂ.ಗಳು ಆದರೆ ಇಲ್ಲಿಯ ಪೇಪರ್ ಒಂದು ಟನ್ನಿಗೆ 21 ಸಾವಿರ ಆಗುತ್ತದೆ. ಇದರಿಂದ ವಿದೇಶಿ ಪೇಪರ್ ಖರೀದಿಸುವ ನೀತಿಯ ಮುಂದಿನ ಪರಿಣಾಮವೇನು ಎಂಬುದನ್ನು ತಿಳಿಸಿದ್ದರು.

ಕ್ಲಿಂಟನ್ ಮಹಾರಾಜನ ಅಡ್ಡಪಲ್ಲಕ್ಕಿ ಉತ್ಸವ

ಕ್ಲಿಂಟನ್ ಮಾಹಾರಾಜನ ಆಗಮನಕ್ಕಾಗಿ ಕಾದುಕುಳಿತಿರುವ ವಾಜಪೇಯಿ ಮತ್ತು ಜಸ್ವಂತ್ ಸಿಂಗ್‌ರು ಅಡ್ಡ ಪಲ್ಲಕ್ಕಿಯಲ್ಲಿ ಕ್ಲಿಂಟನ್ ಮಹಾರಾಜನನ್ನು ಹೊರಲು ತುದಿಗಾಲಲ್ಲಿ ನಿಂತಿದ್ದಾರೆ. ತಮ್ಮ ಸರ್ವಸ್ವವನ್ನು ಮೀಸಲಿಟ್ಟಿದ್ದಾರೆ. ಕ್ಲಿಂಟನ್ ಬರುವಾಗ ಬಿಗಿಭದ್ರತೆಗಾಗಿ ಅಮೇರಿಕಾದ ಭದ್ರಾತಾ ಪಡೆಗಳನ್ನು ದೇಶದೆಲ್ಲಡೆ ಸಂಚರಿಸಲು ವ್ಯವಸ್ಥೆಯಾಗುತ್ತಿದೆ. ಇಂತಹ ನಾಚಿಕೆಗೆಟ್ಟ ವಿಷಯ ಮೊತ್ತೊಂದಿಲ್ಲ ಎಂದು ಕಿಡಿಕಾರಿದರು.

ಸಂಸ್ಕೃತಿಯನ್ನು ಸಾರುವ ಸಾರ್ವಭೌಮರು!

ವಿಧವಾ ಮಹಿಳೆಯರ ಸಮಸ್ಯೆಗಳಿಗೆ ಸಂಬಂಧಿಸಿ ದೀಪ ಮೆಹ್ತಾರವರು ವಾಟರ್ ಸಿನಿಮಾ ನಿರ್ಮಾಣ ಮಾಡಲು ಹೊರಟರೆ ಅದನ್ನು ಅಡ್ಡಿಪಡಿಸಿದ ಇವರ ಖಾಕಿ ಚಡ್ಡಿ ಪರಿವಾರದ ಬಗ್ಗೆ ಚಕಾರವೆತ್ತದೆ ಸಿನಿಮಾ ನಿಷೇದಿಸಿದ್ದಾರೆ. ಇಂತಹವರನಾಯಕ ವಾಜಪೇಯಿಯವರು ದೇಶದ ಸಾರ್ವಬೌಮತೆ ಬಗ್ಗೆ ಮಾತಾನಾಡುತ್ತಾರೆ ಸಂವಿದಾನ ಪರಾಮರ್ಶೆ ಹನ್ನೊಂದು ಜನ ವಾಗ್ಪಟರಿಂದ ಆಗಬೇಕೆಂದು ಸಮಿತಿಯನ್ನು ನೇಮಿಸಿದ್ದಾರೆ. ಈ ರಾಷ್ಟ್ರ ಪ್ರೇಮಿಗಳು ಸಂವಿದಾನದ ಮೂಲಭೂತ ಬದಲಾವಣೆ ಮಾಡುವುದಿಲ್ಲ ವೆಂದು ಗೊಂಸುಂಬೆ ಮಾತಾಡುತ್ತಿದ್ದಾರೆ. ದೇಶಕ್ಕೆ ಅವಮಾನ ಮಾಡುತ್ತಿದ್ದಾರೆ.

ನಮ್ಮದು ಪ್ರಜಾತಂತ್ರ ರಾಷ್ಟ್ರ. ನಮ್ಮ ಸಂವಿದಾನ ಪರಾಮರ್ಶಿಸಲು ಅಧಿಕಾರ ವಿರುವುದು 100 ಕೋಟಿ ಪ್ರಜೆಗಳಿಗೆ ಅವರಿಂದ ಆರಿಸಿ ಬರಲು ಪ್ರತಿನಿಧಿಗಳಿಗೆ ಸಂಸತ್ತಿಗಿದೆ. ಎಂಬುದು ತಿಳಿದಿದ್ದರು ಈ ಎಲ್ಲಾ ಅಂಶಗಳನ್ನು ಧಿಕ್ಕರಿಸಿ ಸಂವಿದಾನ ವಿಮರ್ಶೆಗೆ ಸಮಿತಿ ನೇಮಿಸಿದ್ದಾರೆ. ಈ ಎಲ್ಲಾ ಅಂಶಗಳು ಬಹುರಾಷ್ಟ್ರೀಯ ಕಂಪನಿಗಳನ್ನು ಸಾಮ್ರಾಜ್ಯಶಾಹಿ ಕ್ಲಿಂಟನ್ ಮಹಾರಾಜರನ್ನು ಓಲೈಸುವುದು ಎಂದು ಬಣ್ಣಿಸಿದರು. ಸಾರ್ವಜನಿಕ ಶ್ರಮದ ಹಣ ಕೊಳ್ಳೆ ಹೊಡೆಯಲು ಪ್ರಯತ್ನಿಸುತ್ತಿದ್ದಾರೆ. ಮಹಾಭಾರತದ ಕಥೆಯೊಂದನ್ನು ಉದಾಹರಿಸಿ ನಮ್ಮದೇಶದ ಸಂಪತ್ತು ಸೃಷ್ಟಿಯಲ್ಲಿ ನಮ್ಮ ಬೃಹತ್ ಸಾರ್ವಜನಿಕ ಉದ್ಯಮಗಳು ನಾಲಾಯಕ್ ಎನ್ನುವಂತೆ ಗುಲ್ಲೆಬ್ಬಿಸುತ್ತಿದ್ದಾರೆಂದರು.

ಸಾಂಸ್ಕೃತಿಕ ಅದಃಪತನ ವೆಸಗುತ್ತಿರುವ ಬಿಜೆಪಿ ಆರ್.ಎಸ್.ಎಸ್. ಅದರ ಚಡ್ಡಿ ವೃಂದಗಳಿಗೆ ಉಪೇಂದ್ರನ ಸಿನಿಮಾದಲ್ಲಿ ಮಹಿಳೆಯ ಬಗ್ಗೆ ಹೀನಾಯವಾಗಿ ತೋರಿಸಿದರು ಬೇಜಾರಾಗುವುದಿಲ್ಲ ಅದಕ್ಕೆ ಯಾವ ಅಡ್ಡಿಯೂ ಇಲ್ಲ. ನಾಚಿಕೆ ಪಡುವುದಿಲ್ಲ! ಎಂದರು.

ಎಲ್ಲರಿಗೂ ಉದ್ಯೋಗ, ಶಿಕ್ಷಣಕ್ಕಾಗಿ ಹೋರಾಡಿ

ಈ ಪ್ರಭುತ್ವ ಶಕ್ತಿ ಯಾರ ಪರವಾಗಿದೆ ಎಂಬುದನ್ನು ಅರಿತು ಕೊಳ್ಳಬೇಕು ಎಲ್ಲರಿಗೂ ಉದ್ಯೋಗ ಶಿಕ್ಷಣ ಅದಕ್ಕಾಗಿ ಹೋರಾಟ ಮಾಡಲು ನಮ್ಮ ಎಲ್ಲಾ ಸಣ್ಣ ವಿಚಾರಗಳನ್ನು ಮರೆತು ಒಗ್ಗೂಡಿ ಕೆಲಸ ಮಾಡಿ ದೊಡ್ಡಮಟ್ಟದ ಹೋರಾಟಕ್ಕೆ ಸಿದ್ದಾರಾಗಬೇಕು ಮಾತಿನಲ್ಲಿ ಸಮಯ ವ್ಯಯಮಾಡದೆ ಬೀದಿಗಿಳಿದು ಕ್ರಿಯೆ ಆಗಲಿ ಎಂದು ಆಶಿಸುತ್ತೇನೆಂದು ಎಂದು ಮಾತು ಮುಗಿಸಿದರು.

ಈ ಸಮಾವೇಶದ ಮುಖ್ಯ ಬಾಷಣ ಮಾಡಿದ ಸಿಐಟಿಯು ರಾಜ್ಯ ಉಪಾದ್ಯಕ್ಷರಾದ ಕಾಮ್ರೆಡ್ ಸೂರ್ಯನಾರಾಯಣರಾವ್ ಮಾತನಾಡಿ ದುಡಿಯುವ ಜನರ ರಾಷ್ಟ್ರೀಯ ಒಕ್ಕೂಟದ ಕರೆಯ ಮೇರೆಗೆ ಈ ಸಮಾವೇಶ ನಡೆಯುತ್ತಿದೆ ಏಕೆ ಈ ಸಮಾವೇಶ? ನ' ವ' ೨ ದೇಶಕ್ಕೆ ಏನಾಗಿದೆ ಹಿಂದೆ ಸ್ವಾತಂತ್ರ ಪೂರ್ವದಲ್ಲಿ ನಮ್ಮ ದೇಶದ ಕೈಗಾರಿಕೆಗಳು ಹಿಂದುಳಿದಿದ್ದವು ಕಾರಣ ಕಚ್ಚಾಮಾಲುಗಳನ್ನು ಲೂಟಿ ಹೊಡೆಯಲು ಅಂದಿನ ಸಾಮ್ರಾಜ್ಯ ಶಾಹಿಗಳು ಪ್ರಯತ್ನಿಸುತ್ತಿದ್ದರು ಸ್ವಾತಂತ್ರ ನಂತರದಲ್ಲಿ ಜವಾಹರ್ ಲಾಲ್ ನೆಹರು ಅಂತಹವರು ಸಮಾಜವಾದಿ ರಷ್ಯಾ ಕಡೆ ನೋಡಿದರು. ನಮ್ಮ ದೇಶದ ಅನೇಕರನ್ನು ಬೇರೆ ಬೇರೆ ದೇಶಗಳಿಗೆ ಕಳುಹಿಸಿದರು ಜಕೋಸ್ಲಾವೂಕಿಯಾ ಮುಂತಾದ ದೇಶಗಳು ಯಂತ್ರಗಳನ್ನು ಕೊಟ್ಟರು. ನಮ್ಮದೇಶದಲ್ಲಿ ವಿದ್ಯುತ್ ಉಕ್ಕು ತಯಾರಿಸಲು ನಮ್ಮದೇಶದ ಬಂಡವಾಳಗಾರರು ತಯಾರಿರಲಿಲ್ಲ ಎಂಬುದನ್ನು ಅರಿತಿದ್ದ ನೆಹರುರವರು ಹಣಕಾಸಿನ ಅಗತ್ಯವನ್ನು ಕಂಡುಕೊಂಡು ಸಾರ್ವಜನಿಕ ಉದ್ದಿಮೆಗಳನ್ನು ಪ್ರಾರಂಭಿಸಿದರು, ಅವುಗಳನ್ನು ರಾಷ್ಟ್ರೀಕರಣಗೊಳಿಸಿದರು. ಮೊರಾರ್ಜಿ ದೇಸಾಯಿ ಯವರು ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸಿದರು, ಇಂದಿರಾಗಾಂಧಿಯವರು ಬ್ಯಾಂಕ್‌ಗಳನ್ನು ರಾಷ್ಟ್ರೀಕರಿಸಿದರು. ಕೈಗಾರಿಕಾ ತರಬೇತಿಳನ್ನು ಆರಂಭಿಸಿದರು ಸಮಾಜವಾದಿ ರಾಷ್ಟ್ರಗಳ ಸಹಕಾರ ಪಡೆದರು. ದೇಶದಲ್ಲಿ ಅಭಿವೃದ್ಧಿಯನ್ನು ಬಯಸಿದ್ದರು. ಆದರೆ ಇಂದು ಅದೇ ಕಾಂಗ್ರೆಸ್ ಬಿಜೆಪಿಯವರು ಈ ಎಲ್ಲವನ್ನು ಖಾಸಗೀಕರಿಸಿ ಸಾಮ್ರಾಜ್ಯ ಶಾಹಿಗೆ ಒತ್ತೆಯಿಡುತ್ತಿವೆ ಎಂದರು.

ಅಂದಿನ ಕಾಂಗ್ರೇಸ್ ರಾಷ್ಟ್ರೀಕರಣಕ್ಕೆ ಹೊರಟವರು ಇಂದು ಬಿಜೆಪಿ ಜೊತೆ ಖಾಸಗೀಕರಣ ಮಾಡಲು ಹೊರಟಿದ್ದಾರೆ ದಾವೊದ್‌ನಲ್ಲಿ ಜಸ್ವಂತ್‌ಸಿಂಗ್ ಹೇಳುತ್ತಿದ್ದಾರೆ ನಮ್ಮದೇಶದ ಬಾಗಿಲುಗಳನ್ನು ವಿದೇಶಿಯರಿಗೆ ತೆರೆದಿದ್ದೇವೆ ಬನ್ನಿ ಎಂದು ಹೇಳುತ್ತಿದ್ದಾರೆ.

ಕ್ಲಿಂಟನ್ ಗೋ ಬ್ಯಾಕ್

ದೇಶದ ಕಾರ್ಮಿಕವರ್ಗ ಕ್ಲಿಂಟನ್ ಭಾರತಕ್ಕೆ ಬರುವುದು ಬೇಡ ಎಂದು ಸಾರಬೇಕು, ಕಾಶ್ಮೀರ, ಕೋಸಾವೊ, ಇರಾಕ್‌ಗಳನ್ನು ನಾಶಮಾಡಲು ಕ್ಲಿಂಟನ್ ಬರಬೇಕೇ? ಎಂದು ಪ್ರಶ್ನಿಸಿದರು.

ನಮ್ಮ ಇಂದಿನ ಪೀಳಿಗೆಗೆ ಸ್ವಾತಂತ್ರ ಹೋರಾಟದ ಅನುಭವವಿಲ್ಲ ಉದ್ಯೋಗವಿಲ್ಲ ಕೈಗಾರಿಕೆಗಳು ಮುಚ್ಚುತ್ತಿವೆ. ನಮ್ಮ ರಾಜ್ಯದ ಮುಖ್ಯಮಂತ್ರಿ ಕೃಷ್ಣರವರು ಬೆಂಗಳೂರನ್ನು ಸಿಂಗಪುರ ಮಾಡುತ್ತಿದ್ದಾರಂತೆ, 500 ಕೋಟಿ ರೂಗಳ ಬಂಡವಾಳ ಹರಿದು ಬರುತ್ತದೆಂದು ಬೊಬ್ಬೆಹೊಡೆಯುತ್ತಿದ್ದಾರೆ.

ಒಂದು ಕೋಟಿ ಉದ್ಯೋಗ ನೀಡುತ್ತೇವೆಂದು ಹೇಳಿದ ವಾಜಪೇಯಿಗೆ ಕೇರ್ ಇಲ್ಲ. ಕಡಿಮೆ ಬೆಲೆಗೆ ಷೇರುಗಳನ್ನು ಮಾರುತ್ತಿದ್ದಾರೆ ಸಾರ್ವಜನಿಕ ಉದ್ಯಮದ ನೌಕರರಿಗೆ ವೇತನ ಪರಿಷ್ಕರಣವಿಲ್ಲ.

ಮಹಿಳೆಯರ ಮೇಲೆ ದಲಿತರ ಮೇಲೆ ದಬ್ಬಾಳಿಕೆಗಳು ಹೆಚ್ಚಾಗುತ್ತಿವೆ ಇಂದಿಗೂ ದಲಿತರನ್ನು ಮನೆಗಳಿಗೆ ಸೇರಿಸುವುದಿಲ್ಲ ಇದೇ ಸಂಸ್ಕೃತಿಯಲ್ಲಿ ಗಂಡಸತ್ತ ಮಹಿಳೆಯರಿಗೆ ತಲೆಬೋಳಿಸುತ್ತಾರೆ 'ವಾಟರ್' ಚಿತ್ರ ಹುಸೇನರ ಚಿತ್ರಗಳ ಮೇಲೆ ಹಲ್ಲೆ ಮಾಡುವುದು ಅವರ ಸಂಸ್ಕ-ತಿಯಾಗಿದೆ. ಇಂತಹ ಜನವಿರೋಧಿ ನೀತಿಯನ್ನು ವಿರೋಧಿಸಲು ಎಲ್ಲರೂ ಒಗ್ಗೂಡಿ ಹೋರಾಟ ನಡೆಸ ಬೇಕೆಂದು ಸೂರಿ ಕರೆ ನೀಡಿದರು.

ಈ ಸಮಾವೇಶವನ್ನು ಯಶಸ್ವಿಗೊಳಿಸಲು ರಚಿಸಲಾಗಿದ್ದ ಅಧ್ಯಕ್ಷ ಮಂಡಳಿಯಲ್ಲಿ ಸಿಐಟಿಯು ನಿಂದ ಸೂರಿ, ಎ.ಐ.ಟಿ.ಸಿ.ಯು. ಇಂದ ಎಂ.ಸಿ. ನರಸಿಂಹನ್, ಎಐಡಿವೈಓ ಶ್ರೀರಾಂ, ವಿಮಾ ಕ್ಷೇತ್ರದ ಗೀತಾ, ಬ್ಯಾಂಕ್ ಕ್ಷೇತ್ರದ ರೈ ಇದ್ದರು. ಸ್ವಾಗತವನ್ನು ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಮಹಂತೇಶ್, ವಂದನಾರ್ಪಣೆಯನ್ನು AISFನ ಜನಾರ್ದನ್ ಮಾಡಿದರು. ಸಮಾವೇಶದಲ್ಲಿ ಎಐಟಿಯುಸಿ ಮುಖಂಡರಾದ ಅನಂತಸುಬ್ಬರಾವ್, ಕೃಷಿಕೂಲಿಕಾರರ ಸಂಘದ ಮುಖಂಡರಾದ ಜಿ.ಎನ್. ನಾಗರಾಜ್, ಯು.ಟಿ.ಯು.ಸಿಯ ಸಿಂಹಾದ್ರಿ, ಮಹಿಳಾ ಸಂಘಟನೆಯಿಂದ ಪ್ರಭಾ ಮುಂತಾದವರು ಒಳಗೊಂಡು 18 ಸಂಘಟನೆಗಳು ಪ್ರತಿನಿಧಿಗಳು ಘೋಷಣೆ ಬೆಂಬಲಿಸಿ ಮಾತನಾಡಿದ್ದು ದೆಹಲಿ ಚಲೋ-ಯಶಸ್ವಿಗೊಳಿಸಲು ಸಮಾವೇಶ ತೀರ್ಮಾನಿಸಿತು.

ವರದಿ: ಗೋಪಾಲಕೃಷ್ಣ ಅರಳಹಳ್ಳಿ

ಸಾಮಾಜಿಕ ಕ್ರಾಂತಿಗೆ ಪ್ರೇರಕವಾಗುವ ಸ್ತ್ರೀಪರ ಸಾಹಿತ್ಯ ರಚನೆಗೆ ಸಲಹೆ

ಸ್ತ್ರೀ ಅಬಲೆಯಲ್ಲ, ಸಬಲೆ. ಎಲ್ಲ ಕ್ಷೇತ್ರಗಳಲ್ಲಿ ಪುರುಷರಿಗೆ ಸಮಾನವಾಗಿ, ಸರಿಸಾಟಿಯಾಗಿ ಮಹಿಳೆ ನಿಂತಿದ್ದಾಳೆ. ಆದರೂ ಮಹಿಳೆಯರ ವಿರುದ್ಧದ ದೌರ್ಜನ್ಯಗಳು ಸಮಾಜದಲ್ಲಿ ಎಂದಿನಂತೆ ಮುಂದುವರಿದಿವೆ. ಇದರ ವಿರುದ್ಧ ಜಾಗೃತಿಗೆ ಸಾಹಿತ್ಯ ರೂಪುಗೊಳ್ಳಬೇಕು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮುಖ್ಯ ಕಾರ್ಯದರ್ಶಿ ಅ.ರಾ. ಚಂದ್ರಹಾಸ ಗುಪ್ತಾ ಅಭಿಪ್ರಾಯ ಪಟ್ಟಿದ್ದಾರೆ.

'ಕೊಂಕಣಿ ಸಾಹಿತ್ಯದಲ್ಲಿ ಸ್ತ್ರೀಪರ ಧ್ವನಿ' ಎಂಬ ಅಪರೂಪದ ವಿಚಾರ ಸಂಕಿರಣವೊಂದರಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಅನೇಕ ಸ್ತ್ರೀವಿರೋಧಿ ಸಾಮಾಜಿಕ [illegible] ಎಂದು ಗುಪ್ತ ಆತಂಕ ವ್ಯಕ್ತಪಡಿಸಿದರು ಸ್ತ್ರೀವಿರೋಧಿ ಪಾಳೇಗಾರಿ ನಿಲುವುಗಳು, ಸತಿ-ದೇವದಾಸಿ ಪದ್ಧತಿ ಇನ್ನೂ ಉಳಿದಿದೆ. ಹೆಣ್ಣು ಶಿಶು ಹತ್ಯೆ ನಡೆಯುತ್ತಿದೆ. ವರದಕ್ಷಿಣೆ ಸಾವುಗಳು ಹೆಚ್ಚುತ್ತಿವೆ ಎಂದು ಚಂದ್ರಹಾಸ, ಗುಪ್ತ ಹೇಳಿದರು.

ಮಹಿಳಾ ವಿರೋಧಿ ನಿಲುವುಗಳ ವಿರುದ್ಧ ಸಾಹಿತ್ಯ ರೂಪುಗೊಳ್ಳಬೇಕು, ಬೀದಿ ನಾಟಕ ರಂಗನಾಟಕಗಳ ಮೂಲಕ ಜಾಗೃತಿ ಬೆಳೆಸಬೇಕು; ಜನಾಭಿಪ್ರಾಯ ರೂಪಿಸಬೇಕು, ಸಾಮಾಜಿಕ ಕ್ರಾಂತಿಗೆ ಪ್ರೇರಣೆಯಾಗಬೇಕು ಎಂದು ಅವರು ಸಲಹೆ ಮಾಡಿದರು. ತಾನು ಪರವಶ, ಪರಾಧೀನ ಎಂಬ ಕೀಳರಿಮೆಯನ್ನು ಸ್ತ್ರೀ ತೊಡೆದು ಹಾಕಬೇಕು ಎಂದು ಕರೆಕೊಟ್ಟರು.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮತ್ತು ಮಿಥಿಕ್ ಸೊಸೈಟಿ ಸಂಯುಕ್ತವಾಗಿ [illegible] ಗೋಷ್ಠಿಯನ್ನು ವ್ಯವಸ್ಥೆಗೊಳಿಸಿದ್ದವು.

ಸಾಹಿತ್ಯದ ಮೂಲಕ ಸಾಂಸ್ಕೃತಿಕ ಸ್ಪಂದನ ಸಾಧ್ಯ ಎಂದವರು ಪ್ರಾಸ್ತಾವಿಕ ಭಾಷಣ ಮಾಡಿದ ಇತಿಹಾಸ ತಜ್ಞ ಡಾ. ಸೂರ್ಯನಾಥ ಕಾಮತ್.

ಖ್ಯಾತ ನೃತ್ಯಪಟು ಮಾಯಾರಾವ್ ಗೋಷ್ಠಿಯನ್ನು ಉದ್ಘಾಟಿಸಿದರು.

ಕವಿತೆಗಳಲ್ಲಿ ಕತೆ ಕಾದಂಬರಿಗಳಲ್ಲಿ ಜಾನಪದದಲ್ಲಿ ಕೇರಳ- ಕರ್ನಾಟಕ ಸಾಹಿತ್ಯದಲ್ಲಿ ದಕ್ಷಿಣ ಕನ್ನಡದ ಕ್ರೈಸ್ತ ಸಾಹಿತ್ಯದಲ್ಲಿ ಇತ್ಯಾದಿಯಾಗಿ ಕೊಂಕಣಿ ಸಾಹಿತ್ಯದ ನಾನಾ ವಿಭಾಗಗಳಲ್ಲಿ ಸ್ತ್ರೀಪರವಾದ ಧ್ವನಿ ಏನಿದೆ ಹೇಗಿದೆ ಎಂಬುದನ್ನು ವಿಷಯ ತಜ್ಞರಾದ ಡಾ. ಕಿರಣ್ ಬುಡ್ಕಾಳೆ, ಮಾಧವಿ ಸರದೇಸಾಯಿ ಉಷಾರಾಣಿ, ಕ್ಯಾಥರಿನ್ ರಾಡ್ರಿಗಸ್ ಮತ್ತು ಡಾ। ಜ್ಯೋತ್ಸ್ನಾ ಕಾಮತ್ ವಿವರಿಸಿದರು.

ಜಾಗತೀಕರಣದ ಭರಾಟೆಯ ಈ ಕಾಲದಲ್ಲಿ ಕೊಂಕಣಿ ಭಾಷೆಯನ್ನು ಉಳಿಸಿಕೊಳ್ಳುವುದು ಹೇಗೆ ಎಂದು ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಡಾ. ಜ್ಯೋತ್ಸ್ನಾ ಕಾಮತ್ ಪ್ರಶ್ನಿಸಿ ಅದಕ್ಕೆ ಅವರೇ ಉತ್ತರವನ್ನು ಕೊಟ್ಟರು. ಕೊಂಕಣಿ ಭಾಷಿಕರು ಮನೆಯಲ್ಲಿ ಕೊಂಕಣಿ ಭಾಷೆಯನ್ನೇ ಮಾತನಾಡೋಣ ಎಂದವರು ಹೇಳಿದರು.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರನ್ನು ಗುಲಾಮರನ್ನಾಗಿ ಪರಿಗಣಿಸುವ ಪ್ರವೃತ್ತಿ ಭಾರತ ಮಾತ್ರವಲ್ಲ ಜಗತ್ತಿನ ಎಲ್ಲ ದೇಶಗಳಲ್ಲಿ ಇದೆ. ಭಾರತದಲ್ಲಿ ರಾಜಾರಾಮ ಮೋಹನ್ ರಾಯ್ ಮೊದಲಾದವರಿಂದ ಇದರ ವಿರುದ್ಧ ಜಾಗೃತಿ ಬೆಳೆಯಿತು. ಇದನ್ನು ಗಟ್ಟಿಪಡಿಸಿ ಮುಂದುವರಿಸಿಕೊಂಡು ಹೋಗಬೇಕು ಎಂದು ಕೊಂಕಣಿ ಅಕಾಡೆಮಿ ಅಧ್ಯಕ್ಷ ಬಸ್ತಿ ವಾಮನ ಶೆಣೈ ಹೇಳಿದರು

ವರದಿ: ವಿಶ್ವ ಕುಂದಾಪುರ

ಪುರುಲಿಯಾ ಶಸ್ತ್ರಾಸ್ತ್ರ ಕೇಸ್ ತೀರ್ಪು

ಆನಂದ ಮಾರ್ಗದ ಪಿತೂರಿ ಬಗ್ಗೆ ತನಿಖೆಯಲ್ಲಿ ವಿಫಲವಾದ ಸಿಬಿಐ



ನಾಲ್ಕು ವರ್ಷದ ಹಿಂದೆ ನಡೆದ ಕುಖ್ಯಾತ ಪುರುಲಿಯಾ ಶಸ್ತ್ರಾಸ್ತ್ರ ಕೇಸ್‌ನಲ್ಲಿ ಎರಡು ವರ್ಷಗಳ ವಿಚಾರಣೆ ನಂತರ ತೀರ್ಪು ಬಂದಿದ್ದು ಆರು ಅಪಾದಿತರಿಗೆ ಜೀವಾವಧಿ ಶಿಕ್ಷೆಆಗಿದೆ. ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವನ್ನು ಸಶಸ್ತ್ರ ದಂಗೆ ಮೂಲಕ ಬೀಳಿಸಬೇಕೆಂಬ ಅಂತರಾಷ್ಟ್ರೀಯ ಪಿತೂರಿ ಇದ್ದಿದ್ದು, ಮತ್ತು ಆನಂದ ಮಾರ್ಗದ ಸದಸ್ಯರು ಈ ಪಿತೂರಿಯಲ್ಲಿ ಭಾಗವಹಿಸಿದ್ದರೂ ಎಂಬುದಕ್ಕೆ ಬೇಕಾದಷ್ಟು ಸಾಂದರ್ಭಿಕ ಪುರಾವೆ ಇದ್ದರೂ, ಆನಂದ ಮಾರ್ಗ ಸಂಘಟನಾತ್ಮಕವಾಗಿ ಈ ಪಿತೂರಿ ನಡೆಸಿತು ಎಂದು ಸಾಕಷ್ಟು ಪುರಾವೆ ಮೂಲಕ ಸಿದ್ಧ ಪಡಿಸುವಲ್ಲಿ ಸಿಬಿಐ ಸೋತಿದೆ ಎಂದಿದೆ ತೀರ್ಪು. ಇದು ಸಿಬಿಐಯ ಅದಕ್ಷತೆಯೇ? ನಿರ್ಲಕ್ಷ್ಯವೇ? ಹವಾಲಾ ಕೇಸ್‌ನಲ್ಲಿ ಎಲ್ಲಾ ಅಪಾದಿತರು ಬಿಡುಗಡೆ ಹೊಂದುವುದರೊಂದಿಗೆ ಅದಕ್ಷತೆ, ನಿರ್ಲಕ್ಷ್ಯದ ಜತೆ ರಾಜಕೀಯ ನಿಯಂತ್ರಣ ಈ ರೀತಿ ಠುಸ್ ಕೇಸ್‌ಗಳಿಗೆ ಕಾರಣವೇ? ಎಂದು ಎಲ್ಲರೂ ಕೇಳುವಂತಾಗಿದೆ.

ಡಿಸೆಂಬರ್ 17, 1995 ಪಶ್ಚಿಮ ಬಂಗಾಳದ ಪುರುಲಿಯಾ ಜಿಲ್ಲೆಯಲ್ಲಿ ಇಡೀ ದೇಶವನ್ನೇ ಬೆಚ್ಚಿ ಬೀಳಿಸುವ ಘಟನೆಯೊಂದು ನಡೆದಿತ್ತು. ವಿದೇಶಿ ವಿಮಾನವೊಂದು ಪುರುಲಿಯಾ ಜಿಲ್ಲೆಯ ಆರು ಗ್ರಾಮಗಳಲ್ಲಿ ಭಾರಿ ಶಸ್ತ್ರಾಸ್ತ್ರವನ್ನು ಬೀಳಿಸಿ ಹೋಯಿತು. 241 ಎಕೆ 47-56 ರೈಫಲ್‌ಗಳು, 79 ಟ್ಯಾಂಕ್-ಭೇಧಿ ಗ್ರೇನೇಡ್‌ಗಳು, 62 ಕೈ ಗ್ರೆನೇಡ್ ಗಳು, 10 ರಾಕೆಟ್ ಹಾರಿಸುವ ಉಪಕರಣ, ಒಂಬತ್ತು ಮಿನಿ ಪಿಸ್ತೂಲುಗಳು, 3853 ಸುತ್ತಿನ ಮದ್ದುಗುಂಡು ಗಳನ್ನು ಬೀಳಿಸಲಾಗಿತ್ತು. ಶಸ್ತ್ರಾಸ್ತ್ರಗಳನ್ನು ಬೀಳಿಸಲಾಗಿದ್ದ ಆರು ಹಳ್ಳಿಗಳಿಗೆ ಆನಂದಮಾರ್ಗದ ಸಂಘಟನಾ ಮುಖ್ಯ ಕಚೇರಿ ತೀರಾ ಹತ್ತಿರ ವಾಗಿದ್ದವು ವಿದೇಶಿ ವಿಮಾನವೊಂದು ಹೀಗೆ ರಾಜರೋಷವಾಗಿ ಶಸ್ತ್ರಾಸ್ತ್ರಗಳನ್ನು ಬೀಳಿಸಿದ್ದು, ಮತ್ತು ಈ ಪಿತೂರಿಯ ಗ್ಯಾಂಗ್ ಲೀಡರ್ ರೆಟ್ ಡೇವಿ ಮತ್ತು ಸತ್ಯೇಂದ್ರ ಸಿಂಗ್ ನಿಗೂಢವಾಗಿ ಮುಂಬಯಿ ವಿಮಾನ ನಿಲ್ದಾಣದ ಮೂಲಕ ದೇಶ ಬಿಟ್ಟು ಪರಾರಿಯಾಗಿದ್ದು ಎಲ್ಲರಿಗೂ ಅಚ್ಚರಿ ತಂದಿತ್ತು. ವಿಮಾನದ ಆರು ಜನರನ್ನು ಬಂಧಿಸಲಾಗಿತ್ತು. ಇಂತಹ ಘಟನೆಯೊಂದು ಸ್ವತಂತ್ರ ಭಾರತದಲ್ಲಿ ನಡೆದದ್ದು ಇದೇ ಮೊದಲು. ಆದ್ದರಿಂದ ಈ ಕೇಸ್‌ನ್ನು ಸಿಬಿಐಗೆ ಒಪ್ಪಿಸಲಾಗಿತ್ತು. ಬಂಧಿತರಾದ ಆರು ಜನ ಆಪಾದಿತರು ವಿದೇಶಿಯರಾಗಿದ್ದರು ಒಬ್ಬ ಪೀಟರ್ ಬ್ಲೀಚ್ ಬ್ರಿಟೀಷ್ ನಾಗರಿಕ ಉಳಿದ ಎಂಟುಜನ ಮಾಜಿ ಸೋವಿಯೆಟ್ ಒಕ್ಕೂಟದ ಲ್ಯಾಟಿ ವಿಯಾ ಗಣರಾಜ್ಯದ ಪ್ರಜೆಗಳು ಇನ್ನೊಬ್ಬ ಅಪಾದಿತ ವಿನಯ ಸಿಂಗ್ ಆನಂದ ಮೂರ್ತಿಯಾಗಿದ್ದವನು.

ಅಂತರ್ರಾಷ್ಟ್ರೀಯ ಪಿತೂರಿ:

ಕಳೆದ ಎರಡು ವರ್ಷಗಳಿಂದ ಮೊಕದ್ದಮೆ ಕಲ್ಕತ್ತಾದ ನಗರ ಕೋರ್ಟಿನಲ್ಲಿ ನಡೆಯುತ್ತಿತ್ತು. ಸಿಬಿಐ, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವನ್ನು ಸಶಸ್ತ್ರ ದಂಗೆಯಿಂದ ಉರುಳಿಸಲು ಅಂತರಾಷ್ಟ್ರೀಯ ಪಿತೂರಿ ನಡೆದಿತ್ತು. ಈ ಪಿತೂರಿಯ ಪ್ರಕಾರ ಆನಂದ ಮಾರ್ಗಕ್ಕೆ ಈ ಕೆಲಸ ಮಾಡಲು ಈ ಶಸ್ತ್ರಾಸ್ತ್ರಗಳನ್ನು ಕಳಿಸಲಾಗಿತ್ತು. ಆನಂದಮಾರ್ಗದ ವಿನಯ ಸಿಂಗ್ ಸೇರಿದಂತೆ ಹಲವು ಸದಸ್ಯರು ಈ ಪಿತೂರಿಯಲ್ಲಿ ಭಾಗಿಯಾಗಿದ್ದರು. ನಿಜ ವಾಗಿಯೂ ಪಿತೂರಿಗಾರರ ಉದ್ದೇಶ ಆನಂದಮಾರ್ಗದ ಧಾರ್ಮಿಕ ಮುಖ್ಯ ಕಚೇರಿ ಬಳಿ ಶಸ್ತ್ರಾಸ್ತ್ರ ಬೀಳಿಸುವ ಉದ್ದೇಶ ವಿತ್ತು. ಈ ಶಸ್ತ್ರಾಸ್ತ್ರಗಳನ್ನು ಶೇಖರಿಸಿಡಲು ಮೂರು ಮಾಳಿಗೆಯ ಕಟ್ಟಡವೊಂದನ್ನು ಸಿದ್ಧಪಡಿಸಲಾಗಿತ್ತು ಎಂದು ಆಧಾರ ಸಹಿತ ಸಿಬಿಐ ವಾದಿಸಿತ್ತು. ಆದರೆ ಆನಂದಮಾರ್ಗ ಸಂಘಟನಾತ್ಮಕವಾಗಿ ನೇರವಾಗಿ ಈ ಪಿತೂರಿ ಯಲ್ಲಿ ಭಾಗಿಯಾಗಿತ್ತು ಎಂದು ವಾದಿಸುವಲ್ಲಿ ಸಿಬಿಐನ ಪುರಾವೆಗಳು ಸಾಕಾಗಲಿಲ್ಲ ಆದ್ದರಿಂದ ಏಳನೇ ಅಪಾದಿತ ವಿನಯಸಿಂಗ್‌ವನ್ನು ಕೋರ್ಟು ಖುಲಾಸೆ ಮಾಡಿದೆ.

ಆದರೆ ಆರು ಆಪಾದಿತರು ಅಂತರಾಷ್ಟ್ರೀಯ ಪಿತೂರಿಯ ಭಾಗಿಯಾಗಿದ್ದರು ಮತ್ತು ಅವರು ದೊರದಲ್ಲಿರುವ ಭಯೋತ್ಪಾದಕ ಸಂಘಟನೆಗಳಿಗೆ ಈ ಶಸ್ತ್ರಾಸ್ತ್ರಗಳನ್ನು ಕೊಡಲು ಪ್ರಯತ್ನಿಸುತ್ತಿದ್ದರು. ಆದ್ದರಿಂದ ಇವರು ರಾಷ್ಟ್ರೀಯ ಭದ್ರತೆಗೆ ಅಪಾಯ ಒಡ್ಡುವ ವ್ಯಕ್ತಿಗಳು ಎಂದು ತೀರ್ಪು ಬಣ್ಣಿಸಿ ಜೀವಾ ವಧಿ ಶಿಕ್ಷೆ ವಿಧಿಸಿದೆ.

ಉತ್ತರ ಕಾಣದ ಪ್ರಶ್ನೆಗಳು:

ತೀರ್ಪು ಬಂದ ನಂತರ ಹಲವು ಪ್ರತಿಕ್ರಿಯೆಗಳು ಈ ಕೇಸಿನ ತೀರ್ಪು ಸಿಬಿಐ ಉತ್ತರಿಸದ ಹಲವು ಪ್ರಶ್ನೆಗಳಿಗೆ ಇನ್ನಷ್ಟು ಪ್ರಶ್ನೆಗಳನ್ನು ಸೇರಿಸಿವೆ. ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಈ ಪ್ರಶ್ನೆಗಳಿಗೆ ಉತ್ತರವನ್ನು ಸಿಬಿಐ ಮತ್ತು ಸರ್ಕಾರ ಒದಗಿಸುವುದೇ? ಈ ನಡುವೆ ಆರೋಪಿಗಳು ಹೈಕೋರ್ಟಿಗೆ ಹೋಗಿದ್ದಾರೆ. ಕೇಸು ಮುಂದುವರೆದರೆ ಸಿಬಿಐ ಇದೇ ರೀತಿ ಅದಕ್ಷತೆ ನಿರ್ಲತೆ ತೋರುತ್ತಾ ಹೋದರೆ ಏನಾದೀತು ಎಂದು ಊಹಿಸಬಹುದು

ಲಂಡನ್ನಿನ ಟೈಮ್ಸ್‌ನಲ್ಲಿ ಬಂದ ವರದಿಯೊಂದು ಈ ಕೇಸು ಉತ್ತರಿಸದ ಪ್ರಶ್ನೆಗಳ ಮೇಲೆ ಬೆಳಕು ಚೆಲ್ಲಿದೆ. ಟೈಮ್ಸ್ ತನ್ನದೇ ತನಿಖೆ ನಡೆಸಿ ಈ ಪಿತೂರಿ ಬಗ್ಗೆ ವರದಿ ಪ್ರಕಟಿಸಿದೆ. ಏರೋಸರ್ನ್ ಎಂಬ ವಿಮಾನಯಾನ ಕಂಪನಿಯ ಮಾಲಕನಾದ ಪೀಟರ್ ಬ್ಲೀಚ್ ಬ್ರಿಟಿಷ್ ಬೇಹುಗಾರಿಕೆ ಸಂಸ್ಥೆ ಪರವಾಗಿ ಕೆಮಡೀವಿಸ್ ಎಂಬಾತ ತನಗೆ ನಾಲ್ಕುವರೆ ಟನ್ ಶಸ್ತ್ರಾಸ್ತ್ರಗಳನ್ನು ದಕ್ಷಿಣ ಏಷ್ಯಾದಲ್ಲಿ ನಿಗದಿತ ಸ್ಥಾನಕ್ಕೆ ತಲುಪಿಸಲು ಎಷ್ಟು ಖರ್ಚಾದೀತು ಎಂದು ಕೇಳಿದ್ದಾನೆ ಎಂದು ಬ್ರಿಟಿಷ್ ರಕ್ಷಣಾ ಖಾತೆಗೆ ತಿಳಿಸಿದ್ದ ರಕ್ಷಣಾ ಉತ್ತರ ಯಾರ್ಕ್ ಪೊಲೀಸ್ ಇದರಲ್ಲಿ ಒಳಗಾಗದಂತೆ ಪೀಟರ್ ಬ್ಲೀಚ್‌ಗೆ ಹೇಳಿತ್ತಂತೆ ಈ ಕೆಲಸಕ್ಕೆ ಬೇಕೆಂತಲೆ ರಷ್ಯನ್ ವಿಮಾನ ಬಳಸಿ ಲ್ಯಾಟಿನಿಯನ್ ವಿಮಾನ ಸಿಬ್ಬಂದಿ ಬಳಸಲಾಗಿತ್ತು ಎಂದಿದೆ. ಟೈಮ್ಸ್ ವರದಿ.

ಈ ತೀರ್ಪು ಬಂದ ಮೇಲೆ ಮಾಸ್ಕೋದಿಂದ ಬಂದ ವರದಿಯೊಂದು ಅಲ್ಲಿ ಪ್ರತಿಭಟನೆಯ ಸುದ್ದಿ ತಂದಿದೆ ನಿಜವಾಗಿ ಅಂತರಾಷ್ಟ್ರೀಯ ಪಿತೂರಿ ನಡೆಸಿದ ಸೂತ್ರಧಾರ ರನ್ನು ಹಿಡಿಯದೆ, ಅದನ್ನು ಜಾರಿಮಾಡಿದ ಖಾಸಗಿ ವಿಮಾನಯಾನ ಸಂಸ್ಥೆಯ ಉದ್ಯೋಗಿಗಳನ್ನು ಶಿಕ್ಷಿಸಿದ್ದನ್ನು ಖಂಡಿಸಿದೆ.

ಇದಲ್ಲದೆ ಅದೇ ರಾತ್ರಿ ತಪ್ಪಿಕೊಂಡ ಡೇವಿ ಮತ್ತು ಸತ್ಯೇಂದ್ರ ಸಿಂಗ್‌ರನ್ನು ಹುಡುಕಿ ಹಿಡಿಯಲು ಸಿಬಿಐ ಪ್ರಯತ್ನಿಸಿಲ್ಲ ಎಂಬುದನ್ನು ಬಹಳ ಟೀಕಾಕಾರರು ಗಮನಿಸಿ ದ್ದಾರೆ. ರಾಷ್ಟ್ರೀಯ ಭದ್ರತೆಗೆ ಸಾಮ್ರಾಜ್ಯಶಾಹಿ ಪಿತೂರಿ, ಭಯೋತ್ಪಾದಕ ಶಕ್ತಿಗಳಿಂದ ಅಪಾಯ ಹೆಚ್ಚಿರುವ ಹಿನ್ನೆಲೆಯಲ್ಲಿ ಪುರುಲಿಯಾ ಶಸ್ತ್ರ ಕೇಸನ್ನು ಸಿಬಿಐ ತನಿಖೆ ಉತ್ತರಿಸದ ಪ್ರಶ್ನೆಗಳಿಗೆ ಉತ್ತರ ಸಿಕ್ಕೀತೆ? ಎಂದು ಕಾದು ನೋಡಬೇಕು.

○

ದಾಮೋದರ್ ನದಿಯ ಆಣೆಕಟ್ಟು ರಿಪೇರಿ

ಉಕ್ಕೇರಿದ ಜನರ ಉತ್ಸಾಹ

ಪಶ್ಚಿಮ ಬಂಗಾಳ ರಾಜ್ಯದ ಜಿಲ್ಲೆಯೊಂದರಲ್ಲಿ ದಾಮೋದರ್ ನದಿಯು ಅತಿಪ್ರವಾಹದಿಂದ ಉಕ್ಕಿ ಹರಿದ ಪರಿಣಾಮವಾಗಿ ಅದಕ್ಕೆ ಕಟ್ಟಲಾಗಿದ್ದ ಬ್ಯಾರೇಜೊಂದು ಬಿರುಕುಬಿಟ್ಟು ನೀರು ನುಗ್ಗಿ ಅಪಾರ ಪ್ರಮಾಣದ ಕೃಷಿ ಭೂಮಿ ನಾಶವಾಗಿದೆ. ಬೆಳೆಗಳು ಹಾಳಾಗಿವೆ. ಅಕ್ಕ ಪಕ್ಕ ವಾಸಿಸುತ್ತಿದ್ದ ಮನೆಗಳಿಗೆ ಗುಡಿಸಲುಗಳಿಗೆ ಧಕ್ಕೆಯಾಗಿದೆ. ಬದುಕಲು ಅಡ್ಡಿಯಾಗಿದೆ. ತಕ್ಷಣಾ ಏನು ಮಾಡಬೇಕು? ಜನರ ಪ್ರಶ್ನೆ ದಾಮೋದರ ಕಣಿವೆ ನಿಗಮವಾಗಲೀ, ಕೇಂದ್ರ ಸರ್ಕಾರವಾಗಲೀ ಅಗತ್ಯ ಕ್ರಮ ಕೈಗೊಳ್ಳಲಿಲ್ಲ. ಮೀನ- ಮೇಷ ಎಣಿಸುತ್ತಿವೆ. ಆದರೆ ಕಿಸಾನ್ ಸಭಾ ಕಾಯಲಿಲ್ಲ. ತಕ್ಷಣ ಯೋಜನೆ ರೂಪಿಸಿತು. ಬ್ಯಾರೇಜನ್ನು ಸರಿಪಡಿಸಲು ಜನರ ಕಾರ್ಯಚರಣೆಯನ್ನು ಹರಿಬಿಟ್ಟಿತು. 20 ಸಾವಿರ ಜನರ ಕಾರ್ಯಚರಣೆ ನಂಬಲಸಾಧ್ಯವಾದ ಸಂಖ್ಯೆ. ಹೌದು ಪಶ್ಚಿಮ ಬಂಗಾಳದಲ್ಲಿ ಪ್ರಜಾಪ್ರಭುತ್ವವೆಂದರೆ, ಜನತೆಯ ಭಾಗವಹಿಸುವಿಕೆ ಎಂದರೆ ಹೀಗೆ! 23 ವರ್ಷಗಳ ಎಡರಂಗ ಸರ್ಕಾರದ ಹಿಂದೆ ಆದರ ಸಾಧನೆಗಳ ಹಿಂದೆ ಇರುವವರು ಇದೇ ಜನ. ಈ ದುಡಿಯುವ ಜನತೆಯ ಯಶೋಗಾಥೆಯ ಸರಪಳಿಗೊಂದು ಕೊಂಡಿ, ದಾಮೋದರ ನದಿಯ ಬ್ಯಾರೇಜನ್ನು ಸರಿಪಡಿಸಿ ಕಟ್ಟಿದ್ದು. ಆ ಘಟನೆಯನ್ನು ಓದಿ

ಹೃದಯವನ್ನು ಕ್ರಿಯಾಶೀಲವಾಗಿಡಲು ಪೇಸ್‌ಮೇಕರ್ ಅಳವಡಿಸಲಾಗಿದೆ ಇದು ಅವರ ಮಾನಸಿಕ ಸಾಮರ್ಥ್ಯವನ್ನು ಕುಗ್ಗಿಸಿಲ್ಲ. ದಾಮೋದರ್ ನದಿಯ ಬಿರುಕಾದ ಬ್ಯಾರೇಜನ್ನ ಸರಿಪಡಿಸಲು ಚೀಲವನ್ನು ಹಿಡಿದು ಬಂದರು ಇವರ ದೈಹಿಕ ಸ್ಥಿತಿ ಈ ಕೆಲಸಕ್ಕೆ ಅವಕಾಶ ಕೊಡದಿದ್ದರೂ ಇಂತಹ ಕೆಲಸಕ್ಕೆ ಮಾನಸಿಕವಾಗಿ ಉತ್ಸಾಹದಿಂದಿದ್ದರು. 66 ವರ್ಷ ವಯಸ್ಸಿನ ಪಹ್ಲಾನ್ ಪುರದ ಪ್ರೌಢಶಾಲಾ ನಿವೃತ್ತಿ ಶಿಕ್ಷಕ ಮತ್ತು ಅನಾರೋಗ್ಯ ಪೀಡಿತ ವಿಶ್ವನಾಥ್ ನಾಯಕ್ ಈ ಶ್ರೇಷ್ಠ ಕೆಲಸದಲ್ಲಿ ತೊಡಗಿದ್ದಕ್ಕೆ ಅತ್ಯಂತ ಹೆಮ್ಮೆ ಪಡುತ್ತಾರೆ.

ಪ್ರಾಂತೀಯ ಮತ್ತು ಜಿಲ್ಲಾ ಕಿಸಾನ್ ಸಭಾಗಳು ಪ್ರವಾಹ ಪೀಡಿತ ಜನರ ರಕ್ಷಣೆಗೆ ಬರಬೇಕೆಂದು ಕರೆ ನೀಡಿತು. ಇದರಿಂದ ದೂರವಿರಲು ಯಾರಿಂದಲೂ ಸಾಧ್ಯವಿರಲಿಲ್ಲ. ಪ್ರತಿನಿತ್ಯ ದೊಡ್ಡ ಸಂಖ್ಯೆಯ ಜನ ಬ್ಯಾರೇಜನ್ನು ನಿರ್ಮಿಸಲು ಸೇರುತ್ತಿದ್ದರು. ಹನ್ನೊಂದು ದಿನಗಳ ಕಾಲ 20 ಸಾವಿರ ಜನ ದಾಮೋದರ್ ನದಿಯ ಆಕ್ರಮಣಕಾರಿ ರಭಸದ ಹೊಡೆತದಿಂದ ಬಿರುಕಾಗಿದ್ದ ಬ್ಯಾರೇಜನ್ನು ಮಣ್ಣು ಮತ್ತು ಮರಳನ್ನು ಉಪಯೋಗಿಸಿ ಸರಿಪಡಿಸಿದ್ದಾರೆ. ಬಡವರು. ಮಧ್ಯಮವರ್ಗದವರು ಕೆಳಜಾತಿಯುವರು ಮೇಲ್ಜಾತಿಯುವರು, ಹಿಂದೂಗಳು ಮುಸ್ಲಿಮರು, ವಿದ್ಯಾರ್ಥಿ-ಯುವಜನ, ಮಹಿಳೆಯರು, ತಮ್ಮ ಅಸ್ತಿತ್ವಕ್ಕೆ ಧಕ್ಕೆ ಎದುರಿಸಿದವರು ಎಲ್ಲರಾಧಿಯಾಗಿ ಒಂದೇ ಉತ್ಸಾಹದಿಂದ ಕೆಲಸ ಮಾಡಿದ್ದಾರೆ. ಅಂತಸ್ತು, ಜಾತಿ ಧರ್ಮದ ಭೇದವಿಲ್ಲ, ಮಾತ್ರವಲ್ಲ, ಕಿರಿಯರಿಂದ ಹಣ್ಣು ಮುದುಕರವರೆಗೂ ವಯಸ್ಸಿನ ಭೇಧವಿಲ್ಲದೆ ಎಲ್ಲರೂ ಸೇರಿ ಹೊಸ ಬ್ಯಾರೇಜನ್ನು ನಿರ್ಮಿಸಲು ತಮ್ಮ ಶ್ರಮವನ್ನು ದಾನ ಮಾಡಿದ್ದಾರೆ.

ದಾಮೋದರ ನದಿ ಹರಿಯುವ ದಿಕ್ಕಿನಲ್ಲಿ ಇದ್ದಕ್ಕಿದ್ದಂತೆ ಬದಲಾವಣೆ ಆಗಿ (ಪ್ರವಾಹದ ಕಾರಣದಿಂದ) ಅಪಾರ ಪ್ರಮಾಣದಲ್ಲಿ ಕೃಷಿ ಭೂಮಿ, ನಾಶವಾಗಿದೆ 100 ಅಡಿಗಳಷ್ಟು ಬ್ಯಾರೇಜಿನ ಅಗಲವನ್ನು ಹೆಚ್ಚಿಸಿ ನದಿಯು ತನ್ನ ಮೊದಲ ದಿಕ್ಕಿನಲ್ಲಿ ಹರಿಯುವಂತೆ ಮಾಡುವ ಕೆಲಸ ಇದು. ಜನವರಿ 21 ರಂದು ಕಿಸಾನ್ ಸಭಾದ ಜಿಲ್ಲಾ ಕಾರ್ಯದರ್ಶಿ ಅಮಲ್ ಹಲ್ದರ್ ಅಧ್ಯಕ್ಷ ರಾಮಕೃಷ್ಣ ಬ್ಯಾನರ್ಜಿ ಮುಖಂಡರಾದ ಉದಯ್ ಸರ್ಕಾರ್ ಮುಂತಾದವರು ವಿದ್ಯುಕ್ತವಾಗಿ ಈ ಮಹೋನ್ನತ ಕೆಲಸವನ್ನು ಪ್ರಾರಂಭಿಸಿ 11 ದಿನಗಳ ಶ್ರಮದಾನಕ್ಕೆ ಚಾಲನೆ ನೀಡಿದರು.

ಶನಿವಾರದಂದು ಒಂದು ದೃಶ್ಯ... ನದಿಯ ಬ್ಯಾರೇಜಿನ ಸಮೀಪದಲ್ಲಿ ಇರುವ ನೂರಾರು ನಿರ್ಗತಿಕ ಮತ್ತು ಬಡತನ ಪೀಡಿತ ಜನರ ರಕ್ಷಣೆಗೆ ಈ ಪ್ರದೇಶ ಸತಿ ಪತಿಯರೂ ಸೇರಿದಂತೆ ನೂರಾರು ಜನ ಸಹಾಯಕ್ಕೆ ಇಳಿದರು. ನದಿಯ ಬ್ಯಾರೇಜಿನ ಪಕ್ಕದಲ್ಲಿ ಬದುಕುವ ಇವರನ್ನು ಉಳಿಸುವುದೇ ಅಲ್ಲದೆ, ಇತರ ಗುಡಿಸಲು ವಾಸಿಗಳನ್ನು ಮಣ್ಣು, ಭೂಮಿ ಮತ್ತು ಬೆಳೆಗಳನ್ನು ರಕ್ಷಿಸುವುದೂ ಅಗತ್ಯವಾದ್ದರಿಂದ ಜನರ ದು:ಖದಲ್ಲಿ ಭಾಗಿಯಾಗಲು ಶ್ರಮದಾನಕ್ಕೆ ಧುಮುಕಿದರು. ಪ್ರತಿಯೊಬ್ಬರ ಬಯಕೆ ಏನೆಂದರೆ ಹೇಗಾದರೂ ಮಾಡಿ ನದಿಯು ನಾಶದಿಂದ ಜನರನ್ನು ಮತ್ತು ಅವರ ಬದುಕನ್ನು ರಕ್ಷಿಸುವುದು.

ಬಡವರ ಪರವಾದ ಕಾಳಜಿ ಈ ಪ್ರದೇಶದ ಜನತೆಯಲ್ಲಿ ಎಂತಹ ಅಮಿತೋತ್ಸಾಹವನ್ನು ಮೂಡಿಸಿತ್ತೆಂದರೆ ಯಾರೂ ಯಾರಿಗೂ ಹೇಳಿಸಿಕೊಂಡು ಬರುವ ಅಗತ್ಯವಾಗಲೀ, ಪರಿಸ್ಥಿತಿಯಾಗಲೀ ಕಾಣಲಿಲ್ಲ. ಶ್ರಮದಾನದ ಉತ್ಸಾಹವೇ ಎಂತಹವರನ್ನು ಮಂತ್ರಮುಗ್ಧರನ್ನಾಗಿಸಿದರೆ, ಅಲ್ಲಿನ ಮತ್ತೊಂದು ದೃಶ್ಯವು ಯಾರನ್ನಾದರೂ ಕುಬ್ಜರನ್ನಾಗಿಸುವಂತದ್ದು.

ತಮ್ಮ ಸ್ವಂತ ಶ್ರಮದಿಂದ ಬ್ಯಾರೇಜನ್ನು ಕಟ್ಟಲು ಬಂದವರು ತಮ್ಮ ಜೊತೆಯಲ್ಲೇ ಅಕ್ಕಿ-ಬೇಳೆ-ತರಕಾರಿಗಳನ್ನು ತಂದಿದ್ದರು. ಒಂದು ಕಡೆ ಬ್ಯಾರೇಜಿನ ಕೆಲಸ ಮತ್ತೊಂದು ಕಡೆ ಸ್ವಯಂಸೇವಕರು ಅಡುಗೆಯನ್ನು ತಯಾರಿಸುವ ಕೆಲಸ ನಂತರ ಎಲ್ಲರಿಗೂ ಬಡಿಸುವುದು. ಮಧ್ಯಾಹ್ನದ ಅಡುಗೆಗೆ ಬೇಕಾದ ಯಾವುದೇ ಪದಾರ್ಥಗಳನ್ನು ಕಾಸು ಕೊಟ್ಟು ಕೊಂಡಿದ್ದಿಲ್ಲ. ಎಲ್ಲರೂ ತಮ್ಮ ಮನೆಗಳಿಂದಲೇ ತರುತ್ತಿದ್ದರು. ಊಟವೆಂದರೆ ಮೃಷ್ಟಾನ್ನವಲ್ಲ. ಒಂದು ರೀತಿ ಕಿಚಡಿ... ಆದರೆ ಅದೇ ಸವಿಯೂಟ

ಕೇಂದ್ರ ಸರ್ಕಾರವು ಈ ಹಿಂದೆ ತಾನು ನಿರ್ವಹಿಸದೇ ಇದ್ದ ಜವಾಬ್ದಾರಿಯನ್ನು ಈಗ ದಾಮೋದರ ನದೀ ಪ್ರದೇಶದ ಜನತೆ ಈ ರೀತಿ ನಿರ್ವಹಿಸಿದ್ದಾರೆ. ಈ ಕಾರಣಕ್ಕೆ ಕೇಂದ್ರ ಸರ್ಕಾರದ ಮೇಲೆ ಜನರ ಅತೃಪ್ತಿಯಿದೆ. ದಾಮೋದರ ನದಿ ಭ್ಯಾರೇಜನ್ನು ಕಟ್ಟುವಲ್ಲಿನ ತಪ್ಪು ಯೋಜನೆಯಿಂದಾಗಿ ಇಂದು 16 ಗ್ರಾಮ ಪಂಚಾಯತಿ ಪ್ರದೇಶಗಳು ಪ್ರವಾಹ ಪೀಡಿತವಾಗಿವೆ. ಶ್ಯಾಂಸುಂದರ್ ಪಹಲಾನ್‌ಪುರ, ಗೊಟನ್, ಕೈಟಿ, ಉಚ್ಛಲನ್, ಸಾಗ್ರೈ, ಕೈಯಾರ್ ಶಂಕಿ ರೈಯ್ನಾ, ಕಂದಘೋಷ ಮುಂತಾದ ಗ್ರಾಮ ಪಂಚಾಯತಿಗಳ ಎಲ್ಲಾ ಜನರು ಬ್ಯಾರೇಜಿನ ಕಟ್ಟುವ ಸ್ವಯಂಪ್ರೇರಿತ ಶ್ರಮದಾನದ ಕೆಲಸ ಮಾಡುತ್ತಲೇ ದಾಮೋದರ ಕಣಿವೆ ನಿಗಮ (ಡಿವಿಸಿ) ಮತ್ತು ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸುತ್ತಾರೆ. ಜೊತೆ ಜೊತೆಯಲ್ಲೇ ಸಂತೋಷವನ್ನು ವ್ಯಕ್ತಪಡಿಸುತ್ತಾರೆ.

ಶಿಕ್ಷಕ ಕೃಷ್ಣದಾಸ್ ಭೌಮಿಕ್, ಕೃಷಿಕಾರ್ಮಿಕರಾದ ಶ್ರೀಕಾಂತ್ ಬಾಗ್, ಬಸುದೇವ್ ದಾಸ್, ಜಯದೇವ ರಾಯ್ ಶ್ಯಾಂಸುಂದರ್ ಕಾಲೇಜು ವಿದ್ಯಾರ್ಥಿಗಳಾದ ಸೋಂಜಿನ್ ಘೋಷ್, ತಪನ್ ಕ್ಷೇತ್ರಪಾಲ್ ಹುಮಾಯೂನ್ ದಿವಾನ್, ಬಿದ್ಯುತ್ ದಲ್ವಿ ಮುಂತಾದವರು ನಾಡಿಗಾಗಿನ ಇಂತಹ ಸೇವೆಯಲ್ಲಿ ತಮ್ಮ ಪಾಲೂ ಇರುವುದಕ್ಕೆ ಸಂತೋಷ ಪಡುತ್ತಾರೆ.

ಜನತೆಯ ಈ ಕಾರ್ಯಾಚರಣೆಯು ಯಾರನ್ನೂ ಬಿಟ್ಟಿಲ್ಲ ಎಂಬುದಕ್ಕೆ ಗೌತಮ್ ನಂದಿ ಉದಾಹರಣೆ. ಅಂಗವಿಕಲನಾದ ಈತ ತನ್ನ ಕಾಲ ಮೇಲೆ ನಿಲ್ಲಲಾಗದಿದ್ದರೂ ಮರಳನ್ನು ಚೀಲಕ್ಕೆ ತುಂಬುವಲ್ಲಿ ಯಾವುದೇ ಕ್ರಿಯಾಶೀಲ ವ್ಯಕ್ತಿಗಿಂತಲೂ ಕಡಿಮೆ ಆಸಕ್ತಿಯಿರಲಿಲ್ಲ. ಅಂಗವಿಕಲತೆ ಇಂತಹ ಮಹಾನ್ ಕಾರ್ಯಕ್ಕೆ ಯಾವತ್ತೂ ಅಡ್ಡಿಯಾಗಿಲ್ಲವೆನ್ನುತ್ತಾರೆ.

"ದೆಹಲಿಯ ಕೇಂದ್ರ ಸರ್ಕಾರ ಯಾವುದೇ ಸಹಾಯವನ್ನು ಮಾಡದಿದ್ದರೂ ಕಿಸಾನ್ ಸಭಾದ ಕರೆಗೆ ಓಗೊಟ್ಟು ತಮ್ಮ ಮಿತಿಯಲ್ಲಿ ನದಿ ಅಪಾಯನ್ನು ರಕ್ಷಿಸಲು ಮತ್ತು ಜನರನ್ನು ಪ್ರವಾಹದಿಂದ ಕಾಪಾಡಲು ಮಾಡಿರುವ ಜನತೆಯ ಕ್ರಮ ಅತ್ಯಂತ ಅಭಿನಂದನಾರ್ಹವಾಗಿದೆ. ಜಿಲ್ಲೆಯಾದ್ಯಂತ ಈ ಕೆಲಸ ನಡೆದಿದೆ ಬ್ಯಾರೇಜನ್ನು ಸರಿಪಡಿಸಲಾಗಿದೆ ಎಂದು ರೈತ ಮುಖಂಡ ಕಾಂ|| ಮದನ್ ಘೋಷ್ ಸ್ಮರಿಸುತ್ತಾರೆ.

ಭಾರತದ ಜನತೆಗೆ ಮುಂದೇನು ಕಾದಿದೆ?

ಸಂಸತ್ತಿನ ಬಜೆಟ್ ಅಧಿವೇಶನ ಆರಂಭವಾಗಿದೆ. ಕೇಂದ್ರ ಮಂತ್ರಿಮಂಡಲ ತಯಾರಿಸಿದ ಭಾಷಣವನ್ನು ರಾಷ್ಟ್ರಪತಿಗಳು ಓದಿಯೂ ಆಗಿದೆ. ರೈಲ್ವೇ ಬಜೆಟ್ ಬಂದಿದೆ. ಈ ಸಂಚಿಕೆ ನಿಮ್ಮ ಕೈಸೇರುವ ವೇಳೆಗೆ ಸಾಮಾನ್ಯ ಬಜೆಟ್ ಕೂಡಾ ಬಂದಿರುತ್ತದೆ. ಆದರೆ ಅದರ ಮೊದಲೇ ಅದರಲ್ಲೇನಿದೆ ಎಂದು ಹಣಕಾಸು ಮಂತ್ರಿಗಳು, ಅಷ್ಟೇ ಅಲ್ಲ, ಪ್ರಧಾನ ಮಂತ್ರಿಗಳು, ರಾಷ್ಟ್ರಪತಿಗಳೂ ಇಂಗಿತ ನೀಡಿದ್ದಾರೆ. ಇಲ್ಲ, ಈ ಸರಕಾರ ಅಧಿಕಾರಕ್ಕೆ ಬಂದಂದಿನಿಂದಲೇ ಈ ಬಗ್ಗೆ ಕಾಯಾ, ವಾಚಾ, ಮನಸಾ ಇಂಗಿತ ನೀಡುತ್ತಲೇ ಇದೆಯಲ್ಲವೇ?

ದೇಶದ ಶಾಸನ ರೂಪಿಸುವ ಸರ್ವೋನ್ನತ ಸಂಸ್ಥೆಯಾದ ಸಂಸತ್ತಿಗೆ ಸಲ್ಲಿಸುವ ಮೊದಲು ಬಜೆಟ್ ಬೇರೆ ಯಾರಿಗೂ ತಿಳಿದಿರಬಾರದು ಎಂಬುದು ಪರಂಪರೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಹಣಕಾಸು ಮಂತ್ರಿಗಳು ಬಜೆಟನ್ನು ಸಂಸತ್ತಿನಲ್ಲಿ ಮಂಡಿಸುವ ಎಷ್ಟೋ ಮೊದಲೇ ಅವನ್ನು ಚೂರುಚೂರೇ ಬಹಿರಂಗಪಡಿಸುವುದು ಕೂಡಾ ಈಗ ಒಂದು ಪರಂಪರೆಯಾಗುತ್ತಿದೆ. ಆ ಪ್ರಕಾರ ಯಶವಂತ್ ಸಿನ್ಹಾರವರು ಇನ್ನಷ್ಟು ಸಂಕಷ್ಟದ ದಿನಗಳಿಗೆ ಸಿದ್ಧರಾಗಿರಿ ಎಂದು ಜನಸಾಮಾನ್ಯರನ್ನು ಒಂದೆಡೆ ಬೆದರಿಸುತ್ತಲೇ ಇದ್ದರೆ, ಇನ್ನೊಂದೆಡೆ ಹಣದ ಥೈಲಿಗಳಿಗೆ ಇನ್ನಷ್ಟು ರಿಯಾಯ್ತಿಗಳ, ಇನ್ನಷ್ಟು ಪ್ರೋತ್ಸಾಹಗಳ ಭರವಸೆ ನೀಡುತ್ತಿದ್ದಾರೆ. ಇವು ಜನಸಾಮಾನ್ಯರನ್ನು ಸುಲಿದುಕೊಡುವ ರಿಯಾಯ್ತಿಗಳು ಎಂದು ಇದರಿಂದಲೇ ಸ್ಪಷ್ಟವಾಗುತ್ತದಲ್ಲವೇ?

ರಾಷ್ಟ್ರಪತಿಗಳ ಭಾಷಣ ಎರಡನೇ ತಲೆಮಾರಿನ ಸುಧಾರಣೆಗಳ ಬಗ್ಗೆ ಮತ್ತೆ ಹೇಳಿದೆ. ಜತೆಗೆ ಎನ್.ಡಿ.ಎ. ಸರಕಾರದ 'ಉಜ್ವಲ ಭವಿಷ್ಯದ ಭಾರತ ನಿರ್ಮಾಣ'ದ ಕನಸುಗಳ ಕಾರ್ಯಕ್ರಮಗಳ ಬಗ್ಗೆಯೂ ಹೇಳಿದೆ. ಆದರೆ ದೇಶದ ವರ್ತಮಾನದ ಬಗ್ಗೆ ಹಣದುಬ್ಬರ ಇಳಿಯುತ್ತಿದೆಯೆಂದರೂ ಬೆಲೆಗಳು ಏರುತ್ತಲೇ ಇರುವ ಬಗ್ಗೆ ಅದು ಏನೂ ಹೇಳಿಲ್ಲ. ಉತ್ತರ ಪ್ರದೇಶ ವಿದ್ಯುತ್ ಕಾರ್ಮಿಕರಿಂದ ಹಿಡಿದು ವಕೀಲರವರೆಗೆ ಎಲ್ಲರೂ ಬೀದಿಗಿಳಿದು ಸರ್ಕಾರದ ದಮನಚಕ್ರವನ್ನು ಏಕೆ ಎದುರಿಸುತ್ತಿದ್ದಾರೆ ಎಂಬ ಬಗ್ಗೆ ಏನೂ ಹೇಳಿಲ್ಲ.

ಹಣಕಾಸು ಕೊರತೆಯ ರಾಗ

ದೊಡ್ಡ ಪತ್ರಿಕೆಗಳಲ್ಲೆಲ್ಲಾ ಈಗ ಬಜೆಟ್‌ನ ಮಾತೇ. ಅವುಗಳಲ್ಲೆಲ್ಲಾ ಕೇಳ ಬರುವ ರಾಗ ಒಂದೇ - ಹಣಕಾಸು ಕೊರತೆ ಕಳೆದ ಬಜೆಟ್‌ನಲ್ಲಿ ಅಂದಾಜು ಮಾಡಿದ್ದಕ್ಕಿಂತ ಮಿತಿ ದಾಟಿ ಹೋಗುತ್ತಿದೆ. ಸರಕಾರ ಅದನ್ನು ಕಡಿತ ಮಾಡಬೇಕು. ಅವರತರ್ಕ ತುಂಬಾ ಸರಳ; ತುಂಬಾ ಸರಳವಾಗಿ ಜನಗಳನ್ನು ಮೋಸ ಮಾಡುವಂತದ್ದು. "ಸರಕಾರದ ಹಣಕಾಸು ಕೊರತೆ ದೊಡ್ಡದಾಗಿದೆ. ಆದರಿಂದಾಗಿ ಅದು ಸಾಲ ಮಾಡುತ್ತದೆ. ಹೆಚ್ಚೆಚ್ಚು ಸಾಲ ಮಾಡುತ್ತದೆ. ಇದರಿಂದ ಖಾಸಗಿ ವಲಯದವರಿಗೆ ಹೂಡಿಕೆಗೆ ಸಿಗುವ ಬಂಡವಾಳ ಕಡಿಮೆಯಾಗುತ್ತಾ ಹೋಗುತ್ತದೆ" ದೊಡ್ಡ ಕಂಪನಿಗಳ ಹಿಡಿತದಲ್ಲಿರುವ ಪತ್ರಿಕೆಗಳ ವಿಶ್ಲೇಷಕರ ಸರಳ ತರ್ಕ ಇದು.

ಈ ಹಣಕಾಸು ಕೊರತೆಯನ್ನು ತಗ್ಗಿಸುವುದು ಹೇಗೆ? ಅದಕ್ಕೂ ಅದರ ಪರಿಹಾರ ಬಹಳ ಸರಳ. ವಿವಿಧ ಬಡ ಮತ್ತು ಮಧ್ಯಮ ವರ್ಗದ ಜನವಿಭಾಗಗಳಿಗೆ ಕೊಡುವ ಸಬ್ಸಿಡಿಗಳನ್ನು ಕಡಿತಮಾಡಿ! ಇವರ ಪ್ರಕಾರ ಸರ್ಕಾರ ಶಿಕ್ಷಣ, ಆರೋಗ್ಯ, ಕುಡಿಯುವ ನೀರಿಗೆ ಖರ್ಚು ಮಾಡುವುದೂ ಸಬ್ಸಿಡಿಯೇ. ಅಂದರೆ ಜನಸಾಮಾನ್ಯರಿಂದ ಇದಕ್ಕೆಲ್ಲಾ ಹೆಚ್ಚೆಚ್ಚು ಹಣ ಕಿತ್ತು ಹಣಕಾಸು ಕೊರತೆ ಇಳಿಸಿ, ಬಂಡವಾಳಶಾಹಿಗಳಿಗೆ ಲಾಭ ತರುವ ಹೂಡಿಕೆಗಳಿಗೆ ಹೆಚ್ಚು ಅವಕಾಶ ಕೊಡಿ!

ಪರ್ಯಾಯ ದಾರಿಯಿಲ್ಲವೇ?

ಈ ನೀತಿಗಳನ್ನು 1991 ರಿಂದ ಸತತವಾಗಿ ಅನುಸರಿಸಿಕೊಂಡು ಬರಲಾಗಿದೆ. ಇದರಿಂದ ಜನಗಳಿಗೆ ಸಿಕ್ಕಿದ್ದೇನು? ದೇಶದ ಆರ್ಥಿಕಕ್ಕೆ ಸಿಕ್ಕಿದ್ದೇನು? ಈ ಹಣಕಾಸು ವರ್ಷದ ಅಂತ್ಯದ ವೇಳೆಗೆ ಹಣಕಾಸು ಕೊರತೆ 1,24,000 ಕೋಟಿ ರೂಪಾಯಿಗಳಷ್ಟು ಆಗುತ್ತದಂತೆ. ಹೀಗಿರುವಾಗ ಜನಸಾಮಾನ್ಯರಿಗೆ ಕೊಡುವ ಸಬ್ಸಿಡಿಗಳನ್ನು ಕಡಿತ ಮಾಡದೆ ಹಣಕಾಸು ಕೊರತೆಯನ್ನು ಕಡಿತ ಮಾಡಲು ಸಾಧ್ಯವಿಲ್ಲವೇ ಎಂದು ಈ ಉದಾರೀಕರಣ-ಪರವಾದ ಯಾವ ಹಣಕಾಸು ಮಂತ್ರಿಯೂ ಯೋಚಿಸಲೂ ಹೋಗುವುದಿಲ್ಲವೇಕೆ? ದೊಡ್ಡ ಕಂಪನಿಗಳು ಸಾರ್ವಜನಿಕ ವಲಯದಿಂದ ಪಡೆದು ಅದನ್ನು ಮರುಪಾವತಿ ಮಾಡದೆ ಉಳಿಸಿಕೊಂಡ ಸುಸ್ತಿಸಾಲ ಹಾಗೂ ಅವುಗಳ ಮೇಲೆ ತೆರದ ಬಡ್ಡಿಯ ಮೊತ್ತ 55000 ಕೋಟಿ ರೂಪಾಯಿಗಳಂತೆ. ಇವನ್ನು ಕಟ್ಟುನಿಟ್ಟಾಗಿ ವಸೂಲು ಮಾಡಿದರೆ ನಮ್ಮ ದೇಶದ ಹಣಕಾಸು ಕೊರತೆ ಅರ್ಧಕ್ಕೆ ಇಳಿಯುತ್ತದೆ. ಅಯ್ಯೋ, ಹೀಗೆ ಮಾಡಲು ಎಂದಾದರೂ ಸಾಧ್ಯವೇ? ಸರಕಾರ ಈ ತನ್ನ ಕಣ್ಮಣಿಗಳಿಗೆ ನೋವುಂಟು ಮಾಡುವುದೇ? ಅದೇ ರೀತಿ ಗ್ರಾಮೀಣ ಶ್ರೀಮಂತರಿಂದ, ಭೂಮಾಲಕರಿಂದ ತೆರಿಗೆ ವಸೂಲು ಮಾಡುವ ಬಗ್ಗೆ ಕೂಡಾ ಯೋಚಿಸುವಂತಿಲ್ಲ. ಏಕೆಂದರೆ ಬಿಜೆಪಿಯಲ್ಲಷ್ಟೇ ಅಲ್ಲ, ಎನ್.ಡಿ.ಎ. ನ ಇತರ ಅಂಗ ಪಕ್ಷಗಳಲ್ಲೂ ಇವರ ಪ್ರಾತಿನಿಧ್ಯ, ಪ್ರಭಾವ ಗಮನಾರ್ಹವಾಗಿದೆ.

ವಾಜಪೇಯಿ ಸರಕಾರದ 'ಸಾಧನೆ'

ಅಂದರೆ ಹಣಕಾಸು ಮಂತ್ರಿಗಳ, ಪ್ರಧಾನಮಂತ್ರಿಗಳ, ರಾಷ್ಟ್ರಪತಿಗಳ 'ಕಠಿಣ' ಕ್ರಮಗಳ ಕೊಡಲಿಯೇಟು ಬೀಳುವುದು ಜನಸಾಮಾನ್ಯರ ಮೇಲೆಯೇ! ಈಗಾಗಲೇ ಕೆಳಮಟ್ಟದಲ್ಲಿರುವ ಅವರ ಜೀವನ ಮಟ್ಟವನ್ನು ಇನ್ನಷ್ಟು ಕೆಳಗೆ ತಳ್ಳಲು! ಸಬ್ಸಿಡಿಗಳನ್ನು ಕಡಿತ ಮಾಡಿ ಸಾಮಾಜಿಕ ಸೇವೆಗಳ ವೆಚ್ಚ ಹೆಚ್ಚಿಸುವುದು ಬಡಜನರ ಮೇಲೆ ಮಾಡುತ್ತಿರುವ ಪರೋಕ್ಷ ಧಾಳಿಯಲ್ಲದೆ ಬೇರೇನೂ ಅಲ್ಲ. ಯಶವಂತ ಸಿನ್ಹಾ ತನ್ನ ಹಿಂದಿನ ಹಣಕಾಸು ಮಂತ್ರಿಗಳಂತೆ ಇಂತಹ ಧಾಳಿಗಳನ್ನು ನಡೆಸುವುದಾಗಿ ಹೇಳುತ್ತಲೇ ಬಂದಿದ್ದಾರೆ. ಇದು ಐ.ಎಂ.ಎಫ್.-ವಿಶ್ವಬ್ಯಾಂಕ್ ಭಾರತಕ್ಕೂ ಸೇರಿದಂತೆ ಹಲವು ದೇಶಗಳಿಗೆ ಕೊಡಮಾಡಿರುವ ಜ್ಞಾನಸೂಕ್ತಿ.

ನಿಜ, ಹಿಂದಿನ ಎಲ್ಲಾ ಹಣಕಾಸು ಮಂತ್ರಿಗಳಿಗಿಂತ ದ್ವಿಗುಣ ಉತ್ಸಾಹ ಪ್ರದರ್ಶಿಸುತ್ತಾ ಈ ಸೂಕ್ತಿಯ ಪಠಣ ಮಾಡುತ್ತಿದ್ದಾರೆ. ಕಳೆದ ಎರಡು ಬಜೆಟ್‌ಗಳಲ್ಲಿ ಬಡ ಭಾರತೀಯರ ಹೊಟ್ಟೆ ಬಡಿದು 10 ಸಾವಿರ ಕೋಟಿ ರೂ. ಪರೋಕ್ಷತೆರಿಗೆ ಎತ್ತಿದ 'ಸಾಧನೆ' ಅವರದ್ದು! ಇದಕ್ಕಾಗಿ ವಿರೋಧ ಪಕ್ಷವಾಗಿದ್ದಾಗ ಜಪಿಸುತ್ತಿದ್ದ 'ಸ್ವದೇಶಿ' ಮಂತ್ರವನ್ನು ಯಾವುದೇ ಮುಲಾಜಿಲ್ಲದೆ ಕೈಬಿಟ್ಟದ್ದು ಅವರ ಇನ್ನೊಂದು 'ಸಾಧನೆ'! ಸಾರ್ವಜನಿಕ ವಲಯದ ಶೇರುಗಳ ಮಾರಾಟವನ್ನು ವಿಶಬ್ಯಾಂಕ್-ಐ.ಎಂ.ಎಫ್. ವಿಶ್ವ ವ್ಯಾಪಾರ ಸಂಸ್ಥೆಯ ದೊರೆಗಳು 'ಭಲೇ' ಎನ್ನುವ ರೀತಿಯಲ್ಲಿ ಮಾಡಲು ಒಂದು ಪ್ರತ್ಯೇಕ ಮಂತ್ರಾಲಯವನ್ನೇ ರಚಿಸಿದ್ದು ಈ ಸರಕಾರದ ಮಗದೊಂದು 'ಸಾಧನೆ'

ದೇಶದ ಸ್ವಾವಲಂಬೀ ಅಭಿವೃದ್ಧಿಯಲ್ಲಿ ಈ ಸಾರ್ವಜನಿಕ ವಲಯದ ಉದ್ದಿಮೆಗಳ ಪಾತ್ರ, ಅಮೆರಿಕ ಪಿಎಲ್-480 ಆಹಾರದ ಮೇಲಿನ ಹೀನ ಅವಲಂಬನೆ ನೀಗಿಸುವಲ್ಲಿ ಆಹಾರ ಉತ್ಪಾದನೆ ಹೆಚ್ಚಿಸುವಲ್ಲಿ ಸಾರ್ವಜನಿಕ ವಲಯದ ವಿದ್ಯುತ್ ಉದ್ದಿಮೆಯ, ರಸಗೊಬ್ಬರ ಉದ್ದಿಮೆಯ ಪಾತ್ರ, ಸಾರ್ವಜನಿಕ ವಲಯದ ಬ್ಯಾಂಕುಗಳ, ವಿಮಾ ವಲಯದ ಪಾತ್ರ ಯಾರು ತಾನೇ ಮರೆಯಲು ಸಾಧ್ಯ? ಜಾಗತೀಕರಣದ ಮಿಂಚು ಹೊಡೆದವರು ಮಾತ್ರವೇ ಇವನ್ನೆಲ್ಲಾ ಮರೆತು ನಮ್ಮ 'ಪ್ರತ್ಯೇಕತೆ'ಯನ್ನು ಕೊನೆಗೊಳಿಸಬೇಕು ಎನ್ನುತ್ತಿದ್ದಾರೆ. ನಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಡಬೇಕು ಎಂಬುದೇ ಇದರ ನಿಜವಾದ ಅರ್ಥ. ಇದಕ್ಕಾಗಿ 340 ಸರಕುಗಳನ್ನು ಮುಕ್ತವಾಗಿ ಆಮದು ಮಾಡಲು ವಾಜಪೇಯಿ ಸರಕಾರ ಸೌಲಭ್ಯ ಒದಗಿಸಿದೆ. ಇನ್ನೂ 700 ಸರಕುಗಳಿಗೆ ಈ ರೀತಿ ಮುಕ್ತ ಆಮದಿನ ಸೌಲಭ್ಯ ಒದಗಿಸಲಾಗುವುದಂತೆ. ಇವೆಲ್ಲಾ ಬಹುಪಾಲು ಹೆಚ್ಚು ಉದ್ಯೋಗವಕಾಶ ಒದಗಿಸುತ್ತಿದ್ದ ಘಟಕಗಳು, ಅದೇ ರೀತಿ ವಿದೇಶಿ ವಿನಿಮಯ ತರುತ್ತಿದ್ದ ಘಟಕಗಳು. ಇವನ್ನೆಲ್ಲಾ ಆಮದಿಗೆ ಮುಕ್ತಗೊಳಿಸುವುದರ ಅರ್ಥ ಉದ್ಯೋಗವಕಾಶ ಮತ್ತು ವಿದೇಶಿ ವಿನಿಮಯ ಎರಡಕ್ಕೂ ಕತ್ತರಿಯೆಂದೇ.

ಕೂತ ಟೊಂಗೆಯನ್ನೇ ಕತ್ತರಿಸುವುದು!

ನಮ್ಮ ಮುಂದೆ ಈಗಿರುವ ಪ್ರಶ್ನೆ - ಇಷ್ಟೆಲ್ಲಾ ಮಾಡಿ ಬಿಜೆಪಿ ಸರಕಾರ ನಮ್ಮ ಆರ್ಥಿಕದಲ್ಲಿನ ಅವ್ಯವಸ್ಥೆಯನ್ನು ಸರಿಪಡಿಸಬಲ್ಲುದೇ? ಈ ಮೊದಲೇ ಹೇಳಿದಂತೆ ಹಣಕಾಸು ಕೊರತೆ ಮಿತಿಮೀರಿದೆ. ಎಷ್ಟೆಲ್ಲಾ ಸಬ್ಸಿಡಿ ಕಡಿತ ಮಾಡಿದರೂ ಹಣಕಾಸು ಕೊರತೆ ನಿರೀಕ್ಷಿತ 5.5% ದ ಬದಲು 6.9% ದ ವರೆಗೂ ಹೋಗಬಹುದು ಎಂಬ ಕೆಲವರ ಅಂದಾಜು. ಕೇಂದ್ರ ಸರ್ಕಾರದ ಸಾಲಭಾರ ಈಗ ಒಟ್ಟು ಆಂತರಿಕ ಉತ್ಪಾದನೆಯ 49% ದಷ್ಟು! ಈ ಸರಕಾರ ತನ್ನ ಆದಾಯದ 48% ನ್ನು ಕೇವಲ ಆಂತರಿಕ ಸಾಲಗಳ ಮೇಲಿನ ಬಡ್ಡಿ ತೆರಲಿಕ್ಕೇ ಖರ್ಚು ಮಾಡುತ್ತಿದೆ. ರಫ್ತು ಹೆಚ್ಚುವ ಬದಲು, ಆಮದು ಇನ್ನೂ ಹೆಚ್ಚು ವೇಗವಾಗಿ ಏರುತ್ತಿದೆ. ಈ ಸರಕಾರಕ್ಕೆ ವ್ಯರ್ಥ ಖರ್ಚನ್ನು ತಗ್ಗಿಸಲು ಸಾಧ್ಯವಾಗಿದೆಯೇ? ಇಲ್ಲ. ತೆರಿಗೆ ನೆಲೆಯನ್ನು ವಿಸ್ತರಿಸಲು ಸಾಧ್ಯವಾಗಿದೆಯೇ? ಗ್ರಾಮೀಣ ಶ್ರೀಮಂತರನ್ನು, ಇತರ ಶ್ರೀಮಂತ ವಿಭಾಗಗಳಿಂದ ತೆರಿಗೆ ವಸೂಲು ಮಾಡಲು ಸಾಧ್ಯವಾಗಿದೆಯೇ? ಇಲ್ಲ.

ಇನ್ನೊಂದು ವಿಷಯ. ಸಾಮಾಜಿಕ ವಲಯಗಳಲ್ಲಿನ ಕೆಲವು ಖರ್ಚುಗಳಿಂದ ಸಬ್ಸಿಡಿಗಳಿಂದ ಹಣಕಾಸು ಕೊರತೆ ಏರಿದರೂ, ಇತಂಹ ಕ್ರಮಗಳು ಜನಗಳ ನಿಜ ಆದಾಯವನ್ನು ಹೆಚ್ಚಿಸಿ, ಅವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ನಮ್ಮ ಉದ್ದಿಮೆಗಳಿಗೆ ಮಾರುಕಟ್ಟೆ ಹೆಚ್ಚುತ್ತದೆ. ಇದನ್ನು ಮರೆಯುವಂತಿಲ್ಲ. ಆದ್ದರಿಂದ ಹಣಕಾಸು ಕೊರತೆಯನ್ನು ತಗ್ಗಿಸುವ ಹೆಸರಿನಲ್ಲಿ ಇಂತಹ ಖರ್ಚು/ಸಬ್ಸಿಡಿಗಳನ್ನು ಕಡಿತ ಮಾಡುವುದೆಂದರೆ ನಾವು ಕುಳಿತಿರುವ ಟೊಂಗೆಯನ್ನೇ ಕತ್ತರಿಸುವ ಮೂರ್ಖತನವಾಗುತ್ತದೆ.

ದೇಶ ಪ್ರೇಮಿಗಳಿಗೆ ಆತಂಕ

ಇದೇನು ತಮಾಷೆಯ ಸಂಗತಿಯಲ್ಲ. ಐ.ಎಂ.ಎಫ್.-ವಿಶ್ವಬ್ಯಾಂಕ್‌ಗಳು, ನಮ್ಮ ಜಾಗತೀಕರಣವಾದಿಗಳು ಮುಂದಿಡುತ್ತಿರುವ ಸಿದ್ಧಾಂತಗಳು, ಕ್ರಮಗಳು ಇದೇ ಬಗೆಯವು. ಹಿಂದಿನ ಹಣಕಾಸು ಮಂತ್ರಿ ಹಾರ್ವರ್ಡ್ ಶಿಕ್ಷಣ ಪಡೆದ ಶ್ರೀಯುತ ಚಿದಂಬರಂ ಈಗಿನ ಹಣಕಾಸು ಮಂತ್ರಿ ಸಿನ್ಹಾರವರಿಗೆ ನೀಡಿರುವ ಸಲಹೆ ಇದೇ ಮುಖಾಜನರ ವರ್ಗಕ್ಕೆ ಸೇರಿದ್ದು (ಬಾಕ್ಸ್ ನೋಡಿ). ಸಾಲ ತೀರಿಸಲು ನಿಮ್ಮ ಪಾತ್ರೆ-ಪಗಡ ಮಾರಿ-ನಾಳೆಯ ಬಗ್ಗೆ ಯೋಚಿಸಬೇಡಿ ಎಂಬ ಈ ಸಲಹೆಯ ಇನ್ನೊಂದು ದುಷ್ಪರಿಣಾಮವನ್ನು ನಾವು ಗಮನಿಸಬೇಕು. ಈ ನಿಲುವು ನಮ್ಮ ಆರ್ಥಿಕ ಸಾರ್ವಭೌಮತೆಯ ಮೇಲಷ್ಟೇ ಅಲ್ಲ, ವಿಶ್ವವ್ಯವಹಾರಗಳಲ್ಲಿ ನಮ್ಮ ಸ್ಥಾನಮಾನಕ್ಕೂ ಗಂಭೀರ ಧಕ್ಕೆ ತರುತ್ತಿದೆ. ಈಗಂತೂ ದಿಲ್ಲಿಯಲ್ಲಿರುವ ಸರಕಾರ ಸ್ವಾತಂತ್ರ್ಯಾನಂತರ ಅತ್ಯಂತ ಸಾಮ್ರಾಜ್ಯಶಾಹಿ-ಪರ, ಅಮೆರಿಕ-ಪರ ಸರಕಾರ ಎಂಬ ಕುಖ್ಯಾತಿ ಪಡೆದಿದೆ. ಈ ಸರಕಾರದ ವಿದೇಶಾಂಗ ಮಂತ್ರಿ ಅಮೆರಿಕಾದ ವಿದೇಶಾಂಗ ಸಚಿವೆ, ವಿದೇಶಾಂಗ ಕಾರ್ಯದರ್ಶಿಗಳ ಬೆನ್ನ ಹಿಂದೆಯೇ ಓಡಾಡುವವರೆಂದೇ ಈಗ 'ಹೆಸರುವಾಸಿ'ಯಾಗಿದ್ದಾರೆ. ಸಿಟಿಬಿಟಿಗೆ ಅಮೆರಿಕಾ ಹೇಳಿದಂತೆ ಸಹಿ ಹಾಕುವುದಾಗಿ ಪ್ರಧಾನಿ ವಾಜಪೇಯಿ ಭರವಸೆ ನೀಡಿದ್ದಾರೆಂಬ ವರದಿಯೂ ಇದೆ. ಈಗಂತೂ ಈ ಸರಕಾರ ಇರಾಕೀ ಮತ್ತು ಯುಗೋಸ್ಲಾವ್ ಜನತೆಯ ಮಾರಣಹೋಮ ಮಾಡಿದ ಕಟುಕ ಬಿಲ್ ಕ್ಲಿಂಟನ್‌ಗೆ ಭವ್ಯ ಸ್ವಾಗತದ ತಯಾರಿಯಲ್ಲಿದೆ. ಯಾವುದೇ ದೇಶಪ್ರೇಮಿ ಭಾರತೀಯ ಉಪೇಕ್ಷಿಸಲಾರದಂತಹ ಪರಿಸ್ಥಿತಿಗೆ ಭಾರತವನ್ನು ಈ ಸರಕಾರ ತಂದಿಟ್ಟಿದೆ.

ಇವರು 'ಜನಗಳ'ಲ್ಲವೇ? ಚಿಂದಬರಂ?

ಇವಕ್ಕೆಲ್ಲಾ ಸವಾಲು ಹಾಕದಿರಲು ಸಾಧ್ಯವೇ? "ಜನಗಳ ಭಾವನೆ ಈಗ ಬಹಳ ಸೂಕ್ಷ್ಮವಾಗಿದೆ. ಖಾಸಗೀಕರಣ ವಿರೋಧಿಗಳಿಗೆ ಜನರಿಂದ ಯಾವ ಸಮಾಧಾನ ಸಿಗುತ್ತಿಲ್ಲ" ಎಂದು ಮಾಜಿ ಹಣಕಾಸು ಮಂತ್ರಿ ಚಿದಂಬರಂ ಹಾಲಿ ಹಣಕಾಸು ಮಂತ್ರಿ ಯಶವಂತ ಸಿನ್ಹಾರಿಗೆ ಹೇಳಿದ್ದಾರೆ. ಈ ಚಿಂದಬರಂಗಳ ಶಬ್ದಕೋಶದಲ್ಲಿ 'ಜನಗಳು' ಎಂದರೆ ಯಾರಿರಬಹುದು? ಉತ್ತರ ಪ್ರದೇಶದ ವಿದ್ಯುತ್ ಮಂಡಳಿಯ ಖಾಸಗೀಕರಣದ ವಿರುದ್ಧ ಹಂಗುತೊರೆದು ಹೋರಾಡಿದ ಅಲ್ಲಿಯ ವಿದ್ಯುತ್ ಕಾರ್ಮಿಕರು 'ಜನಗಳು' ಅಲ್ಲವೇ? ಅವರು ತಮ್ಮ ಸಂಬಳ, ಬೋನಸ್‌ಗಾಗಿ ಹಲವು ದಿನಗಳವರೆಗೆ ಸರಕಾರದ ದಮನ ಎದುರಿಸಿದವರೇ? ಸೇಲಂ ಉಕ್ಕು ಸ್ಥಾವರದ ಮಾರಾಟದ ವಿರುದ್ಧ ಹೋರಾಡುತ್ತಿರುವ ಕಾರ್ಮಿಕರು 'ಜನಗಳು' ಅಲ್ಲವೇ? ಬಂದರು ಮುಷ್ಕರದಲ್ಲಿ, ಫೆಬ್ರವರಿ 2 ರ ಸಾರ್ವಜನಿಕ ವಲಯದ ಮುಷ್ಕರದಲ್ಲಿ ಭಾಗವಹಿಸಿದ ಲಕ್ಷಾಂತರ ಕಾರ್ಮಿಕರು 'ಜನಗಳು' ಎಂಬ ಪದದ ವ್ಯಾಪ್ತಿಗೆ ಬರುವುದಿಲ್ಲವೇ? ಜಮ್ಮು-ಕಾಶ್ಮೀರ, ರಾಜಸ್ತಾನದ ಸರ್ಕಾರಿ ನೌಕರರು 'ಜನ'ರಲ್ಲವೇ? ಹೋಗಲಿ, ಮೊನ್ನೆ-ಮೊನ್ನೆ ನವದೆಹಲಿಯ ಸಂಸತ್ ಮಾರ್ಗದಲ್ಲಿ ಲಕ್ನೌನ ವಿಧಾನಸಭೆಯ ಎದುರು ಪೋಲೀಸರ ಜಲಪ್ರಹಾರ, ಲಾಠಿ ಪ್ರಹಾರಗಳನ್ನು ಎದುರಿಸಿದ ವಕೀಲರೂ 'ಜನ'ಗಳಲ್ಲವೇ? ನಿಜ ಸಂಗತಿಯೆಂದರೆ, ಇವರೆಲ್ಲಾ ಜನಗಳಲ್ಲಿ ವ್ಯಾಪಕವಾಗುತ್ತಿರುವ ಭಾವನೆಗಳನ್ನು ಪ್ರತಿನಿಧಿಸಿದ್ದಾರೆ. ಜನಗಳು ಚಿದಂಬರಂಗಳ, ಸಿನ್ಹಾಗಳನ್ನು ಸಂತುಷ್ಟರಾಗಿರಲು ಯಾವುದೇ ಅವಕಾಶ ನೀಡುವುದಿಲ್ಲ. ಇದು ವಾಸ್ತವತೆ. 'ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ'ಯ ಅಖಿಲ ಭಾರತ ಸಮಾವೇಶ, ನಂತರ ಕರ್ನಾಟಕವೂ ಸೇರಿದಂತೆ ಎಲ್ಲಾ ರಾಜ್ಯಗಳಲ್ಲಿ ನಡೆಯುತ್ತಿರುವ ಸಮಾವೇಶಗಳು, ಮಾರ್ಚ್ 9 ರ ಬೃಹತ್ 'ಸಂಸತ್ ಚಲೋ'ಗೆ ನಂತರ ಮೇ ತಿಂಗಳಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಸಿದ್ಧತೆ ಇವೆಲ್ಲಾ ಕಣ್ಣಿರುವ ಎಲ್ಲರಿಗೂ ಸಾಕಷ್ಟು ಸಂಕೇತಗಳನ್ನು ನೀಡಿವೆ.

ಮುಂದಿನ ದಾರಿ ಸುಲಭವಲ್ಲ

ಮುಂಬರುವ ದಿನಗಳು ಬಹಳ ನಿರ್ಣಾಯಕ. ಕೋಮುವಾದಿ ಶಕ್ತಿಗಳು ಜನಗಳನ್ನು ಒಡೆಯಲು ತಮ್ಮ ಕೈಲಾದುದನ್ನೆಲ್ಲಾ ಮಾಡಲಿವೆ. ಇನ್ನೊಂದೆಡೆ ಬಿಜೆಪಿಯ ಮಿತ್ರರು ಈ ಬಗ್ಗೆ ಭಿನ್ನಾಭಿಪ್ರಾಯ ಹೊಂದಿದ್ದರೂ ಉದಾರೀಕರಣ-ಜಾಗತೀಕರಣದ ಪರವಾಗಿದ್ದಾರೆ. ಪೂರ್ವ ಏಶ್ಯಾ, ದಕ್ಷಿಣ-ಪೂರ್ವ ಏಶ್ಯಾದ ಅನುಭವವೂ ಅವರ ಕಣ್ಣು ತೆರೆಸಿದಂತಿಲ್ಲ.

ಇಂತಹ ಸನ್ನಿವೇಶದಲ್ಲಿ ಮುಂಬರುವ ಹೋರಾಟಗಳು ಸುಲಭವಾದದ್ದೇನಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಎಚ್ಚರಿಸಿದ್ದಾರೆ. ಜನಗಳಲ್ಲಿ ಹೆಚ್ಚುತ್ತಿರುವ ಅಸಂತೃಪ್ತಿಯನ್ನು ಪ್ರಜಾಸತ್ತಾತ್ಮಕ ದಾರಿಯಲ್ಲಿ ಕ್ರೋಢೀಕರಿಸದಿದ್ದರೆ ಅದು ವಿಚ್ಛಿದ್ರಕಾರಿ ದಾರಿ ಹಿಡಿಯುವ ಅಪಾಯವಿದೆ. ಆಗ ಸಾಮ್ರಾಜ್ಯಶಾಹಿ ಶಕ್ತಿಗಳು ಭಾರತವನ್ನು ತಮ್ಮ ತೆಕ್ಕೆಯೊಳಗೇ ಸೆಳೆದು ತಮ್ಮ ಕಬಂಧ ಬಾಹುಗಳಲ್ಲಿ ಜರ್ಝರಿತಗೊಳಿಸುವ ಅಪಾಯವೂ ಇದೆ. ಸಹಜವಾಗಿಯೇ, ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳು, ಸಾಮೂಹಿಕ ಸಂಘಟನೆಗಳು, ಪ್ರಗತಿಪರ ವ್ಯಕ್ತಿಗಳು, ರಾಜಕೀಯೇತರ ಸಂಘಟನೆಗಳು ಕೂಡಾ ಮುತುವರ್ಜಿ ವಹಿಸಿ ಜನಗಳ ಬದುಕನ್ನು ಮತ್ತು ದೇಶದ ಭವಿಷ್ಯವನ್ನು ರಕ್ಷಿಸಲು ಕೋಟ್ಯಂತರ ಜನಗಳನ್ನು ಅಣಿನೆರೆಸಬೇಕಾಗಿದೆ. ಇದರಲ್ಲಿ ಕ್ಷಣ ಮಾತ್ರದ ವಿಳಂಬವೂ ಅಪಾಯಕಾರಿ ಎಂದು ಸುರ್ಜಿತ್ ಎಚ್ಚರಿಸಿದ್ದಾರೆ.

ಮಾರ್ಚ್ 9 ರಂದು ಕಾರ್ಮಿಕರ, ರೈತರ, ಕೃಷಿಕೂಲಿಕಾರರ, ಮಹಿಳೆಯರ, ವಿದ್ಯಾರ್ಥಿ ಯುವಜನ, ಸಂಘಟನೆಗಳು ಸಂಘಟಿಸುತ್ತಿರುವ ಮಾರ್ಚ್ 9 ರ 'ಸಂಸತ್ ಚಲೋ' ಒಂದು ಬೃಹತ್ ಸಾಮೂಹಿಕ ಕಾರ್ಯಾಚರಣೆಯಾಗಲಿರುವ ಸಂಕೇತಗಳು ಸಿಗುತ್ತಿವೆ. ಆದರೆ ಇದು ಭವಿಷ್ಯದಲ್ಲಿ ಇನ್ನಷ್ಟು ವ್ಯಾಪಕವಾದ, ಸಮರಶೀಲವಾದ ಸಾಮೂಹಿಕ ಕಾರ್ಯಾಚರಣೆಗಳ ಹರಿಕಾರನಾಗುತ್ತದೋ ಕಾದು ನೋಡಬೇಕು ಎಂದು ಸುರ್ಜಿತ್ ಹೇಳಿದ್ದಾರೆ.

ಚಿದಂಬರಂ ಸಿನ್ಹಾಗಳಿಗೆ ಸುರ್ಜಿತ್ ಪ್ರಶ್ನೆ

ಇತ್ತೀಚೆಗೆ 'ಇಂಡಿಯನ್ ಎಕ್ಸ್‌ಪ್ರೆಸ್' ನ ವೆಬ್‌ಸೈಟ್‌ನ ಸಂದರ್ಶನದಲ್ಲಿ ಸಂಯುಕ್ತ ರಂಗ ಸರ್ಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಪಿ.ಚಿದಂಬರಂ ದೇಶದ ಆರ್ಥಿಕರೋಗಗಳಿಗೆ ಒಂದು ವಿಚಿತ್ರ ಪಥ್ಯದ ಸಲಹೆ ಮಾಡಿದ್ದಾರೆ - "ಮುಂದಿನ ಮೂರು ವರ್ಷಗಳಲ್ಲಿ ಕನಿಷ್ಠ ರೂ. 1,00,000 ಕೋಟಿ ರೂ.ಗಳನ್ನು ಖಾಸಗೀಕರಣದ ಮೂಲಕ ಎತ್ತಿ ಅಷ್ಟು ಸಾರ್ವಜನಿಕ ಸಾಲವನ್ನು ತೀರಿಸಿ" ಸರಿ, ಇಂದು ಸಾರ್ವಜನಿಕ ಫಲಕಗಳನ್ನೆಲ್ಲಾ ಮಾರಿದ ಮೇಲೆ ಮುಂದೆ ಹೆಚ್ಚುವ ಸಾಲವನ್ನು ತೀರಿಸಲು ಏನನ್ನು ಮಾರೋಣ ಎಂಬ ಸರಳ ಪ್ರಶ್ನೆ ಈ ಮಾಜಿ ಹಣಕಾಸು ಮಂತ್ರಿಯ ತಲೆಗೆ ಬಂದಿಲ್ಲ, ಉದಾರೀಕರಣವಾದಿಗಳಾರಿಗೂ ಬಂದಿಲ್ಲ.

ಇರಲಿ, ಇವರ ಪರಮಮಿತ್ರರಾದ ದೇಶದ ದೊಡ್ಡ ಉದ್ದಿಮೆದಾರರು ರಾಷ್ಟ್ರೀಕೃತ ಬ್ಯಾಂಕುಗಳ 50 ಸಾವಿರ ಕೋಟಿ ಸಾಲ ತೀರಿಸಬೇಕಾಗಿದೆಯಲ್ಲ, ಅದನ್ನು ತಮ್ಮ ಕಾರ್ಖಾನೆಗಳನ್ನು ಮಾರಿ ತೀರಿಸಿ ಎಂದು ಈ ಜನ ಏಕೆ ಸಲಹೆ ಮಾಡುವುದಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಪ್ರಶ್ನಿಸಿದ್ದಾರೆ. ಏಕೆಂದರೆ ಈ ಚಿದಂಬರಂಗಳು, ಸಿನ್ಹಾಗಳ ಬಾಯಿಂದ ಬರುತ್ತಿರುವುದು ಐಎಂಎಫ್-ವಿಶ್ವಬ್ಯಾಂಕ್ ಬ್ರಾಂಡಿನ ಸೂಕ್ತಿಗಳಷ್ಟೇ ಎಂದು ಅವರು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಬರೆದ ಲೇಖನವೊಂದರಲ್ಲಿ ವ್ಯಂಗ್ಯವಾಗಿ ಹೇಳಿದ್ದಾರೆ.

ಕಥೆ

ಕಳೆದ ವಾರ..........ಗಿರಿಜನ ಬುಡಕಟ್ಟಿನ ಗ್ವೆಲ್ಲಿಟ್ ಕೆಲಸ ಮಾಡುತ್ತಿದ್ದ ಜಾನುವಾರು ಕೇಂದ್ರದ ಬಿಳಿ ಒಡೆಯ ಅವನ ಹೆಂಡತಿಯ ಮೇಲೆ ಮಾಡಿದ ಅತ್ಯಾಚಾರದ ಫಲವಾಗಿ ಹುಟ್ಟಿದ ಕೂಸು 'ಎನ್ ಗೂಲ' ಆ ಕೂಸಿನ ತಾಯಿ ಹಾಗೂ ಇಡೀ ಬುಡಕಟ್ಟು ಆ ಮಗುವನ್ನು ಉಪೇಕ್ಷಿಸಿದರೂ ತನ್ನದಲ್ಲದ ಆ ಮಗುವನ್ನು ಪ್ರೀತಿಯಿಂದ ಸಲಹುತ್ತಾನೆ ಗ್ವೆಲ್ಲಿಟ್.......... ಮುಂದೆ ಓದಿ

ಎನ್'ಗೂಲಾ

ಕೆಥರಿನ್ ಸುಸನ್ನ ಪ್ರಿಚರ್ಡ್ (ಆಸ್ಟ್ರೇಲಿಯ)

ಗ್ವೆಲ್ಲಿಟ್ ಈ ಹೆಂಗಸಿನೊಡನೆ ಸುಖ ಸಂತೃಪ್ತಿಯ ದಿನಗಳನ್ನೇ ಕಳೆದಿದ್ದ. ಇವಳನ್ನು ಗೆದ್ದುಕೊಳ್ಳಲು ಗ್ವೆಲ್ಲಿಟ್ ಭಲ್ಲೆ, ಭರ್ಜಿಗಳನ್ನೆಸೆಯುವುದನ್ನು ಇನ್ನೂ ಕಲಿತುಕೊಳ್ಳುತ್ತಿದ್ದಾಗ ಈಕೆ ಇನ್ನೂ ಚಿಕ್ಕವಳಾಗಿದ್ದಳು. ಹುಡುಗಿ ಹುಡುಗಿಯಾಗಿದ್ದಳು. ಪ್ರಾಯಕ್ಕೆ ಬಂದಾಗ ಚೆಲುವೆಯೇ ಅವಳು. ಇನ್ನೊಂದು ಬುಡಕಟ್ಟಿನ ತರುಣನಿಗೆ ಆಶ್ವಾಸನೆಯಿತ್ತಿದ್ದ ಇವಳನ್ನು ಗ್ವೆಲ್ಲಿಟ್ ಹೋರಾಟದ ಮೂಲಕ ಗೆದ್ದುಕೊಂಡಿದ್ದ. ತನ್ನ ಕುಲದ ಬಗ್ಗೆ ಶ್ರದ್ಧೆ ಮತ್ತು ತನ್ನಲ್ಲೂ ಆಕೆ ಇಟ್ಟಿದ್ದ ನಿಷ್ಠೆಯ ಬಗ್ಗೆ ಗ್ವೆಲ್ಲಿಟ್‌ನಲ್ಲಿ ಎಂದೂ ಸಂದೇಹಕ್ಕೆಡೆಯಿರಲಿಲ್ಲ. ಆದರೆ ಆತನಿಗೆ ಅತ್ಯಂತ ಜುಗುಪ್ಸೆ ಬೇಸರ ತಂದುದೆಂದರೆ ತಾನು ಇಷ್ಟು ದಿನ ಯಾರ ಸೇವೆಯನ್ನು ಪ್ರಾಮಾಣಿಕವಾಗಿಯೂ ಶ್ರದ್ಧೆಯಿಂದಲೂ ಮಾಡಿದ್ದೇನೋ ಅದೇ ಮನುಷ್ಯ ತಮ್ಮ ಜೀವನದಲ್ಲಿ ವಿರಸವನ್ನು ಹರಡಿದ್ದ. ಗೊಂದಲವನ್ನು ತುಂಬಿದ್ದ.

"ಮಗು ಬದುಕುವುದಿಲ್ಲ, ಎಂದು ಮಿಟ್ಟೂನ್ ಸಿಡಿಮಿಡಿಗೊಂಡು ನುಡಿದಳು." ಮುದುಕ ಗೋಳಾಡುತ್ತ ಹೇಳಿದ. "ನಾನು ಬಿಳಿಯನ ಬಲವಂತಕ್ಕೊಳಗಾದೆ ಎಂಬುದನ್ನು ನಮ್ಮ ಜನರು ತಿಳಿದುಕೊಳ್ಳಬೇಕು ಮತ್ತು ಏನಾಗಿ ಹೋಯಿತೆಂಬುದನ್ನು ಮರೆತುಬಿಡಬೇಕು."

ತೊಟ್ಟಿಲಿನಲ್ಲಿದ್ದ ಆ ನವಜಾತ ಶಿಶುವನ್ನು ನಿಟ್ಟಿಸುತ್ತ ಗ್ವೆಲ್ಲಿಟ್ ನಿಂತಿದ್ದ. ಹಳದಿಯ ಮೆರುಗು ಇದ್ದ ಕಂದುವರ್ಣದ ಪುಟ್ಟ ಮಗು. ಕೋಮಲವಾದ ಕೈ ಕಾಲು ಬೆರಳುಗಳು, ನಿದ್ರೆ ಹೋದ ಕಣ್ಣುಗಳ ಮೇಲೆ ವಿರಮಿಸಿದ್ದ ಕಪ್ಪು ಕಣ್ಣೆವೆಗಳು. ಆತನಿಗೆ ನೆನಪಾಯಿತು. ತಾನು ಕೂಡ ಹೀಗೆ ಒಂದು ಪುಟ್ಟ ಪ್ರಾಣಿಯಾಗಿದ್ದೆ, ಇದರಂತೆಯೇ ನಿಸ್ಸಹಾಯಕ! ಆಗ ಆತನ ಕೋಪವೆಲ್ಲ ಕರಗಿಹೋಯಿತು.

"ಅದು ನನ್ನ ಮಗಳು. ಚೆನ್ನಾಗಿ ನೋಡಿಕೊ" ಎಂದು ಮುದಿ ಹೆಂಗಸರಿಗೆ ಹೇಳಿ ಹೊರಟುಹೋದ.

ಆತ ಹೇಳಿದ ಮಾತಿನ ಅರ್ಥವೇನೆಂಬುದು ಅವರಿಗೆ ಗೊತ್ತೇ ಇತ್ತು. ತನ್ನ ಹೆಂಗುಸಿನ ಹೊಟ್ಟೆಯಲ್ಲಿ ಹುಟ್ಟಿದ ಯಾವ ಕೂಸೂ ತನ್ನದೆಂದು ಹೇಳಿಕೊಳ್ಳುವ ಹಕ್ಕು ಗಂಡಸಿಗೆ ಇದ್ದೇ ಇದೆಯಲ್ಲ. ಗ್ವೆಲ್ಲಿಟ್‌ನ ಆಜ್ಞೆಯನ್ನು ಮೀರಿ ನಡೆಯುವ ಧೈರ್ಯ ಮಾತ್ರ ಅವರಿಗೆ ಬಾರಲಿಲ್ಲ.

ಆತನ ನಿರ್ಧಾರವನ್ನು ಕೇಳಿ ಮಿಟ್ಟೂನ್ ಕೋಪ ತಪ್ತಳಾದಳು. ಮಗುವಿನ ಬಗ್ಗೆ ಯಾವೊಂದು ಕಾಳಜೀ ಮಾಡಲೂ ಅವಳು ತಯಾರಿರಲಿಲ್ಲ. ಅವಳ ಮೊಲೆಗಳಲ್ಲಿ ಹಾಲು ತುಂಬಿಕೊಂಡು ಭಾರವಾದವು. ಆದರೂ ಆಕೆ ಮಗುವಿಗೆ ಹಾಲುಣಿಸಲಿಲ್ಲ.

ಗ್ವೆಲ್ಲಿಟ್. ದಿನದ ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಬಂದಾಗ ಮಿಟ್ಟೂನ್ ಗುಡಿಸಲಿನ ಅಂಗಳದಲ್ಲಿ ಹೊರಗೆ ಕುಳಿತಿರುವುದನ್ನು ಕಾಣುತ್ತಿದ್ದ. ಒಳಗಡೆ ಮಗು ಒಂದೇ ಸಮನೆ ಅಳುತ್ತಿರುವುದನ್ನು ಕೇಳುತ್ತಿದ್ದ. ಆತ ಬಂದವನೇ ಮಗುವಿನ ಮೈ ತೊಳೆದು ಮಿಟ್ಟೂನ್ ಹಾಲುಣಿಸುವಂತೆ ಕಾದು ನಿಲ್ಲುತ್ತಿದ್ದ.

ನಿತ್ಯ ಕರ್ಮವಾಗಿ ಪ್ರತಿದಿನ ಸಂಜೆ ಮುಂಜಾವುಗಳಲ್ಲಿ ಇದನ್ನು ಆತ ಮಾಡೇ ಮಾಡುತ್ತಿದ್ದ. ಪ್ರತಿದಿನ ಸಂಜೆ ಮುಂಜಾವುಗಳಲ್ಲಿ ಮಗುವಿನ ಬಗ್ಗೆ ಇಬ್ಬರಲ್ಲೂ ಜಗಳ ನಡೆದೇ ನಡೆಯುತ್ತಿತ್ತು.

ಆತ ಮಗುವನ್ನು "ಎನ್'ಗೂಲ" ಎಂದು ಕರೆದ. ಯಾಕೆಂದರೆ ಬೌಜರಾ ಪ್ರದೇಶದ ಕೆರೆತೊರೆಗಳ ತೀರದಲ್ಲಿ ಬೆಳೆದಿರುತ್ತಿದ್ದ, ಕಂದು ಪೀತ ವರ್ಣಶೋಭಿತ ಕಿರು ಕುಸುಮಗಳಂತೆ ಆಕೆ ತೋರುತ್ತಿದ್ದಳು.

ಎನ್'ಗೂಲಳನ್ನು ಸರಿಯಾಗಿ ನೋಡಿಕೊಳ್ಳದಿದ್ದರೆ ಅವಳೊಡನೆ ಮನೆಬಿಟ್ಟು ಹೋಗಿ ಬೇರೆ ಹೆಂಗಸಿನೊಡನೆ ಸಂಸಾರ ಮಾಡುವುದಾಗಿ ಗ್ವೆಲ್ಲಿಟ್ ಹೆಂಡತಿಗೆ ಎಚ್ಚರಿಕೆ ನೀಡಿದ.

ಆದರೆ ಮರುದಿನ ಆತ ನಿತ್ಯ ಕೆಲಸವನ್ನು ಮುಗಿಸಿಕೊಂಡು ಬಂದಾಗ ಸಂಜೆ ಮಗಳು ಅಳುವುದೇನೂ ಕೇಳಿಸಲಿಲ್ಲ. ಮಿಟ್ಟೂನಳು ಮಾತ್ರ ಎಂದಿನಂತೆ ಅಂಗಳದಲ್ಲೇ ಕುಳಿತಿದ್ದಳು -ಖಿನ್ನವದನಳಾಗಿ.

ಗ್ವೆಲ್ಲಿಟ್ ಗುಡಿಸಲೊಳಗೆ ಪ್ರವೇಶಿಸಿ ತೊಟ್ಟಿಲಲ್ಲಿ ಹಣಿಕಿಕ್ಕಿದ. ತೊಟ್ಟಿಲು ಬರಿದಾಗಿತ್ತು.

"ಎನ್'ಗೂಲ ಎಲ್ಲಿ?" ಭಯಗ್ರಸ್ಥನಾದ ಗ್ವೆಲ್ಲಿಟ್ ಕೇಳಿದ. ಅದೇ ಭಾವನೆ ಮುದುಕನಲ್ಲಿ ಕಂಪನಗಳನ್ನು ಹುಟ್ಟಿಸಿದುದನ್ನು ಕಾಣಬಹುದಾಗಿತ್ತು.

"ಗೆದ್ದಲು ಹುಳುಗಳ ಬಳಿ ಆಕೆಯಿದ್ದಾಳೆ" ಮಿಟ್ಟೂನ್ ನಿಧಾನವಾಗಿ ಹೇಳಿದಳು. "ಆ ಪೀತಪಿಂಡ ಇನ್ನು ನನ್ನನ್ನು ಅವಮಾನಗೊಳಿಸುವಂತಿಲ್ಲ."

ಗ್ವೆಲ್ಲಿಟ್ ಕೋಪತಪ್ತನಾಗಿ ಆಕೆಯ[illegible] ಹಿಡಿದೆಳೆದು ಆರ್ಭಟಿಸಿದ. "ಎಲ್ಲಿಟ್ಟಿರ[illegible] ಹೇಳುವಿಯೋ ಇಲ್ಲವೋ?"

ಮಿಟ್ಟೂನ್ ಹೇಳಲಿಲ್ಲ. ಆತನ ಹೊಡೆತಗ[illegible] ತಿಂದು ಅಂಜಿ ನಡಗುವವರೆಗೂ, [illegible] ಹೊರಚಿಮ್ಮುವವರೆಗೂ ಆಕೆ ಬಾಯಿ ಬಿಡಲಿ[illegible] ಅನಂತರ ಅರಚಿಕೊಂಡಳು.

"ಅಲ್ಲಿ, ಆ ಗೆದ್ದಲು ಹುಳುಗಳ ಹುತ್ತ[illegible] ಮಧ್ಯೆ.... ಆ ಬಂಡೆಗಲ್ಲಿನ ಬಳಿಯಲ್ಲಿ..."

ಸಂಜೆಯಾಗಿ ಕತ್ತಲಿಳಿಯುತ್ತಿದ್ದರೂ ಗ್ವೆ[illegible] ತತ್‌ಕ್ಷಣವೇ ಹತ್ತು ಮೈಲಿ ದೂರದಲ್ಲಿದ್ದ[illegible] ಬಂಡೆಗಲ್ಲಿನೆಡೆಗೆ ಧಾವಿಸಿ ಓಡತೊಡಗಿದ. ಆ [illegible] ಪ್ರದೇಶದ ಕಲ್ಲು ಮುಳ್ಳುಗಳ ಪರಿವೆಯಿಲ್ಲದೆ[illegible] ಓಡಿಯೇ ಓಡಿದ. ಆತನ ಮಿದುಳು ಸಿಡಿಯುತ್ತಿ[illegible] ಏದುಸಿರುಬಿಡುತ್ತಿದ್ದ. ಬಂಡೆಗಲ್ಲು ಹತ್ತಿರವಾದ[illegible] ಅದರ ಸುತ್ತಮುತ್ತಲು ಗೆದ್ದಲು ಹುಳುಗಳ ಹುತ್ತ[illegible] ಹೆಂಟೆಗಳು ಹರವಿ ಹಬ್ಬಿಕೊಂಡಿರುವು[illegible] ಗೋಚರಿಸಿತು.

(ಮುಂದುವರಿಯುವು[illegible])

ಮಹಾನ್ ಸಿನೇಮಾಗಳು

'ಸೈಕಲ್ ಕಳ್ಳರು'

ಕಟುವಾಸ್ತವದ ಅತ್ಯುತ್ತಮ ಚಿತ್ರಣ

(ಕಳೆದವಾರದಿಂದ ಮುಂದುವರೆದುದು)

'ಸೈಕಲ್ ಕಳ್ಳರು' ಕಥಾವಸ್ತು

ಆಗಷ್ಟೇ ಯುದ್ಧ ಮುಗಿದಿದೆ; ದೇಶ ವಿನಾಶಗೊಂಡು ಬದುಕು ದಾರುಣವಾಗಿದೆ; ಜನರಿಗೆ ಉದ್ಯೋಗ ಸಿಕ್ಕುವುದೂ ದುಸ್ತರವಾಗಿದೆ. ಜೀವನ ನಿರ್ವಹಣೆಗಾದರೂ ಒಂದು ಉದ್ಯೋಗ ಸಿಕ್ಕೀತೆ ಎಂದು ಪರದಾಡುತ್ತಿರುವ ಅಸಂಖ್ಯಾತ ಜನರಲ್ಲಿ ಅಂಟೋನಿಯೋ ಒಬ್ಬ. ಹುಡುಕಿ ಹುಡುಕಿ ಕಡೆಗೆ ಅಂಟೋನಿಯೋಗೆ ಒಂದು ಕೆಲಸ ಸಿಗುತ್ತದೆ. ಪೋಸ್ಟರ್ ಅಂಟಿಸುವ ಕೆಲಸ. ಆದರೆ ಆ ಕೆಲಸ ವಹಿಸಿಕೊಳ್ಳಲು ಈತ ಒಂದು ಸೈಕಲ್ ಹೊಂದಿರತಕ್ಕದ್ದು ಎಂಬುದು ನಿಯಮ. ಅಂಟೋನಿಯೋ ತನ್ನ ಸೈಕಲ್ಲನ್ನು ಈಗಾಗಲೇ ಅಡವಿಟ್ಟಿದ್ದಾನೆ. ಹೆಂಡತಿ ಮರಿಯಾಳಿಗೆ ವಿಷಯ ತಿಳಿಸುತ್ತಾನೆ. ಆಕೆ, ತಮ್ಮ ಮದುವೆಯ ಉಡುಗೊರೆಯಾಗಿ ಬಂದ, ಈತನಕ ಅಮೂಲ್ಯವೆಂದು ಕಾಪಾಡಿಕೊಂಡಿದ್ದ ಬೆಲೆ ಬಾಳುವ ವಸ್ತ್ರವನ್ನು ಅಡವಿಟ್ಟು ಸೈಕಲ್ ಬಿಡಿಸಿಕೊಳ್ಳಲು ಸೂಚಿಸುತ್ತಾರೆ. ಅಮೂಲ್ಯವಾದ ವಸ್ತು ಕೈಬಿಟ್ಟರೂ ಸೈಕಲ್ ಸಿಕ್ಕು ಅಂಟೋನಿಯೋ ಕೆಲಸಕ್ಕೆ ಸೇರಿಕೊಳ್ಳಲು ಸಾಧ್ಯವಾಗುತ್ತದೆ. ಈ ಮಧ್ಯೆ ಭವಿಷ್ಯಕಾರ್ತಿಯೊಬ್ಬಳು ಮರಿಯಾಗೆ ಭವಿಷ್ಯದ ಬಗ್ಗೆ ಧೈರ್ಯ ಹುಟ್ಟಿಸುತ್ತಾಳೆ.

ಅಂಟೋನಿಯೋ ತನ್ನ ಪುಟ್ಟ ಮಗು ಬ್ರುನೋನ್ನು ಕರೆದುಕೊಂಡು ಕೆಲಸಕ್ಕೆ ಹೊರಡುತ್ತಾನೆ. ಅದಿನ್ನೂ ಕೆಲಸದ ಮೊದಲನೇ ದಿನ. ತನ್ನ ಪುಟ್ಟ ಮಗನನ್ನು ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕೆ ಬಿಟ್ಟು, ಜತೆಗಾರನೊಬ್ಬನ ನಿರ್ದೇಶನದ ಪ್ರಕಾರ ಪೋಸ್ಟರ್ ಅಂಟಿಸಲು ತೊಡಗುತ್ತಾನೆ. ಆದರೆ ಅಷ್ಟರಲ್ಲಿ ಯಾರೋ ಕಳ್ಳರು ಅವನ ಸೈಕಲ್ ಕದ್ದುಬಿಡುತ್ತಾರೆ. ಹಿಡಿಯಲು ಯತ್ನಿಸಿ ಸೋಲುತ್ತಾನೆ. ಆಮೇಲೆ ತನ್ನ ಸ್ನೇಹಿತ ಬಯಾಸ್ಸಿಯೋನ ಹತ್ತಿರ ಹೋಗುತ್ತಾನೆ. ಸೈಕಲ್ ಹುಡುಕುವ ಬಗ್ಗೆ ಅವನ ನೆರವನ್ನು ಪಡೆದುಕೊಳ್ಳಲು.

ಭಾಗ-2

ಸ್ನೇಹಿತರ ಸಹಾಯದೊಂದಿಗೆ ಸೈಕಲ್ ಪತ್ತೆ ಹಚ್ಚಲು ಹೊರಡುತ್ತಾನೆ ಅಂಟೋನಿಯೋ - ತನ್ನ ಪುಟ್ಟ ಮಗನನ್ನೂ ಕರೆದುಕೊಂಡು. ಹುಡುಕಿ ಹುಡುಕಿ ಕಡೆಗೆ ಒಬ್ಬನನ್ನು ಕಳ್ಳನೆಂಬ ಸಂಶಯದ ಮೇಲೆ ಹಿಡಿಯುತ್ತಾನೆ. ಆದರೆ ಆತ ಚಾತುರ್ಯದಿಂದ ತಪ್ಪಿಸಿಕೊಂಡುಬಿಡುತ್ತಾನೆ. ಸ್ನೇಹಿತರೂ ಅಂಟೋನಿಯೋನ ಕೈಬಿಡುತ್ತಾರೆ.

ಅಂಟೋನಿಯೋ ಮತ್ತೆ ತನ್ನ ಪುಟ್ಟ ಮಗನನ್ನು ಕಟ್ಟಿಕೊಂಡು ಹುಡುಕುತ್ತಾ ಹೊರಡುತ್ತಾನೆ. ಸುರಿಯುವ ಮಳೆಯಲ್ಲಿ ಇಬ್ಬರೇ ಹುಡುಕುತ್ತ ನಡೆಯುತ್ತಾರೆ. ಮತ್ತೊಮ್ಮೆ ಕಳ್ಳ ಸಿಕ್ಕಿದಂತಾಗಿ ತಪ್ಪಿಸಿಕೊಳ್ಳುತ್ತಾನೆ. ಒಬ್ಬ ಮುದುಕ-ಅವನಿಗೆ ಕಳ್ಳನ ಸುಳಿವು ಗೊತ್ತಿರಬೇಕೆಂದು ಶಂಕಿಸಿ ಅವನನ್ನು ಪೀಡಿಸುತ್ತಾರೆ. ಆದರೆ ಅದರಿಂದ ಪ್ರಯೋಜನವಾಗುವುದಿಲ್ಲ.

ಅಂಟೋನಿಯೋನ ಮನಸ್ಸು ಪ್ರಕ್ಷುಬ್ಧಗೊಂಡಿದೆ. ಇಂಥ ಮನಸ್ಥಿತಿಯಲ್ಲಿ ಆತ ಒಮ್ಮೆ ರೇಗಿ ಮಗನಿಗೆ ಒಂದು ಏಟು ಬಿಗಿಯುತ್ತಾನೆ. ಆ ಪುಟ್ಟ ಹುಡುಕ ಸಿಟ್ಟುಗೊಂಡು ಓಡಿಹೋಗುತ್ತಾನೆ. ಸ್ವಲ್ಪ ಹೊತ್ತಿನಲ್ಲಿ ಅಂಟೋನಿಯೋ, ಯಾರೋ ನೀರಲ್ಲಿ ಮುಳುಗಿದ್ದು ಕಂಡು ಓಡಿಹೋದ ತನ್ನ ಪುಟ್ಟ ಮಗನೇ ಇರಬಹುದೇ ಎಂದು ಕಳವಳಗೊಳ್ಳುತ್ತಾನೆ. ಆಗ ಸಾವಿನ ಎದುರಿನಲ್ಲಿ, ನಿಜವಾಗಿ ಅವನಿಗೆ ಬದುಕಿನ ಮೌಲ್ಯ ಅರ್ಥವಾಗುತ್ತದೆ. ಕೆಲವು ಹೊತ್ತಿನ ಮೇಲೆ ಮಗ ಸಿಕ್ಕುತ್ತಾನೆ. ಇಬ್ಬರೂ ರೆಸ್ಟುರಾಂಟಿಗೆ ಹೋಗಿ ಉಪಹಾರ ಕೊಳ್ಳುತ್ತಾರೆ. ಅಪ್ಪ ಮಗನ ವಿರಸ ಕೊನೆಗೊಂಡಿದೆ.

ಭಾಗ-3

ಎಷ್ಟು ಹುಡುಕಿದರೂ ಕಳ್ಳನಾಗಲೀ, ಸೈಕಲ್ ಆಗಲೀ ಸಿಕ್ಕದೆ ಹತಾಶನಾದ ಅಂಟೋನಿಯೋ ಏನಾದರೂ ಒಂದು ಪವಾಡ ನಡೆದು ತನ್ನ ಸೈಕಲ್ ಸಿಕ್ಕಿಬಿಡಬಾರದೇ ಎಂದು ಹಂಬಲಿಸುತ್ತಾನೆ. ಮತ್ತೆ ಭವಿಷ್ಯಕಾರ್ತಿಯ[illegible] ಹೋಗುತ್ತಾನೆ. ಏನು ಮಾಡಿದರೂ ಪ್ರಯೋ[illegible] ಕಾಣುವುದಿಲ್ಲ.

ಮತ್ತೆ ಹುಡುಕಾಟ ಪ್ರಾರಂಭಿಸುತ್ತಾನೆ. ಮತ್ತೂ[illegible] ಕಳ್ಳ ಸಿಕ್ಕಂತಾಗಿ ಕ್ಷಣದಲ್ಲಿ ತಪ್ಪಿಸಿಕೊಂಡುಬಿಡುತ್ತಾನೆ. [illegible] ಜನ ಕೂಡ ಅಂಟೋನಿಯೋಗೆ ವಿರುದ್ಧವಾಗಿ ನಿಲ್ಲು[illegible] ಈಗ ಆತನ ಹತಾಶೆಯ ಕೊಡ ತುಂಬಿಬಿಟ್ಟಿದೆ. ಅ[illegible] ದಿಕ್ಕು ಗಾಣದವನಾಗಿದ್ದಾನೆ.

ವಿಕ್ಷುಬ್ಧ ಮನಸ್ಥಿತಿಯಲ್ಲಿ ಅಂಟೋನಿಯೋ ತಾ[illegible] ಒಂದು ಸೈಕಲ್ ಕದಿಯುವುದೆಂದು ನಿರ್ಧರಿಸುತ್ತ[illegible] ಹೋಗಿ ಒಂದು ಸೈಕಲ್ ಕದಿಯುತ್ತಾನೆ. [illegible] ಕದಿಯುತ್ತಿರುವಾಗಲೇ ಸಿಕ್ಕಿ ಬೀಳುತ್ತಾನೆ. ಹಿಡಿದ[illegible] ಅವನನ್ನು ಪೋಲೀಸರಿಗೆ ಒಪ್ಪಿಸದೆ ಹಾಗೆ [illegible] ಕಳಿಸುತ್ತಾರೆ. ತುದಿಯಲ್ಲಿ ಅಂಟೋನಿಯೋ ಮನು[illegible] ಕರುಣೆಯ ಕೂಸಾಗಿ, ದೀನನಾಗಿ ಕ್ಷುದ್ರನಾಗಿ ನಿಲ್ಲು[illegible]

ವಿ ಟ್ಟೋರಿಯ ಡಿ ಸಿಕಾ

ರೊಸಲಿನಿಯ ಜೊತೆಗೇ ಬಂದು ಖ್ಯಾತ ಚಿತ್ರಗಳನ್ನು ನಿರ್ಮಿಸಿ ಚಲನಚಿತ್ರ ಕಲೆಯ ಈ ಹೊಸ ಹಾದಿಯನ್ನು ನಿರ್ಮಿಸಿಕೊಟ್ಟವನು ವಿಟ್ಟೋರಿಯಾ ಡಿ ಸಿಕಾ.

ಇಟಲಿ ದೇಶದಲ್ಲಿ 1902 ರಲ್ಲಿ ಹುಟ್ಟಿದ ಡಿ ಸಿಕಾ ಮ್ಯಾಜಿಸ್ಟ್ರೇಟ್ ಒಬ್ಬರ ಮಗ. ತಾನೂ ನ್ಯಾಯಶಾಸ್ತ್ರ ಕಲಿಯಲು ತೊಡಗಿ ಅನಂತರ ವಿಲಾಸಿ ರಂಗಭೂಮಿಯಲ್ಲಿ ಆಸಕ್ತಿ ತಾಳಿದ. ಕ್ರಮೇಣ ವೃತ್ತಿನಟನಾದ. ವಿನೋದ ನಾಟಕಗಳ ನಟನಾಗಿ ಖ್ಯಾತನಾದ. ಆಮೇಲೆ ಚಲನಚಿತ್ರಗಳಿಗೆ 'ಚಿತ್ರನಾಟಕ'ಗಳನ್ನು ಬರೆದ. ತಾನೇ ಚಿತ್ರ ನಿರ್ದೇಶಕನೂ ಆದ.

ಡಿ ಸಿಕಾನನ್ನು ವಿಶ್ವಖ್ಯಾತಿಗೇರಿಸಿದ ಮೊದಲ ಚಿತ್ರ SHOE SHINE ಎಂಬುದು ಅದಕ್ಕೆ ಮೊದಲು ಆತ ಏಳೆಂಟು ಚಿತ್ರಗಳನ್ನು ನಿರ್ದೇಶಿಸಿದ್ದ. THE OPEN CITY ಯ ಅನಂತರ 1945 ರಲ್ಲಿ ಬಂದ ಈ ಚಿತ್ರ ಬೂಟು ತಿಕ್ಕುವ ಚಿಕ್ಕಮಕ್ಕಳ ಬದುಕಿಗೆ ಸಂಬಂಧಿಸಿ[illegible] ಆ ಬೀದಿಯ ಮಕ್ಕಳ ಬಡತನ, ಅವರಲ್ಲಿ ಬೆ[illegible] ಅಪರಾಧಗಳು, ಅಲ್ಲಿಂದ ಅವರು ಸೇರುವ ಸೆರೆಮ[illegible] ಸೆರೆಮನೆಯ ಕ್ರೌರ್ಯ ಅವರ ಬದುಕನ್ನು ಮತ್ತ[illegible] ರೂಕ್ಷಗೊಳಿಸುವುದು-ಮುಂತಾದ್ದರ ಕಥೆ. ಇದಾದ ಮೆ[illegible] ಈತ ನಿರ್ಮಿಸಿದ್ದು (1949 ರಲ್ಲಿ) BICYLE THIVE[illegible]

ಡಿ ಸಿಕಾ ಇನ್ನೆರಡು ಮಹತ್ವದ ಚಿತ್ರಗಳು[illegible] Miracle in Milan ಮತ್ತು Umberto [illegible] ಮೊದಲನೆಯದು - ಮನೆಮಠವಿಲ್ಲದೆ ಚಳಿಗಾಳಿಗ[illegible] ಬದುಕುವ ಬಡಜನ ಅಲ್ಲಿನ ಅಧಿಕಾರಿಗಳಿಂದ ಪಡು[illegible] ಪಾಡಿನ ಕಥೆ. ಕಥೆ ಮುಕ್ತಾಯಗೊಳ್ಳುವುದು ಮ[illegible] ಪವಾಡದ ರೀತಿಯಲ್ಲಿ. ವಾಸ್ತವತೆ ಮತ್ತು ಅದ[illegible] ರಮ್ಯಗಳ ವಿಚಿತ್ರ ಮಿಶ್ರಣ ಇಲ್ಲಿ ಕಾಣುತ್ತೇವೆ. ಇನ್ನೊ[illegible] ವೃದ್ಧಾಪ್ಯದ ಏಕಾಂತವನ್ನು ಚಿತ್ರಿಸುವ ದಾರುಣ ಚಿ[illegible]

Reg.No.17015/64 KRNM/BGS-405 MAG(2)PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State [illegible]